ಸಂಪುಟ: 13 Volume | ಸಂಚಿಕೆ: 288 Issue | ಪುಟಗಳು 08 Pages | ಶನಿವಾರ 03 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಖಾಲಿ ಜೇಬು , ಹಸಿದ ಹೊಟ್ಟೆ, ಒಡೆದ ಹೃದಯ ಈ ಮೂರು ಜೀವನದಲ್ಲಿ ಅತ್ಯುತ್ತಮ ಪಾಠವನ್ನು ಕಲಿಸುತ್ತದೆ.

–ಸುಭಾಷಿತ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
ಸಂಪಾದಕರು: ರಮೇಶ ರೆಡ್ಡಿ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಜಾಗರೂಕತೆಯಿಂದ ವಾಹನ ಚಲಾಯಿಸಿ 6
ಹೊಸವರ್ಷಾಚರಣೆಯ ನಂತರ ಉಳಿದ ತ್ಯಾಜ್ಯ 7
ನಿಸ್ವಾರ್ಥದಿಂದ ಜನ ಸೇವೆ ಮಾಡಬೇಕು 8

## ಹೊರಗಿನವರಿಗೆ ಮನೆ ಹಂಚಿಕೆ ಅಸಾಧ್ಯ



**ಬೆಂಗಳೂರು:** ಅಕ್ರಮ ಬಾಂಗ್ಲಾದೇಶಿ ವಲಸಿಗರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ ಎಂಬ ಬಿಜೆಪಿ ಆರೋಪವನ್ನು ರಾಜ್ಯ ಸರ್ಕಾರ ನಿರಾಕರಿಸಿದೆ. ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು, ಕರ್ನಾಟಕದವರಲ್ಲದ ಹೊರಗಿನವರಿಗೆ ಮನೆ ಹಂಚಿಕೆ ಮಾಡಲು ಹೇಗೆ ಸಾಧ್ಯ? ಅವರು ಬಾಂಗ್ಲಾದೇಶಿಗಳಾಗಿದ್ದರೆ, ವಿರೋಧ ಪಕ್ಷಗಳು ಅದನ್ನು ಸಾಬೀತುಪಡಿಸಲಿ. ಬೇಜವಾಬ್ದಾರಿಯಿಂದ ಮಾತನಾಡಬಾರದು ಎಂದು ಹೇಳಿದ್ದಾರೆ.

## ವಾಟರ್ ಜೆಟ್ಟಿಂಗ್ ಯಂತ್ರ ಖರೀದಿ

**ಬೆಂಗಳೂರು:** ಜಿಬಿಎ ವ್ಯಾಪ್ತಿಯಲ್ಲಿ ಯಾವುದೇ ಇಲಾಖೆಯವರು ಅನುಮತಿ ಪಡೆಯದೆ ರಸ್ತೆ ಕತ್ತರಿಸಿದರೆ ದಂಡ ವಿಧಿಸುವುದರ ಜೊತೆಗೆ ಪ್ರಕರಣ ದಾಖಲಿಸಲಾಗುವುದು ಎಂದು ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಅವರು ಬೆಸ್ಕಾಂ, ಕೆಪಿಟಿಸಿಎಲ್, ಜಲಮಂಡಳಿ ಹಾಗೂ ಗೇಲ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಮಾರ್ಕ್ಸ್ ತಂತ್ರಾಂಶದ ಮೂಲಕ ಅನುಮತಿ ಪಡೆಯುವುದು ಕಡ್ಡಾಯ. ಈ ಪೈಕಿ ಯಾವುದೇ ಇಲಾಖೆಯಾಗಲಿ ಅನುಮತಿಯಿಲ್ಲದೆ ರಸ್ತೆ ಕತ್ತರಿಸುವಂತಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

## 3ರಂದು ಶ್ರೀ ಬನಶಂಕರಿ ರಥೋತ್ಸವ



**ಬೆಂಗಳೂರು:** ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ಮುಖ್ಯರಸ್ತೆಯಲ್ಲಿರುವ ಶ್ರೀ ಬನಶಂಕರಿ ಅಮ್ಮನವರ ಬ್ರಹ್ಮ ರಥೋತ್ಸವವು ಜನವರಿ 03 2026 ರಂದು ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ರಥೋತ್ಸವಕ್ಕೆ ಹಾಗೂ ದರ್ಶನಕ್ಕೆ ಆಗಮಿಸುವ ಹಿನ್ನಲೆಯಲ್ಲಿ ಪಾದಚಾರಿಗಳ ಹಾಗೂ ವಾಹನ ಸವಾರರ ಹಿತದೃಷ್ಟಿಯಿಂದ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರು ನಗರ ಸಂಚಾರ ದಕ್ಷಿಣ ವಿಭಾಗದ ಉಪ–ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.



**ಕೊಪ್ಪಳ–ಕುಕನೂರು:** ಎರಡು ಬೈಕ್ ಗಳ ನಡುವೆ ಮುಖಾಮುಖಿ ಢಿಕ್ಕಿ ಸಂಭವಿಸಿ ಇಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ಕುಕನೂರು ತಾಲೂಕಿನ ಬನಾಪುರ ಕ್ರಾಸ್ ಬಳಿ ನಡೆದಿದೆ.

## ಜನಾರ್ಧನ ರೆಡ್ಡಿಯ ದುರುದ್ದೇಶ



**ಬಳ್ಳಾರಿ:** ಮಾಜಿ ಸಚಿವ ಜನಾರ್ದನ ರೆಡ್ಡಿ ರಾಜ್ಯದ ಗಡಿ ಒತ್ತುವರಿ ಮಾಡಿ ಅಕ್ರಮ ಗಣಿಗಾರಿಕೆ ಮಾಡಿರುವ ಆರೋಪ ಕುರಿತ ವರದಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗುತ್ತಿದೆ. ಇದು ಜನರಿಗೆ ಗೊತ್ತಾಗಬಾರದು ಮತ್ತು ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮ ಯಶಸ್ವಿಯಾಗಬಾರದು ಎಂಬ ದುರುದ್ದೇಶದಿಂದ ಬಳ್ಳಾರಿಯಲ್ಲಿ ಗಲಭೆ ಸೃಷ್ಟಿಸಲಾಗಿದೆ ಎಂದು ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ ರೆಡ್ಡಿ ಆರೋಪಿಸಿದ್ದಾರೆ.

ನಮ್ಮ ಕಾರ್ಯಕರ್ತನ ಸಾವಾಗಿದೆ. ಆತನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹಿತೈಷಿಗಳು ನಿರ್ಧರಿಸಿದ್ದಾರೆ. ಹೀಗಾಗಿ ಕಾರ್ಯಕರ್ತನ ಸಾವಿನ ನಡುವೆಯೂ ಇಂದು ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದ್ದಾರೆ.

## ಬಿಜೆಪಿ ವಿರುದ್ಧ ಪ್ರಿಯಾಂಕ್ ವಾಗ್ದಾಳಿ



**ಬೆಂಗಳೂರು:** ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗೆ ಬಾಂಗ್ಲಾದೇಶದ ಆಟಗಾರನನ್ನು ಆಯ್ಕೆ ಮಾಡಿರುವ ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅವರನ್ನು ಟೀಕಿಸಿರುವ ಬಿಜೆಪಿಯನ್ನು ಸಚಿವ ಪ್ರಿಯಾಂಕ್ ಖರ್ಗೆ ದೂರಿದ್ದಾರೆ.

ಶಾರೂಕ್ ಖಾನ್ ಅವರನ್ನು ಟೀಕಿಸುವ ಬಿಜೆಪಿಯವರು ಗೃಹ ಸಚಿವ ಅಮಿತ್ ಶಾ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಮತ್ತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಈ ರೀತಿ ಕಾರ್ಯನಿರ್ವಹಿಸಲು ಏಕೆ ಅವಕಾಶ ನೀಡುತ್ತಿದ್ದಾರೆ ಎಂದು ಪ್ರಶ್ನಿಸಬೇಕು ಎಂದು ಹೇಳಿದ್ದಾರೆ.

ಐಪಿಎಲ್‌ನಲ್ಲಿ ಬಾಂಗ್ಲಾದೇಶಿ ಆಟಗಾರನನ್ನು ಸೇರಿಸಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ಇತರರನ್ನು ಟೀಕಿಸಿದ ಖರ್ಗೆ, ಎಕ್ಸ್ ಪೋಸ್ಟ್‌ನಲ್ಲಿ, ವಿದೇಶಿ ಆಟಗಾರ ಐಪಿಎಲ್‌ನಲ್ಲಿದ್ದರೆ, ಅದು ಬಿಸಿಸಿಐ ಅಥವಾ ಐಪಿಎಲ್ ನಿಯಮಗಳು ಅವರಿಗೆ ಅವಕಾಶ ನೀಡುವುದರಿಂದ ಶಾರೂಖ್ ಖಾನ್ ಅವರ ಸಹ–ಮಾಲೀಕತ್ವದ ಕೋಲ್ಕತ್ತಾ ನೈಟ್ ರೈಡರ್ಸ್ ಕಳೆದ ವರ್ಷ ಡಿ. 16 ರಂದು ಅಬುಧಾಬಿಯಲ್ಲಿ ನಡೆದ ಮಿನಿ–ಹರಾಜಿನಲ್ಲಿ ಐಪಿಎಲ್ 2026 ಗಾಗಿ ಬಾಂಗ್ಲಾದೇಶಿ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಒಪ್ಪಂದ ಮಾಡಿಕೊಂಡಿತ್ತು.

# ಬೂದಿ ಮುಚ್ಚಿದ ಕಿಡಿ ಬಳ್ಳಾರಿ

## ಎರಡು ಗುಂಪುಗಳ ನಡುವೆ ಘರ್ಷಣೆ | ಒಬ್ಬ ಬಲಿ, 144 ಸೆಕ್ಷನ್ ಜಾರಿ

• ಮಲ್ಲಮ್ಮ ನುಡಿ ವಾರ್ತೆ ಜಂಬುನಾಥ, ಬಳ್ಳಾರಿ

ಬಳ್ಳಾರಿಯಲ್ಲಿ ಮತ್ತೊಮ್ಮೆ ರಕ್ತದ ಓಕುಳಿ ಹರಿದಿದೆ. ಗುಂಡಿನ ದಾಳಿಗೆ ಕಾಂಗ್ರೆಸ್ ಕಾರ್ಯಕರ್ತ ಬಲಿಯಾಗಿದ್ದು, ಇಡೀ ನಾಡು ಇತ್ತ ತಿರುಗಿ ನೋಡುವಂತಾಗಿದೆ. ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಪೊಲೀಸರು 144 ಸೆಕ್ಷನ್ ಜಾರಿಗೊಳಿಸಿದ್ದಾರೆ.

**ಪರ ವಿರೋಧ ಪತ್ರಿಕಾಗೋಷ್ಠಿ:** ವಾಲ್ಮೀಕಿ ಮಹರ್ಷಿಯ ಪುತ್ಥಳಿ ಅನಾವರಣದ ಬ್ಯಾನರ್ ಅಳವಡಿಕೆ ಕುರಿತು ಸ್ಥಳೀಯ ಶಾಸಕ ನಾರಾ ಭರತ್‌ರೆಡ್ಡಿ, ಗಂಗಾವತಿ ಶಾಸಕ ಬಿ.ಜನಾರ್ದನ ರೆಡ್ಡಿ ಬೆಂಬಲಿಗರ ನಡುವೆ ಭಾರೀ ಸಂಘರ್ಷ ನಡೆದಿದೆ. ಈ ಬಗ್ಗೆ ಬಿ.ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಜಂಟಿಯಾಗಿ ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾರೆ. ಪ್ರತಿಯಾಗಿ ಭರತ್ ರೆಡ್ಡಿ ಕೂಡ ಪತ್ರಿಕಾಗೋಷ್ಠಿ ನಡೆಸಿ ಇರೋಧಿಗಳ ವಿರುದ್ಧ ಕಿಡಿಕಾರಿದ್ದಾರೆ.

**ನಾಡಿಗೆ ಕಾಲಿಟ್ಟ ರಕ್ತಚರಿತೆ:** ಆಂಧ್ರ ಪ್ರದೇಶದ ರಕ್ತ ಚರಿತ್ರೆ ಕರ್ನಾಟಕಕ್ಕೂ ಕಾಲಿಟ್ಟಿದೆ ಎಂದು ಪ್ರತಿಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ. ಜಿಲ್ಲಾ ಉಸ್ತುವಾರಿ ಜಮೀರ್‌ಅಹ್ಮದ್ ಖಾನ್, ಘಟನೆಯ ಸಂಬಂಧ, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವರದಿಯನ್ನು ನೀಡಿದ್ದಾರೆ.



### ಕಾಂಗ್ರೆಸ್ ನಿದ್ದೆಗೆಡಿಸಿದೆ: ವಿಜಯೇಂದ್ರ

ಘಟನೆಯ ಸಂಬಂಧ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿವೈ ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ. ಎರಡು ವಿದ್ಯಮಾನಗಳು, ಕಾಂಗ್ರೆಸ್‌ನ ನಿದ್ದೆಗೆಡಿಸಿದೆ, ಅದೇ ಈ ಸಂಘರ್ಷಕ್ಕೆ ಕಾರಣ ಎಂದು ಹೇಳಿದ್ದಾರೆ. ಜನಾರ್ದನ ರೆಡ್ಡಿಯ ನಿವಾಸದ ಬಳಿ ಸಂಘರ್ಷದ ಸುದ್ದಿ ಅರಿತ ಶ್ರೀರಾಮುಲು, ರೆಡ್ಡಿ ನಿವಾಸಕ್ಕೆ ದೌಡಾಯಿಸಿ, ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ ಎಂದು ಸ್ಮರಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣಕ್ಕೆ ಆಕ್ಷೇಪಣೆ ಇಲ್ಲ, ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣಕ್ಕೆ ನಮ್ಮ ಅಭ್ಯಂತರ ಇಲ್ಲ. ಅದು ಆಗಬೇಕೆಂಬುದು ನಮ್ಮ ಆಶಯವಾಗಿದೆ. ಪ್ರಚೋದನೆ, ಶಕ್ತಿ ಪ್ರದರ್ಶನ ಬೇಡ. ನಮ್ಮ ಮನೆಗಳ ಕಡೆಗೆ ಬಂದು ಗಲಾಟೆ ಮಾಡಿದವರು ಯಾರು, ಯಾವುದೇ ತನಿಖೆ ಮಾಡಲಿ.

–ಶ್ರೀ ರಾಮುಲು, ಮಾಜಿ ಸಚಿವ

### ಗುಂಡು ಹಾರಿಸಲು ಕಾರಣ..?

ಬಳ್ಳಾರಿಯಲ್ಲಿ ಬ್ಯಾನರ್ ಅಳವಡಿಕೆ ವಿಚಾರಕ್ಕೆ ಗಲಾಟೆ ನಡೆದಿದೆ. ಮಾಜಿ ಸಚಿವ, ಶಾಸಕ ಜನಾರ್ದನ ರೆಡ್ಡಿ ಬೆಂಬಲಿಗರು ಹಾಗೂ ಶಾಸಕ ಭರತ್ ರೆಡ್ಡಿ ಬೆಂಬಲಿಗರ ನಡುವೆ ಕಲ್ಲುತೂರಾಟವಾಗಿದೆ. ಎರಡೂ ಕಡೆಯಿಂದ ಕಲ್ಲು ತೂರಾಟ ನಡೆದಿದ್ದು, ಕೈಯಲ್ಲಿ ಕಲ್ಲು, ಕಟ್ಟಿಗೆ ಹಿಡಿದು ಗಲಾಟೆಯಾಗಿದೆ. ಗಲಾಟೆ ಜೋರಾಗುತ್ತಿದ್ದಂತೆ ಶಾಸಕ ಭರತ್ ರೆಡ್ಡಿ ಬೆಂಬಲಿಗ ಸತೀಶ ರೆಡ್ಡಿ ಖಾಸಗಿ ಗನ್‌ಮ್ಯಾನ್‌ಗಳು ಏರ್‌ಫೈರ್ ನಡೆಸಿದ್ದಾರೆ.

### ರಾಮುಲು, ರೆಡ್ಡಿ ವಿರುದ್ಧ FIR

ಗಲಭೆ ಸಂಬಂಧ ಶಾಸಕ ಎನ್. ಭರತ್ ರೆಡ್ಡಿ ಅವರ ಆಪ್ತ ಸಹಾಯಕ ಚಾನೆಲ್ ಶೇಖರ್ ನೀಡಿದ ದೂರಿನ ಮೇರೆಗೆಗ ಎಫ್‌ಐಆರ್ ದಾಖಲಿ ಸಲಾಗಿದೆ. ಜನಾರ್ದನರೆಡ್ಡಿ ಅವರನ್ನು ಮೊದಲ ಆರೋಪಿ, ಮಾಜಿ ಶಾಸಕ ಜಿ. ಸೋಮಶೇಖರರೆಡ್ಡಿ ಎರಡು, ಬಿ.ಶ್ರೀರಾಮುಲು ಮೂರು, ಪಾಲಿಕೆ ಪ್ರತಿಪಕ್ಷ ನಾಯಕ ಶ್ರೀನಿವಾಸ್ ಮೋತ್ಕರ್ ನಾಲ್ಕನೇ ಆರೋಪಿಯನ್ನಾಗಿ ಮಾಡಿದ್ದು ಎಫ್‌ಐಆರ್‌ನಲ್ಲಿ 11 ಜನರನ್ನು ಹೆಸರಿಸಲಾಗಿದೆ.

ಶಾಸಕ ನಾರಾ ಭರತ್–ರೆಡ್ಡಿ ಹಾಗೂ ಆಪ್ತ ಸತೀಶ್‌ರೆಡ್ಡಿ ಹಾಗೂ ಭರತ್ ರೆಡ್ಡಿ ತಂದೆ ನಾರಾ ಸೂರ್ಯನಾರಾಣರೆಡ್ಡಿಯಿಂದ ನನ್ನ ಹತ್ಯೆಗೆ ಸಂಚು ನಡೆದಿದೆ. ನರ್ ಗಲಾಟೆ ನೆಪದಲ್ಲಿ ನಮ್ಮ ನಿವಾಸದ ಮುಂದೆ ಗನ್ ಮ್ಯಾನ್ಗಳಿಂದ ಗುಂಡಿನ ದಾಳಿಯಾಗಿದೆ. ಪುತ್ಥಳಿ ಪ್ರತಿಷ್ಠಾಪನೆ ಹೆಸರಲ್ಲಿ ಊರಿಗೆ ಬೆಂಕಿ ಹಚ್ಚಲು ಹೊರಟಿದ್ದಾರೆ.

–ಜನಾರ್ದನರೆಡ್ಡಿ, ಶಾಸಕ

## ಸಮಗ್ರ ತನಿಖೆ ನಡೆಸಲು ಸೂಚನೆ





**ಬೆಂಗಳೂರು:** ಬಳ್ಳಾರಿಯಲ್ಲಿ ಕಳೆದ ರಾತ್ರಿ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದಾರೆ. ಇಂದು ಬೆಂಗಳೂರಿನಲ್ಲಿ ಮಾತನಾಡಿರುವ ಸಿಎಂ, ಘಟನೆ ಬಗ್ಗೆ ತನಿಖೆ ಮಾಡಲು ಗೃಹ ಇಲಾಖೆಗೆ ಸೂಚಿಸಿದ್ದೇನೆ. ಅದು ಬಿಜೆಪಿಯವರ ಗನ್ ನಿಂದ ಬುಲೆಟ್ ಹಾರಿದೆಯೇ ಇಲ್ಲ ಕಾಂಗ್ರೆಸ್ ನವರ ಗನ್ ನಿಂದ ಬುಲೆಟ್ ಹಾರಿದೆಯೇ ಎಂದು ತಿಳಿಯಬೇಕಿದೆ, ತನಿಖೆ ಮಾಡಿ ವರದಿ ನೀಡಿ ಎಂದು ಹೇಳಿದ್ದೇನೆ ಎಂದಿದ್ದಾರೆ.

ಶಾಸಕ ಭರತ್ ರೆಡ್ಡಿಯವರ ಆಪ್ತ ಸತೀಶ್ ರೆಡ್ಡಿಯವರು ಭದ್ರತೆಗೆ ಗನ್ ಇಟ್ಟುಕೊಂಡಿ–ದ್ದಾರೆ. ಗಾಳಿಯಲ್ಲಿ ಗುಂಡು ಹಾರಿಸಿದಾಗ ಕಾರ್ಯಕರ್ತ ರಾಜಶೇಖರ್ ಗೆ ತಗುಲಿ ಮೃತಪಟ್ಟಿದ್ದಾರೆ. ಗುಂಡು ಯಾರ ಬುಲೆಟ್ ನಿಂದ ಹೋಗಿದೆ ಎಂದು ಗೊತ್ತಾಗಬೇಕಿದೆ ಎಂದು ಸ್ಪಷ್ಟಪಡಿಸಿದ್ದಾರೆ.

## ನ್ಯಾಯಾಂಗ ತನಿಖೆಗೆ ನಡೆಸಬೇಕು



**ಬೆಂಗಳೂರು:** ಬಳ್ಳಾರಿಯಲ್ಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಕೊಲೆ ಮಾಡಲು ಪ್ಲ್ಯಾನ್ ಮಾಡಲಾಗಿದೆ. ಕಾಂಗ್ರೆಸ್ ಕಾರ್ಯಕರ್ತನ ಹತ್ಯೆಗೆ ಭರತ್ ರೆಡ್ಡಿಯೇ ಕಾರಣ, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ನೀಡಬೇಕು ಎಂದು ವಿಪಕ್ಷ ನಾಯಕ ಆರ್ ಅಶೋಕ್ ಆಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಳ್ಳಾರಿಯಲ್ಲಿ ಕಾಂಗ್ರೆಸ್ ಗೂಂಡಾಗಳು ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ರಾಜ್ಯವನ್ನು ಬೆಚ್ಚಿ ಬೀಳಿಸಿದೆ ಈ ಘಟನೆ. ಹೊಸ ವರ್ಷದಲ್ಲಿ ಯಾವುದೇ ಘಟನೆ ಆಗದಂತೆ ನೋಡಿಕೊಳ್ಳಿ ಎಂದು ಪೊಲೀಸ್ ಅಧಿಕಾರಿ ಸೂಚನೆ ನೀಡಿದ ಮರು ದಿನವೇ ಇಂತಹ ಘಟನೆ ಆಗಿದೆ ಎಂದರೆ ಕಾನೂನು ಸುವ್ಯವಸ್ಥೆ ತೀರಾ ಹದಗೆಟ್ಟಿದೆ ಎಂದರ್ಥ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ.

## ಸಂಪುಟ ಪುನಾರಚನೆ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಹುಬ್ಬಳ್ಳಿ



ಸಂಕ್ರಾಂತಿ ಹಬ್ಬದ ನಂತರ ಸಚಿವ ಸಂಪುಟ ಪುನಾರಚನೆ ನಡೆಯುವ ಸಾಧ್ಯತೆ ಇದ್ದು, ಶೇಕಡಾ 50ರಷ್ಟು ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡುವಂತೆ ಹೈಕಮಾಂಡ್‌ಗೆ ಒತ್ತಾಯಿಸಲಾಗಿದೆ ಎಂದು ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದ್ದಾರೆ.

ಮುಂಬರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಮತ್ತು 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಉಳಿಸಿಕೊಳ್ಳಲು ಸಹಾಯ ಮಾಡಲು, ಪಕ್ಷದ ನಾಯಕತ್ವವು ಹೊಸ ಮುಖಗಳಿಗೆ ಆದ್ಯತೆ ನೀಡಬೇಕು ಮತ್ತು ಕನಿಷ್ಠ ಶೇ. 50 ರಷ್ಟು ಹೊಸ ಮುಖಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಸಂಕ್ರಾಂತಿಯ ನಂತರ ಸಂಪುಟ ಪುನಾರಚನೆ ನಡೆಯುವ ಸಾಧ್ಯತೆಯಿದೆ ಎಂದು ಪುನರುಚ್ಚರಿಸಿದ್ದಾರೆ.

ಕಳೆದ ಎರಡು ದಶಕಗಳಿಂದ ಕಿತ್ತೂರು ಕರ್ನಾಟಕ ಪ್ರದೇಶದ ಯಾವುದೇ ಅಲ್ಪಸಂಖ್ಯಾತ ನಾಯಕರು ಸಚಿವರಾಗಿಲ್ಲ. ಅದಕ್ಕಾಗಿ ಬೇಡಿಕೆ ಇದೆ. ಈ ಬಾರಿ ನನಗೆ ಸಚಿವ ಸ್ಥಾನದ ನಿರೀಕ್ಷೆಯಿದೆ ಎಂದಿದ್ದಾರೆ.

## ಭಕ್ತರ ಹರ್ಷೋದ್ಗಾರ, ತೆಪ್ಪೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪದ ಸಂಸ್ಥಾನ ಶ್ರೀ ಗವಿಮಠ ಜಾತ್ರೋತ್ಸವ ನಿಮಿತ್ತ ಆಯೋಜಿಸಿದ್ದ ಗಂಗಾರತಿ, ತಪ್ಪೋತ್ಸವ ಕಾರ್ಯಕ್ರಮ ಶ್ರೀ ಗವಿಸಿದ್ದೇಶನ ನಾಮ ಸ್ಮರಣೆ, ಮಂತ್ರ ಘೋಷಗಳೊಂದಿಗೆ ಭಕ್ತ ಸಾಗರದ ನಡುವೆ ಸಂಪನ್ನಗೊಂಡಿದೆ. ಶ್ರೀಮಠದ ಆವರಣದಲ್ಲಿರುವ ಕೆರೆಯಲ್ಲಿ ಸಂಜೆ ನಡೆದ ಕಾರ್ಯಕ್ರಮ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿದ ತೆಪ್ಪದಲ್ಲಿ ಶ್ರೀ ಗವಿಸಿದ್ದೇಶ್ವರ ಸ್ವಾಮಿಯ ಮೂರ್ತಿಯನ್ನು ಸ್ಥಾಪಿಸಿಕೊಂಡು ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಶ್ರೀಮಠದ ಭಕ್ತರಾದ ಬಸವರಾಜ್ ಮಾಳ್ಗಿ ಚಾಲನೆ ನೀಡಿದ್ದಾರೆ. ಗವಿಸಿದ್ದೇಶ್ವರ ಮಠಾಧಿಪತಿಗಳಾದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಶ್ರೀ ಗವಿಸಿದ್ದೇಶ್ವರ ಲೀಲೆಗೆ ಕೈ ಮುಗಿಯುತ್ತಾ ತಪ್ಪೋತ್ಸವಕ್ಕೆ ವಂದಿಸಿದ್ದಾರೆ.

## ದ್ಯಾಮಾಂಬಿಕ ಜಾತ್ರಾ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಶ್ರೀ ದ್ಯಾಮಾಂಬಿಕ ಜಾತ್ರಾ ಮಹೋತ್ಸವ ನಡೆಯಲಿದ್ದು ಜಾತ್ರಾ ನಿಮಿತ್ಯ ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ದ್ಯಾಮಂಬಿಕ ಜಾತ್ರಾ ಕಮಿಟಿ ಮಂಡಲಗಿರಿ ಪತ್ರಿಕಾ ಪ್ರಕಟಣೆ ತಿಳಿಸಿದೆ. ಜಾತ್ರೆಯ ನಿಮಿತ್ಯ ಶುಕ್ರವಾರ ಬೆಳಿಗ್ಗೆಯಿಂದ ಸಹ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆದಿದ್ದು ಪ್ರಮುಖವಾಗಿ ವಿವಿಧ ಅರ್ಚಕ ಹಾಗೂ ಆಚಾರ್ಯರುಗಳಿಂದ ಹೋಮ ಅವನ ದೊಂದಿಗೆ ಶ್ರೀ ದ್ಯಾಮಾಂಬಿಕಾ ದೇವಸ್ಥಾನಕ್ಕೆ ನೂತನವಾಗಿ ಅಲಂಕೃತಗೊಂಡ ಶ್ರೀ ದೇವಿಯ ಮೂರ್ತಿಯನ್ನು 108 ಕುಂಭಮೇಳದೊಂದಿಗೆ ಬರಮಾಡಿಕೊಳ್ಳಲಾಯಿತು. ನಂತರ ಶ್ರೀ ಗಣಪತಿ ಪ್ರಾರ್ಥನೆಯೊಂದಿಗೆ ಧ್ವಜಾರೋಹಣ, ಗಣಪತಿ ಪೂಜೆ, ಪುಣ್ಯಾವಾಚನ, ಮಾತೃಪೂಜೆ ನಾಂದಿ, ರಕ್ಷಾ ಬಂಧನ, ಪಂಚಕವ್ಯ, ನವಗ್ರಹ ಪೂಜೆ, ಅಗ್ನಿ ಪ್ರತಿಷ್ಠೆ ಕಾರ್ಯಕ್ರಮ ಜರುಗಿದ್ದು ಸಾಯಂಕಾಲ ಧಾನ್ಯ ವಾಸ, ಸೇಯೋದಿವಾಸ, ಮಹಾ ಮಂಗಳಾರತಿ ಆಯೋಜಿಸಲಾಯಿತು.



## ಅರಾಜಕತೆಯನ್ನು ಸಹಿಸಲು ಸಾಧ್ಯವಿಲ್ಲ, ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮ ಖಚಿತ: ಸಿಎಂ ಸಿದ್ದರಾಮಯ್ಯ

# ನರಸಿಂಹ ಝರಣಿಯಲ್ಲಿ ನೂತನ ವರ್ಷದಂದು ಜನ ಕಲ್ಯಾಣಕ್ಕಾಗಿ ಚಂಡಿ ಹೋಮ



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ನೂತನ ವರ್ಷದ ಅಂಗವಾಗಿ ಬೀದರ್‌ನ ಪ್ರಸಿದ್ಧ ಧಾರ್ಮಿಕಕ್ಷೇತ್ರವಾದ ನರಸಿಂಹ ಝರಣಿ ದೇವಸ್ಥಾನದಲ್ಲಿ ಸತತ 5 ವರ್ಷಗಳಿಂದ ಜನ ಕಲ್ಯಾಣಕ್ಕಾಗಿ ಚಂಡಿ ಹೋಮ ವಿಶೇಷ ಕಾರ್ಯಕ್ರಮವನ್ನು ಭಕ್ತಿಭಾವ ಮತ್ತು ಉತ್ಸಾಹದಿಂದ ಹಮ್ಮಿಕೊಳ್ಳಲಾಯಿತು.

ನೂತನ ವರ್ಷವು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿಯನ್ನು ತರಲೆಂಬ ಸಂಕಲ್ಪದೊಂದಿಗೆ ಈ ಆಚರಣೆ ನಡೆಸಲಾಯಿತು.

ಕಾರ್ಯಕ್ರಮದ ವೇಳೆ ನರಸಿಂಹ ಝರಣಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಜನಕಲ್ಯಾಣ, ಲೋಕಶಾಂತಿ ಹಾಗೂ ಸಾಮಾಜಿಕ ಸಮಾನತೆಗಾಗಿ ಪ್ರಾರ್ಥನೆ ಮಾಡಿದರು.ನೂತನ ವರ್ಷವನ್ನು ಸೇವಾ ಮನೋಭಾವದೊಂದಿಗೆ ಸ್ವಾಗತಿಸಬೇಕೆಂಬ ಸಂದೇಶವನ್ನು ಈ ಸಂದರ್ಭದಲ್ಲಿ ನೀಡಲಾಯಿತು.

ಈ ಪವಿತ್ರ ಕಾರ್ಯಕ್ರಮದಲ್ಲಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಅನಂತ ರಾವ್ ಕುಲಕರ್ಣಿ, ಭೂಷಣ್ ಪಾಠಕ, ನರೇಶ್ ಪಾಠ,ಯೋಗೇಶ್ ಪಾಠಕ, ಹೇಮಂತ್ ಪಾಠಕ, ವಿಜಯಕುಮಾರ್ ಪಾಠಕ ಸೇರಿದಂತೆ ಸಂಪೂರ್ಣ ಪಾಠಕ ಕುಟುಂಬದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಕ್ತರು ಹಾಗೂ ಗಣ್ಯರು ಭಾಗವಹಿಸಿ, ನೂತನ ವರ್ಷದ ಆಚರಣೆ ಭಕ್ತಿಭಾವದಿಂದ ಹಾಗೂ ಸಾರ್ಥಕವಾಗಿ ನೆರವೇರಿತು ,

# ಭರ್ಜರಿ ಕಾರ್ಯಾಚರಣೆ 11ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾ ಜಪ್ತಿ

• **ಮಲ್ಲಮ್ಮ ನುಡಿ ವಾರ್ತೆಬೀದರ :**

ಸಂತಪುರ ಪೊಲೀಸ್ ಠಾಣೆ-ಯ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಸುಮಾರು 11 ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡು ಮೂರು ಆರೋಪಿಗಳ ವಿರುದ್ಧ ಅಪರಾಧ ಸಂಖ್ಯೆ 152/2025 ಕಲಂ (20)ಬಿ (2) ಸಿ ,29 ಅಡಿ ಎನ್ ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿ ಆರೋಪಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಔರಾದ ತಾಲೂಕಿನ ಜಂಬಗಿ (ಬಿ) ಶಿವಾರನ ಅರಣ್ಯಪ್ರದೇಶದ



ಹಂಗರಗಾ ಕ್ರಾಸ್ ಹತ್ತಿರ ಬುದುವಾರ ನೆರೆ ತೆಲಂಗಾಣ ಕಡೆಯಿಂದ ಒಂದು ಆಟೋ ಗಾಂಜಾ ಸಾಗಿಸುತ್ತಿದ್ದಾರೆ ಎಂಬಾ ಖಚಿತ ಮಾಹಿತಿ ಮೇರೆಗೆ ಭಾಲ್ಕಿ ಡಿವೈಎಸ್ಪಿ ಶಿವಾನಂದ್ ಪವಾಡಶೆಟ್ಟಿ, ಸಿಪಿಐ ರಘುವೀರ ಸಿಂಗ ಠಾಕೂರ ಸಂತಪೂರ ಪೊಲೀಸ್ ಠಾಣೆಯ ಪಿಎಸ್ ದಿನೇಶ್ ಎಂ ಟಿ, ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ 20 ಕೆಜಿ 630 ಗ್ರಾಂ ಗಾಂಜಾದ ಮೌಲ್ಯ 10ಲಕ್ಷದ 31 ಸಾವಿರದ 500ರುಪಾಯಿ ಹಾಗೂ 80 ಸಾವಿರ ರೂಪಾಯಿ ಮೌಲ್ಯದ ಒಂದು ಆಟೋ ಜಪ್ತಿ ಮಾಡಿಕೊಂಡು ಮೂವರು ಆರೋಪಿಯನ್ನು ಬಂಧಿಸಲಾಗಿದೆ,

ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಸಂತಪೂರ ಪೊಲೀಸ್ ಠಾಣೆಯ ಪಿಎಸ್ ದಿನೇಶ್ ಎಂ ಟಿ, ಎಎಸ್ ಶೇಷರಾವ್, ಸಿಬ್ಬಂದಿಗಳಾದ ಅರುಣ್ ಸಿಂಗ, ರಾಮರೆಡ್ಡಿ,ಸುಭಾಷ್ , ಗೌತಮ್, ವೆಂಕಟೇಶ್,ಕೊಟ್ರೇಶ್,ಶಿವಕುಮಾರ , ದತ್ತಾತ್ರೆ ತಂಡ ದಾಳಿಯಲ್ಲಿ ಭಾಗವಹಿಸಿದರು.

ಕಾರ್ಯಾಚರಣೆ ನಡೆಸಿದ ಅಧಿಕಾರಿ ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಅವರು ಶ್ಲಾಘನೆ ವ್ಯಕ್ತಪಡಿಸಿದರು.

# ವರ್ಗಾವಣೆಗೊಂಡಿರುವ ಹುಸೇನ್ ಅವರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಪಟ್ಟಣದ ಅಗ್ನಿಶಾಮಕ ದಳದ ಸಿಬ್ಬಂದಿ ಅಷಕ್ ಹುಸೇನ್ ಅವರು ಪ್ರಮುಖ ಅಗ್ನಿಶಾಮಕ ಹುದ್ದೆಗೆ ಮುಂಬಡ್ತಿ ಹೊಂದಿ ಕಲ್ಬುರ್ಗಿ ಅಗ್ನಿಶಾಮಕ ಠಾಣೆಗೆ ವರ್ಗಾವಣೆಗೊಂಡ ಪ್ರಯುಕ್ತ ಅವರನ್ನು ಪಟ್ಟಣದ ಸಮಾಜ

ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಶುಕ್ರವಾರ ಸನ್ಮಾನಿಸಿ ಮಾತನಾಡಿದ ಅವರು, ಅಷಕ ಹುಸೇನ್ ಅವರ ಪ್ರಾಣಿಕತೆ ಮತ್ತು ನಿಷ್ಠೆಯಿಂದ ಕೆಲಸ ಮಾಡಿದ ಪರಿಣಾಮವಾಗಿ ಅವರು ಇಂದು ಪದೋನ್ನತಿಯೊಂದಿಗೆ ವರ್ಗಾವಣೆಗೊಂಡಿರುವುದು ಸಂತಸ ತಂದಿದೆ ಎಂದರು. ಈ ಸಂದರ್ಭದಲ್ಲಿ ಅಗ್ನಿಶಾಮಕ ದಳದ ಅಧಿಕಾರಿ ನಾರಂದ, ಸುನೀಲ, ರಾಮಲಿಂಗ, ಆನಂದಕುಮಾರ್, ಅರುಣಕುಮಾರ್, ಪಿ.ಕಿರಣಕುಮಾರ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜ.4 ರಂದು ರಕ್ತದಾನ ಶಿಬಿರ

• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜ. 4 ರವಿವಾರ ರಂದು ಜಗದ್ಗುರು ನರೇಂದ್ರಚಾರ್ಯಜಿ ರಾಮಾನಂದಚಾರ್ಯ ದಕ್ಷಿಣಪೀಠ ನಾಣಿಜಧಾಮ ವತಿಯಿಂದ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿದೆ.

ರೋಗಿಗಳಿಗೆ ಮತ್ತು ಆಕಸ್ಮಿಕ ಅಪಘಾತಗಳಿಗೆ ಒಳಗಾದವರಿಗೆ ರಕ್ತವು ಬಹಳ ಅವಶ್ಯಕವಾಗಿರುತ್ತದೆ.ಇಂತಹ ರಕ್ತವು ನಾವು ದಾನ ಮಾಡುವುದರಿಂದ ರೋಗಿಗಳಿಗೆ ಜೀವ ಉಳಿಸಲು ಸಹಾಯಕವಾಗುತ್ತದೆ ಅದಲ್ಲದೆ ರಕ್ತ ದಾನಿಗಳ ಆರೋಗ್ಯವು ಚೆನ್ನಾಗಿರುತ್ತದೆ ಎಂದು ವೈದ್ಯ ವಿಜ್ಞಾನವು ಸಹ ತಿಳಿಸುತ್ತದೆ.

ಆದಕಾರಣ ಕಮಲನಗರ ಮತ್ತು ಸುತ್ತಮುತ್ತಲಿನ ಜನರು ದಿನಾಂಕ 04-01-2026 ರಂದು ಮುಂಜಾನೆ



10 ಗಂಟೆಯಿಂದ ಸಾಯಂಕಾಲ 7 ಗಂಟೆಯೊಳಗೆ ಆಗಮಿಸಿ ರಕ್ತದಾನ ಮಾಡುವಂತೆ ಜಿಲ್ಲಾ ಮೇಲ್ವಿಚಾರಕರಾದ ವಿಠಲ ಮೂಳೆ ಪ್ರಕಟಣೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿ ಅಧ್ಯಕ್ಷರಾದ ಶ್ರೀಪಾದ ಕಪ್ಪಿಕೇರಿ,ಔರಾದ ತಾಲೂಕಿನ ಅಧ್ಯಕ್ಷರಾದ ಧನರಾಜ ಬೊರಕರ,ಮಹಿಳಾ ಘಟಕದ ಅಧ್ಯಕ್ಷರಾದ ಕೋಮಲಾ ಹಾವಗೊಂಡ,ಚಾಂಡೇಶ್ವರ ಸೇವಾ ಕೇಂದ್ರ ಅಧ್ಯಕ್ಷರಾದ ಮಲ್ಲಮ್ಮಾ ಜಿಲ್ಲಾ ಸಚಿವರಾದ ಸಂಜೀವಕುಮಾರ ಟೆಕೊಳೆ,ವ್ಯವಸ್ಥಾಪಕರಾದ ರವಿಶಂಕರ ಪಟ್ನೆ,ಯುವ ಮುಖಂಡರಾದ ಬಾಲಾಜಿ ತೇಲಂಗ,ಮಹಾದೇವ ಮಡಿವಾಳ ಉಪಸ್ಥಿತರಿದ್ದರು.

"ಗರ್ಭಿಣಿಯರಿಗೆ ಹೆರಿಗೆ ಸಂದರ್ಭದಲ್ಲಿ ರಕ್ತದ ಅತಿ ಅವಶ್ಯಕತೆ ಇರುತ್ತದೆ ಮುಂಚೆ ತುರ್ತು ಸಂದರ್ಭ ಬಂದಾಗ ದೂರದ ಆಸ್ಪತ್ರೆಗಳಿಗೆ ಕಳಿಸಿ ಕುಡುತ್ತಿದ್ದೇವೆ. ಇವಾಗ ರಕ್ತ ಶೇಕರಣೆ ಮಾಡುವ ಉಪಕಾರಣ ಕಮಲನಗರ ಸಮುದಾಯ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಿ ಹೆರಿಗೆ ಮತ್ತು ಅಪಘಾತ ರೋಗಿಗಳಿಗೆ ಮರು ಜೀವ ಕೂಡಲು ಸಾರ್ವಜನಿಕ ಸಹಕರಿಸಿಬೇಕು.

ಶ್ರೀಮಂತ ಮಡಿವಾಳ

ತಾಲೂಕ ವೈದ್ಯಾಧಿಕಾರಿಗಳು, ಕಮಲನಗರ.



ಬೀದರ್ ತಾಲ್ಲೂಕಿನ ನಾಗೋರಾ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನರಸಪ್ಪ ಜಾನಕನೋರ ಹೊರ ತಂದಿರುವ 2026ನೇ ಸಾಲಿನ ದಿನದರ್ಶಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ನರಸಪ್ಪ ಅವರಿಗೆ ರಾಜಕೀಯದಲ್ಲಿ ಉತ್ತಮ ಭವಿಷ್ಯವಿದೆ ಎಂದು ಹೇಳಿದರು. ನರಸಪ್ಪ ಜಾನಕನೋರ, ಮುಖಂಡರಾದ ಗೋವರ್ಧನ್ ರಾಠೋಡ್, ಅರುಣ್ ಮೇತ್ರೆ, ಬಾಬು ಟೈಗರ್ ಮತ್ತಿತರರು ಉಪಸ್ಥಿತರಿದ್ದರು.

# ಸೋನು ವಾಲದೊಡ್ಡಿ ಅವರ ನೇತೃತ್ವದಲ್ಲಿ 208ನೇ ಭೀಮ ಕೋರೆಗಾವ್ ವಿಜಯೋತ್ಸವ ಆಚರಿಸಲಾಯಿತು

• **ಮಲ್ಲಮ್ಮ ನುಡಿ ವಾರ್ತೆ ,ಬೀದರ್:**

ನಗರದಕೋಟೆಮುಖ್ಯದ್ವಾರದಿಂದ ಡಾ ಬಿ ಆರ್ ಅಂಬೇಡ್ಕರ್ ಅವರ ವೃತ್ತದ ವರೆಗೆ ಶ್ರೀ ಸಾಗರ್ ಈಶ್ವರ್ ಖಂಡ್ರೆ ಅಭಿಮಾನಿ ಬಳಗದ ವತಿಯಿಂದ 208 ನೇ ಭೀಮಾಕೊರೆಗಾವ್ ವಿಜಯೋಸ್ತವಾದ ಬ್ರಹತ್ ಮೆರವಣಿಗೆಯನ್ನಹಮ್ಮಿಕೊಳ್ಳಲಾಯ್ತು ಮುಖ್ಯ ಅತಿಥಿಯಾಗಿ ಬೀದರ್ ಸಂಸದರಾದ ಶ್ರೀ ಸಾಗರ ಈಶ್ವರ್ ಖಂಡ್ರೆ ಮತ್ತು ಯುವ ಉದ್ಯಮಿಗಳದ ವಿವೇಕ ದೀಪಕ್ ವಾಲಿ, ಶಿವರಾಜ್ ಹಾಸನಕರ್ , ವಿಷ್ಣುವರ್ಧನ್ ವಾಲದೊಡ್ಡಿ, ಅಂಶುಲ್ ರಜನೀಶ್ ವಾಲಿ. ಸಮಿತಿಯ ಅಧ್ಯಕ್ಷರಾದ ಸೋನು ವಾಲದೊಡ್ಡಿ ಗೌರವಧ್ಯಕ್ಷರಾದ ವಿಶಾಲ ಪಾಟೀಲ್ ಸೋಲಪುರ ಉಪಾಧ್ಯಕ್ಷರಾದಅಮಿತ್‌ಹಾಸನಕರ್, ಸಮಿತಿಯ ಸದಸ್ಯರಾದ ಪ್ರಥ್ವಿ-ರಾಜ್ ಕೊಂಡ, ರೋಹಿತ್ ಜೈನೂರು, ಆದಿತ್ಯ ವರ್ಮ, ತೋಷಿತ್,ನಿರಂಕರ್,ಪವನ್, ದರ್ಶನ್, ವಿಜಯಕುಮಾರ್, ಭರತ್ ಪೂಜಾರಿ, ಆಕಾಶ್ ಜೈನೂರ್ ಇನ್ನೂ ಅನೇಕರು ಭಾಗೀಯಾಗಿದರು

# ಬನಶಂಕರಿ ದೇವಿಯ ಪಲ್ಲಕ್ಕಿ, ರಥೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಪಟ್ಟಣದ ಬನಶಂಕರಿ ದೇವಿಯ ಜಾತ್ರಾ ಮಹೋತ್ಸವದ ನಿಮಿತ್ಯ ಇಂದು ಬೆಳಗ್ಗೆ ಬನಶಂಕರಿ ದೇವಿಗೆ ವಿಶೇಷ ಮಹಾಭಿಷೇಕ ಜರುಗಲಿದ್ದು. ಸಂಜೆ 4 ಘಂಟೆಗೆ ಬನಶಂಕರಿ ದೇವಸ್ಥಾನದಿಂದ ಭವ್ಯ ಪಲ್ಲಕ್ಕಿ ಉತ್ಸವವೂ ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಜಗದ್ಗುರು ಮೌನೇಶ್ವರ ದೇವಸ್ಥಾನದ ವರೆಗೆ ಜರುಗಲಿದೆ. ಬಳಿಕ ರಾತ್ರಿ 11 ಗಂಟೆಗೆ ಭವ್ಯ ರಥೋತ್ಸವ ಜರುಗಲಿದೆ. ಉತ್ಸವದಲ್ಲಿ ಪುರವಂತರ ಸೇವೆ, ಡೊಳ್ಳು ಕುಣಿತ, ಸಂಗೀತ, ವಾದ್ಯ ಮೇಳಗಳು ಸೇರಿದಂತೆ ನಾನಾ ಕಲಾ ತಂಡಗಳು ಭಾಗವಹಿಸಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನಿತರಾಗಬೇಕೆಂದು ದೇವಸ್ಥಾನ ಸಮಿತಿ ಅಧ್ಯಕ್ಷ ಉದಯಕುಮಾರ್

# ಪಠ್ಯದೊಂದಿಗೆ ಸಹಪಠ್ಯ ಚಟುವಟಿಕೆಗಳೂ ಬಹುಮುಖ್ಯ – ಸಂಸದ ಸಾಗರಖಂಡ್ರೆ

ಭಾಲ್ಕಿ: ವಿದ್ಯಾರ್ಥಿಗಳಲ್ಲಿ ಸರ್ವಾಂಗೀಣ ಅಭಿವೃದ್ಧಿ ಅತ್ಯವಶ್ಯಕ, ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳುಬಹುಮುಖ್ಯಪಾತ್ರವಹಿಸಬೇಕಾಗಿದೆ ಎಂದು ಸಂಸದ ಸಾಗರ ಈಶ್ವರಖಂಡ್ರೆ ಹೇಳಿದರು. ಪಟ್ಟಣದ ಲಕ್ಷ್ಮೀಬಾಯಿಖಂಡ್ರೆ ಪಬ್ಲಿಕ್ ಶಾಲಾ ಆವರಣದಲ್ಲಿ ನಡೆದ ಶಾಲಾ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪಠ್ಯಕ್ರಮದ ಅಂಕದ ಜೊತೆಗೆ, ಸಹಪಠ್ಯ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ ಬಹುಮುಖ್ಯ,ವಿದ್ಯಾರ್ಥಿಗಳು ಪ್ರತಿಯೊಂದು ಚಟುವಟಿಕೆಗಳಲ್ಲಿಭಾಗವಹಿಸಿತಮ್ಮಪ್ರತಿಭೆಯನ್ನು ತೋರಿಸಬೇಕು ಎಂದು ಹೇಳಿದರು.ಶಿಕ್ಷಣ ತಜ್ಞ ಗುರುರಾಜ ಕರಜಗಿ ಮಾತನಾಡಿ, ಗಂಡ ಹೆಂಡತಿಯರಲ್ಲಿರುವ ಅಭಿಪ್ರಾಯ ಭೇದದ ಸಮಯದಲ್ಲಿ ಮಕ್ಕಳೇ ನ್ಯಾಯ ಒದಗಿಸಿಕೊಡಬೇಕು. ಮೂರು ತರಹದ ಪಾಲಕರು ಇರುವವರು, ಅವರಲ್ಲಿ ಮಕ್ಕಳಲ್ಲಿ ಅತೀ ಪ್ರೀತಿ ಹೊಂದಿರುವ ಪಾಲಕರು ಮಕ್ಕಳು ಬೇಡಿದನ್ನು ತಕ್ಷಣ ಕೊಡಿಸುತ್ತಾರೆ. ಇದರಿಂದ ಮಕ್ಕಳಲ್ಲಿ ಸೋಮಾರಿತನ ಉಂಟಾಗುತ್ತದೆ. ಇನ್ನು ಮಕ್ಕಳ ಬಗ್ಗೆ ಆಸಕ್ತಿ ಇರದ ಪಾಲಕರು, ತಮ್ಮ ಮಕ್ಕಳ ಬೆಳವಣಿಗೆಯ ಬಗ್ಗೆ ಯಾವುದೇ ರೀತಿಯ ಆಸಕ್ತಿ ಹೊಂದಿರುವುದಿಲ್ಲ. ಇನ್ನು ಮೂರನೇ ತರಹದ ಪಾಲಕರು ಅತಿ ಬಿಗುಮಾನದಲ್ಲಿದ್ದು, ಮಕ್ಕಳಿಗೆ ತೀರಾ ಹೆದರಿಸಿ ಇಟ್ಟಿರುವರು.

ಈ ಮೂರು ತರಹದ ಪಾಲಕರಿಂದಲೂ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಅಸಾಧ್ಯ, ಪಾಲಕರು ಮ್ಮಕಳೊಂದಿಗೆ ಸ್ನೇಹಿತರಾಗಿ ಇರಬೇಕು ಎಂದು ಹೇಳಿದರು. ಶಿಕ್ಷಣ ಸಂಸ್ಥೆಯ ಪ್ರಾಚಾರ್ಯ ಸಂತೋಷ ಮಿರಾಜಕರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳಾದ ಸೀಮಾರಾಣಿ ಸಂದೀಪ, ಸಬೀನಾರಾಣಿ ಸಾಗರ ಮಾತನಾಡಿದರು. ಇದೇ ವೇಳೆ ಪುಟಾಣಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.ಕಾರ್ಯಕ್ರಮದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಅಂಕುಶ ಢೋಲೆ, ಬಿಕೆಐಟಿ ಪ್ರಾಚಾರ್ಯ ಡಾ। ಉದಯಕುಮಾರ ಕಲ್ಯಾಣೆ, ಸಿಬಿ ಕಾಲೇಜಿನ ಪ್ರಾಂಶುಪಾಲ ಡಾ। ಸಂತೋಷಕುಮಾರ ತೀರ್ಥ, ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಪ್ರಾಚಾರ್ಯ ಭೀಮರಾವ ಗಿರಿ, ಸಿಬಿ ಪಿಯು ಕಾಲೇಜಿನ ಪ್ರಾಚಾರ್ಯ ಲಕ್ಷ್ಮೀಕಾಂತ ನಾಟೇಕರ, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಭರತ ಸಿದ್ಧಾ ಕಲವಾಡಿ ಉಪಸ್ಥಿತರಿದ್ದರು.



"ಮಕ್ಕಳಿಗಿರುವ ಮೊಬಾಯಲ್ ಗೀಳಿನಿಂದ ದೂರಮಾಡಬೇಕು. ಮಕ್ಕಳ ಜೊತೆ ನಿರ್ಜೀವ ವಸ್ತುಗಳ (ಮೊಬೈಲ್, ಟಿ.ವಿ) ಜೊತೆ ಸ್ನೇಹವಾದಾಗ ಬಂಧಗಳು ದೂರವಾಗುತ್ತವೆ. ಮಕ್ಕಳ ಮೊಬೈಲ್ ಗೀಳು ದೂರಮಾಡಿ ಅವರಲ್ಲಿ ಮೌಲ್ಯ ಕಲಿಸುವ ಕಾರ್ಯಮಾಡಬೇಕು–ಗುರುರಾಜ ಕರಜಗಿ, ಶಿಕ್ಷಣ ತಜ್ಞರು.

ಶಾಲೆಯಲ್ಲಿ ಶಿಕ್ಷಕರು, ಮನೆಯಲ್ಲಿ ಪಾಲಕರು ಮಕ್ಕಳಿಗೆ ಮಾದರಿಯಾಗಿರಬೇಕು. ತಳದಿಂದ ಶಿಕ್ಷಣ ಸರಿಮಾಡುವ ಉದ್ದೇಶದಿಂದ ಲಕ್ಷ್ಮಿಬಾಯಿಖಂಡ್ರೆ ಪಬ್ಲಿಕ್ ಶಾಲೆ ತೆಗೆಯಲಾಗಿದೆ. ಈ ಭಾಗದಲ್ಲಿ ಹೆಣ್ಣುಮಕ್ಕಳಿಗಾಗಿಯೇ ಪಬ್ಲಿಕ್ ಶಾಲೆ ತೆಗೆದಿರುವುದು ನಮ್ಮ ಪೂರ್ವಜರ ಆಸೆಯಾಗಿದೆ – **ಸಾಗರ ಖಂಡ್ರೆ, ಸಂಸದರು ಬೀದರ.**


**ಪುರಸಭೆ ಕಾರ್ಯಲಯ ಚಿಟಗುಪ್ಪ. ಜಿಲ್ಲೆ ಬೀದರ**

**ದರಪಟ್ಟಿ ಅರ್ಜಿ ಅಹ್ವಾನ**

**ದಿನಾಂಕ 01-01-2026**

**ಈ ಮೂಲಕ ಚಿಟಗುಪ್ಪ ಪಟ್ಟಣದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಚಿಟಗುಪ್ಪ ಪಟ್ಟಣದ ಡಿ.ಸಿ.ಸಿ ಬ್ಯಾಂಕ್ ಹತ್ತಿರದ ಪುರಸಭೆಯ ಸಾರ್ವಜನಿಕ ಶೌಚಾಲಯದ (Maintenance) ನಿರ್ವಹಣೆ ಮಾಡಲು ಇಚ್ಛೆವುಳ್ಳವರು ಈ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ಪುರಸಭೆ ಕಾರ್ಯಲಯಕ್ಕೆ ದರ ಪಟ್ಟಿಗಳನ್ನು ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಬಂದ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.**

**-/ಸಹಿ**

**ಮುಖ್ಯಾಧಿಕಾರಿ ಪುರಸಭೆ ಚಿಟಗುಪ್ಪ**


# ಗೃಹ ಲಕ್ಷ್ಮಿ ಯೋಜನೆಯ ಹೊಸ ಫ್ರಿಡ್ಜ್ ಖರೀದಿ

ಸಿಂಧನೂರು;ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಜಾರಿಗೆ ತಂದ ಕ್ರಾಂತಿಕಾರಿ 'ಗೃಹಲಕ್ಷ್ಮಿ' ಯೋಜನೆಯು ಇಂದು ಗ್ರಾಮೀಣ ಭಾಗದ ಮನೆಮನೆಗಳಲ್ಲಿ ಹೊಸ ಆಶಾಕಿರಣ ಮೂಡಿಸಿದೆ. ಇದಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿ, ಉಪ್ಪಲದೊಡ್ಡಿ ಗ್ರಾಮದ ನಿವಾಸಿ ಶ್ರೀಮತಿ ಹನುಮಮ್ಮ (ಗಂಡ ದುರುಗಪ್ಪ ನಡುಲ್ ಮನಿ) ಅವರು ತಮಗೆ ಪ್ರತಿ ತಿಂಗಳು ಬರುತ್ತಿದ್ದ 2,000 ರೂಪಾಯಿಗಳ ಗೌರವಧನವನ್ನು ಅಕ್ಕರೆಯಿಂದ ಉಳಿತಾಯ ಮಾಡಿ, ಇಂದು ತಮ್ಮ ಮನೆಗೆ ಹೊಚ್ಚ ಹೊಸ ಫ್ರಿಡ್ಜ್ ಖರೀದಿಸುವ ಮೂಲಕ ಆರ್ಥಿಕ ಸಬಲೀಕರಣದ ಹಾದಿಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ ಕೆ ಶಿವಕುಮಾರ್ ಅವರಿಗೂ ಸಂಸದರಾದ ರಾಜಶೇಖರ್ ಹಿಟ್ನಾಳ್ ಹಾಗೂ ವಿಧಾನ ಪರಿಷತ್ ಶಾಸಕರಾದ

ಬಸನಗೌಡ ಬಾದರ್ಲಿ, ಹಾಗೂ ಶಾಸಕರಾದ ಬಸನಗೌಡ ತುರ್ವಿಹಾಳ್ ಅವರು, ಅವರು ಹಾಗೂ ಯುವ ನಾಯಕರಾದ ಆರ್. ಸಿದ್ದನಗೌಡ



ತುರ್ವಿಹಾಳ್ ಅವರುಗಳಿಗೆ ಗ್ರಾಮೀಣ ಮಹಳೆ ಅಭಿನಂದನೆಗಳು ತಿಳಿಸಿದ್ದಾರೆ.

ಅವರು ಸಮರ್ಥ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷದ ಭರವಸೆಗಳು ಹೇಗೆ ಸಾಮಾನ್ಯ ಜನರ ಬದುಕಿನಲ್ಲಿ ಹೆಮ್ಮೆಯ ಬೆಳಕು ತರುತ್ತಿವೆ ಎಂಬುದಕ್ಕೆ ಇದೊಂದು ಸುಂದರ ನಿದರ್ಶನ ಇಂತಹ ಅದ್ಭುತ ಯೋಜನೆಯನ್ನು ಜಾರಿಗೆ ತರಲು ಕಾರಣಿಕರ್ತರಾಗಿ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕದ ಎಲ್ಲಾ ನಾಯಕರಿಗೆ ಈ ಮೂಲಕ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಗುತ್ತಿದೆ.

ಸರ್ಕಾರದ ಹಣವನ್ನು ಅತ್ಯಂತ ಜಾಣ್ಮೆಯಿಂದ ಸದುಪಯೋಗಪಡಿಸಿಕೊಂಡು, ತಮ್ಮ ಮನೆಯ ದಶಕಗಳ ಕನಸನ್ನು ನನಸು ಮಾಡಿಕೊಂಡ ಹನುಮಮ್ಮನವರ ಸಾಧನೆ ಸ್ತ್ರೀಶಕ್ತಿಯ ಗೌರವವನ್ನು ಎತ್ತಿ ಹಿಡಿದಿದ್ದು ಎಂದು ಹೇಳಿದರು

ಇದು ಇಡೀ ಸಮಾಜವೇ ಹೆಮ್ಮೆ ಪಡುವಂತಹ ಮತ್ತು ಕೃತಜ್ಞತೆಗಳನ್ನು ಸಲ್ಲಿಸಬೇಕಾದ ಕ್ಷಣವಾಗಿದೆ ಎಂದು ಹೇಳಿದರು

# ಪ್ರಭು ಪಸಾರ್ಗಿ ನೇಮಕ



• **ಮಲ್ಲಮ್ಮ ನುಡಿ ವಾರ್ತೆ ಬೀದರ :**

ಕನ್ನಡಸೇನೆ ಕರ್ನಾಟಕ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ ಉದ್ದೇಶದಿಂದ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ.ರಾಜ್ಯ ಉಪಾಧ್ಯಕ್ಷರಾದ ಡಾ. ರವಿಸ್ವಾಮಿ ನಿರ್ಣಾ ಅವರ ಆದೇಶದಂತೆ, ಕನ್ನಡ ನಾಡು ನುಡಿ ನೆಲ ಜಲ ರಕ್ಷಣೆಗೆ ಹೋರಾಟ ನಡೆಸುವ ನಿಟ್ಟಿನಲ್ಲಿ ಆಣದೂರ ಗ್ರಾಮದ ಪ್ರಭು ಶೆಟ್ಟಿ ತಂದೆ ಗುಂಡಪ್ಪಾಪಸಾರ್ಗಿ ಅವರನ್ನು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಬೀದರ್ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಈ ಕುರಿತು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷರಾದ ಸುಭಾಷ್ ಕೆನಾಡೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ, ನೂತನವಾಗಿ ನೇಮಕಗೊಂಡ ಪ್ರಭು ಪಸಾರ್ಗಿ ಅವರಿಂದ ಸಂಘಟನೆಯ ಚಟುವಟಿಕೆಗಳಿಗೆ ಹೊಸ ಚೈತನ್ಯ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ಲಕ್ಷಣ ಆಲೂರು, ಶಿವಶಂಕರ್ ಪುಲ್ಲೆ, ಚೇತನ ಸೊರಳ್ಳಿ, ಬಾಬುರಾವ್ ಕೋರವಾ, ನಾಗಶೆಟ್ಟಿ ಸಜ್ಜನಶೆಟ್ಟಿ, ಆಕಾಶ್ ರೆಡ್ಡಿ, ಮಲ್ಲಿಕಾರ್ಜುನ ಸಿಕೇನಪುರ, ಸಂತೋಷ ಲಾದೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜಕಣಾಚಾರ್ಯರು ಶಿಲ್ಪ ಕಲೆಯನ್ನು ಹೂವಾಗಿ ಅರಳಿಸಿದ ಮಾಹಾನ್ ಚೇತನ- ಇಓ ಸಂತೋಷ ಬಿರಾದರ್



- **ಮಲ್ಲಮ್ಮನುಡಿ ವಾತೆ, ಕುಕನೂರ :**

ತಾಲೂಕ ಪಂಚಾಯತ ಕುಕನೂರ ಕಚೇರಿಯಲ್ಲಿ ಇಂದು ಶ್ರೀ ಅಮರ ಶಿಲ್ಪಿ ಜಕಣಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ನಂತರ ಮಾತನಾಡಿದ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಬಿರಾದರ್ ಅಮರ ಶಿಲ್ಪಿ ಜಕಣಾಚಾರ್ಯರು ಕಲೆಗಾಗಿ ತಮ್ಮ ಜೀವನವನ್ನೆ ಮುಡುಪಿಟ್ಟ ಮಹಾನ್ ಚೇತನ, ಅದರಲ್ಲೂ ಹಿಂದಿನ ಕಾಲದಲ್ಲಿ ಇಗಿನಂತೆ ನವೀನ ಯಂತ್ರೋಪಕರಣಗಳು ಇರದೇ ಇದ್ದರೂ ಸಾಕಷ್ಟು ಇತಿಹಾಸ ಸಾರುವ ದೇಗುಲಗಳನ್ನು ನಿರ್ಮಾಣ ಮಾಡಿ ಇಂದಿನ ಕಾಲದ ಯುವಕರಿಗೆ ಮಾದರಿಯಾಗಿದ್ದಾರೆ.

ಶಿಲ್ಪ ಕಲೆಯನ್ನು ಹೂವಾಗಿ ಅರಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರಂತೆ ಅವರ ಮಗನೂ ಕೂಡಾ ಶಿಲ್ಪ ಕಲೆಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟ ಕಲೆಗಾರರು ಇಂತಹ ಶಿಲ್ಪ ಕಲೆಗಳು ನೂರಾರು ವರ್ಷ ಉಳಿಯುವುದರಿಂದ ಮುಂದಿನ ಜನಾಂಗಕ್ಕೆ ದಾರಿದೀಪ ವಿದ್ದಂತೆ ಅದರಂತೆ ಇಂದಿನ ಯುವಕರು ಅವರ ತತ್ವಾದರ್ಶಗಳನ್ನು ಪಾಲಿಸಬೇಕು ಎಂದರು.

ಸ್ಥಳದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ವೈಜನಾಥ ಸಾರಂಗಮಠ, ಹನಮಂತಪ್ಪ ನಾಯಕ, ತಾಪಂ ಸಿಬ್ಬಂದಿಗಳಾದ ಸದ್ದಾಮ ಹುಸೇನ್, ಯಲ್ಲಪ್ಪ ನಿಡಶೇಸಿ, ನರೇಗಾ, ಹಾಗೂ ಎನ್ ಆರ್ ಎಲ್ ಎಮ್ ಸಿಬ್ಬಂದಿಗಳು ಹಾಜರಿದ್ದರು.

## ಲೋಕೋಪಯೋಗಿ ಭವನದಲ್ಲಿ ಜಕಣ ಚಾರಿ ಜಯಂತಿ ಹಾಗೂ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ



- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ನಗರದ ಲೋಕೋಪಯೋಗಿ ಭವನ್ ಕಚೇರಿಯಲ್ಲಿ ಅಮರಶಿಲ್ಪಿ ಜಕಣ ಚಾರಿ ಜಯಂತಿ ಹಾಗೂ ಹೊಸ ವರ್ಷದ ಕರ್ನಾಟಕ ರಾಜ್ಯ ಲೋಕೋಪಯೋಗಿ ನೌಕರ ಸಂಘ ಬೆಂಗಳೂರು ಜಿಲ್ಲಾ ಘಟಕ ಕಲಬುರಗಿಯ ಕ್ಯಾಲೆಂಡರ್ ಬಿಡುಗಡೆಯನ್ನು ಸಂಪರ್ಕ ಮತ್ತು ಕಟ್ಟಡ ಈಶಾನ ಮುಖ್ಯ ಇಂಜಿನಿಯರರಾದ ಶರಣಪ್ಪ ಸುಲುಗಂಟೆ ಅವರು ಮಾಡಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ವೃತ್ತ ಅಧೀಕ್ಷಕ ಅಭಿಯಂತರಾದ ಅಮೀನ್ ಮುಕ್ತಾರ್ ಅಹಮದ್, ಸುರೇಶ ಶರ್ಮಾ, ಸುರೇಶ್ ಮೇದ, ಕಾರ್ಯನಿರ್ವಕ ಅಭಿಯಂತರಾದ ರಾಹುಲ್ ಕಾಂಬಳೆ, ಸೂರ್ಯಕಾಂತ್ ಕಾರ್ಬಾರಿ, ಎಂ.ಡಿ.ಇಬ್ರಾಮ್, ಶ್ರೀಮಂತ ಬೆನ್ನೂರ್, ಶ್ರೀಮಂತ ಕೋಟೆ, ಬಸವರಾಜ, ಸಾಹಾಯಕ ಕಾರ್ಯನಿರ್ವಕ ಅಭಿಯಂತರಾದ ಉಷಾರಾಣಿ ಪಾಟೀಲ್, ಜಯರಾಜ್ ಆರ್ ಎನ್, ಲೇಕ ಪರಶೋಧನ ಅಧಿಕಾರಿ ಮಂಜುಳಾ, ತಾಂತ್ರಿಕ ಸಹಾಯಕರಾದ ಅಮರನಾಥ ಧೂಳಿ, ಬಸವರಾಜ, ನಾಗರಾಜ್, ಅಧೀಕ್ಷಕರಾದ ಚಕ್ರದನ್, ದೇವೇಂದ್ರಪ್ಪ, ರಾಹುಲ್ ದೇಶಮುಖ್, ಸಹಾಯಕ ಅಭಿಯಂತರಾದ ಗಿರಿಜಾ ದೇವಿ, ಮಹಾನಂದ, ಕಿರಿಯ ಅಭಿಯಂತರಾದ ಚಂದ್ರಶೇಖರ್ ನಾಸಿ, ಧೂಳಪ್ಪ ಹಿಂಬಾಡಿ, ಕರ್ನಾಟಕ ರಾಜ್ಯ ಲೋಕೋಪಯೋಗಿ ನೌಕರರ ಸಂಘ ನೌಕರರ ಸಂಘದ ಜಿಲ್ಲಾಧ್ಯಕ್ಷ ಶರಣರಾಜ ಛಪ್ಪರಬಂದಿ, ಸಂಘದ ಹಿರಿಯ ಉಪಾಧ್ಯಕ್ಷ ಭೀಮಣ್ಣ ನಾಯಕ್, ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಸಂಗೊಳ್ಳಗಿ, ಉಜ್ವರ್ ಅಹಮದಖಾನ, ಕಮಲಾಕರ್ ಆನೆಗುಂದಿ, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರಶೇಖರ್ ಕಟ್ಟಿಮನಿ, ಖಜಾಂಚಿ ಉಮಾಕಾಂತ ಹಿರೋಳ್ಳಿ, ಕಾರ್ಯದರ್ಶಿ ಕಿಟೆಂದ್ರ, ಸಹ ಕಾರ್ಯದರ್ಶಿಗಳಾದ ಶಶಿನಾಥ ಸೊನೆ, ಖಾಸಿಂ ಅಲಿ, ಸಂಘಟನಾ ಕಾರ್ಯದರ್ಶಿಗಳಾದ ಅಕ್ಟರ್ ಪಾಶಾ, ಅಶೋಕ ಸಜ್ಜನ, ಕ್ರೀಡಾ ಕಾರ್ಯದರ್ಶಿ ರಾಮಕಿಶನಾ ಸಿಂಗ, ಸಂಘದ ಸಲಹೆಗಾರರಾದ ಶರಣಗೌಡ ಪಾಟೀಲ್, ಮಂಜುನಾಥ್ ಧೂಳೆ, ಕಾರ್ಯಕಾರಿ ಸದಸ್ಯರಾದ ನಾಗೇಂದ್ರಪ್ಪ, ರಾಜಕುಮಾರ್, ಪಾಂಡುರಂಗ ಕುಲಕರ್ಣಿ, ಕಾರ್ತಿಕ್, ಪ್ರಭು ರಾಥೋಡ್, ಮಹಮ್ಮದ ಮಜಾರ, ಸೈಯದ್ ಬಾಸು ಹಾಗೂ ಸಿಬ್ಬಂದಿಗಳಾದ ಚಂದ್ರಕಲಾ, ಆರತಿ, ಗೌರಮ್ಮ, ಕುಂದಮ್ಮ, ಮಹಾದೇವಿ, ಜಲೀಲ್ ಸೇರಿದಂತೆ ಸೇರಿದಂತೆ ಇತರರು ಇದ್ದರು.



ಹುಮನಾಬಾದ:ತಾಲ್ಲೂಕಿನ ಸಿಂಧನಕೇರಾ ಗ್ರಾಮದಲ್ಲಿ ಹೊಸವರ್ಷ ದಿನವೇ ಆಶ್ರಯ ದೀಪ ಟ್ರಸ್ಟ್ ಅಧ್ಯಕ್ಷ ಭೀಮರೆಡ್ಡಿ ಸಿಂಧನಕೇರಾರವರ ತಾಯಿ ಸರಸ್ವತಿ ಕಳ್ಳಿಮನಿಯವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತ್ತು. ಮೊಹನ್ ಸಿಂಗ್ ರವರು ಮಾತನಾಡಿ, ನಿಮಗೆ ವಯಸ್ಸು ಹೆಚ್ಚಾದಂತೆ ಆಯಸ್ಸೂ ಹೆಚ್ಚಾಗಲಿ, ಈ ಸುದಿನಕ್ಕೆ, ಬಾಳು ಹಸಿರಾಗಿಸುವ ಶುಭ ಸಂದರ್ಭಕ್ಕೆ, ನೂರು ವರ್ಷ ಸುಖವಾಗಿ ಬಾಳಿ ಎಂದು ಶುಭ ಹಾರೈಸಿದರು. ಅರವಿಂದ ಜೋಗಿರೆ, ಯುವರಾಜ ಐಹೊಳ್ಳೆ, ಶೇಕ್ ಫೀರದೋಸ್, ವಿಜಯಕುಮಾರ, ವೀರಾರೆಡ್ಡಿ, ಹುಟ್ಟುಹಬ್ಬದ ಶುಭಾಶಯಗಳು ಕೋರಿದರು. ಮೊಮ್ಮಕ್ಕಳಿದ್ದರು. (ಮಲ್ಲಮ್ಮ ನುಡಿ ಚಿತ್ರ).

## ಜನವರಿ 3 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ 11ಕೆ.ವಿ. ಎಮ್.ಎಸ್.ಕೆ. ಮಿಲ್, ಹೀರಾಪುರ, ಹುಸೇನ್ ಗಾರ್ಡ್‌ನ, ಬಸವೇಶ್ವರ ಹಾಗೂ ರಫೀಕ್ ಚೌಕ್ ಫೀಡರ್‌ಗಳ ವ್ಯಾಪ್ತಿಯಲ್ಲಿನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಜನವರಿ 3ರಂದು ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

**ಎಮ್.ಎಸ್.ಕೆ.ಮಿಲ್ ಫೀಡರ್:** ಮದೀನಾ ಕಾಲೋನಿ, ನ್ಯೂ ಮದೀನಾ ಕಾಲೋನಿ, ಮೀಸ್ಬಾ ನಗರ, ಇಕ್ಬಾಲ್ ಕಾಲೋನಿ, ಹುಸೇನ್ ಗಾರ್ಡನ್, ಕೃಷ್ಣ ಮಿನರಲ್ಸ್, ನ್ಯೂ ರಾಘವೇಂದ್ರ ಕಾಲೋನಿ, ಖಾನಿ ಏರಿಯಾ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು.

**ಹೀರಾಪುರ ಫೀಡರ್:** ಹೀರಾಪುರ ರೈಲ್ವೆ ಗೇಟ್, ಜಫರಾಬಾದ್, ಭೀಮನಗರ, ಕರೀಮ್ ಕಾಲೋನಿ, ಜಿದ್ದಾ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

**ಹುಸೇನ್‌ಗಾರ್ಡನ್ ಫೀಡರ್:** ಹುಸೇನ್ ಗಾರ್ಡನ್, ಇಕ್ಬಾಲ್ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

**ಬಸವೇಶ್ವರ ಫೀಡರ್:** ನವಾಬ್‌ಸಾಬ್ ಮೊಹಲ್ಲಾ, ಗುರುಸ್ನಾಯ್ ಕಾಲೋನಿ, ಚುನ್ನಾಭಟ್ಟಿ, ನ್ಯೂರಹೆಮತ್ ನಗರ, ಪೀರ್ದೋಸ್ ಕಾಲೋನಿ, ಬಸವಣ್ಣಕಟ್ಟಾ, ಝುಮ್‌ಝುಮ್ ಕಾಲೋನಿ, ಸಿಟಿ ಸ್ಕೂಲ್, ಸಭಾ ಫಂಕ್ಷನ್‌ಹಾಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

**ರಫೀಕ್ ಚೌಕ್ ಫೀಡರ್:** ಮೆಕ್ಕಾ ಕಾಲೋನಿ, ಹಾಗರಗಾ ಕ್ರಾಸ್, ಜುಬೇರ್ ಕಾಲೋನಿ, ಉಮರ್ ಕಾಲೋನಿ, ಬುಲಂದ ಪರ್ವೇಜ್ ಕಾಲೋನಿ, ರಫೀಕ್‌ಚೌಕ್, ನೂರಾನಿ ಮೊಹಲ್ಲಾ, ಅರಾಬಿಕ್ ಶಾಲೆ, ಇಸ್ಲಾಮಾಬಾದ್ ಕಾಲೋನಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

## ಭರತ್ ರೆಡ್ಡಿ ಗೂಂಡಾಗಿರಿಗೆ ಹೆದರಲ್ಲ ಸಿಬಿಐ ತನಿಖೆಗೆ ಶ್ರೀರಾಮುಲು ಆಗ್ರಹ...



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಿನ್ನೆ ರಾತ್ರಿ ನಗರದಲ್ಲಿ ನಡೆದ ಫೈರಿಂಗ್ ನಲ್ಲಿ ಗುಂಡು ಹಾರಿಸಿದ ವ್ಯಕ್ತಿಗಳ ಮೇಲೆ ಕಾನೂನು ರೀತಿ ಕ್ರಮ ಜರುಗಿಸಬೇಕೆಂದು ಬಿಜೆಪಿ ಮುಖಂಡ, ಮಾಜಿ ಸಚಿವ ಬಿ.ಶ್ರೀರಾಮುಲು ಆಗ್ರಹಿಸಿ ದ್ದಾರೆ.

ನಗರದ ಜನಾರ್ಧನರೆಡ್ಡಿ ಅವರ ನಿವಾಸದಲ್ಲಿ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡುತ್ತಿದ್ದರು.

ಅವರಿಗೇ ಅವರೇ ಗುಂಡು ಹಾರಿಸಿ ನಮ್ಮ ಮೇಲೆ ನುಗ್ಗಲು ಬಂದಿದ್ದಾರೆ. ನಿಮ್ಮ ದೌರ್ಜನ್ಯ ಗೂಂಡಾಗಿರಿಗೆ ಹೆದರಲ್ಲ, ಹಾಲಿ ನ್ಯಾಯಾಧೀಶ ರಿಂದ, ಇಲ್ಲಾ,ಸಿಬಿಐ ನಿಂದ ತನಿಖೆ ಆಗಲಿ ಎಂದರು.

26 ವರ್ಷದ ರಾಜಶೇಖರ ರೆಡ್ಡಿ ಕಾಂಗ್ರೆಸ್ ಯುವಕನ ಸಾವಿಗೆ ಪಕ್ಷದಿಂದ, ವಯಕ್ತಿಕವಾಗಿ ಶೋಕ ವ್ಯಕ್ತಪಡಿಸುವೆ. ಕ್ಷುಲಕ ಕಾರಣದಿಂದ ಈ ಘಟನೆ ನಡೆಯಿತು. ಜರ್ನಾರ್ಧನರೆಡ್ಡಿ ಅವರ ಮನೆಯ ರಸ್ತೆಗೆ ಅಡ್ಡಿಯಾಗಿ ಬ್ಯಾನರ್ ಕಟ್ಟಲು ಮುಂದಾಗಿ ದ್ದೇಕೆ, ಗಲಾಟೆ ಮಾಡಲೆಂದೆ ಪೂರ್ವ ನಿಯೋಜಿತ ವಾಗಿ ಅವರು ದಾಳಿ ನಡೆಸಿದರು. ಗುಂಡು ಹಾರಿಸಿ ದರು. ಪೊಲೀಸರು ಬಂದು ಚದುರಿಸಿದರು. ಪರ ಸ್ಪರ ಘೋಷಣೆ ಕೂಗಲಾಯ್ತು. ಪೊಲೀಸ್ ಫೈರಿಂಗ್ ಆಯ್ತು ಗಾಳಿಯಲ್ಲಿ, ಈ ವೇಳೆ ಸಿನಿಮಾದಂತೆ ಸತೀಶ್ ರೆಡ್ಡಿ ಗನ್ ಮ್ಯಾನ್ ಗಳು ಪೈರ್ ಮಾಡಿ ದರು. 0.76 ಬುಲೆಟ್ ದೊ-ರೆತಿದೆ. ಇದರಿಂದ ಅವ ರಿಂದಲೇ ಮೇಲ್ನೋಟಕ್ಕೆ ಪೈರಿಂಗ್ ಆಗಿರುವುದು

ಖಚಿತವಾಗುತ್ತೆ. ಕಲ್ಲುತೂರಾಟದಿಂದ ನಮ್ಮಕಡೆಯ ಅನೇಕರು ಗಾಯಗೊಂಡರು. ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಕಳಿಸಿದ್ದಾರೆ. ದಾಖಲು ಮಾಡಿಕೊ ಳ್ಳುತ್ತೆ, ಬಿಹಾರದ ರೀತಿ ಆ ಸತೀಶ್ ರೆಡ್ಡಿ ಎಂಟು ಜನ ಗನ್ ಮ್ಯಾನ್ ಗಳಿಂದ ಓಡಾಡುತ್ತ ಪೈರಿಂಗ್ ಮಾಡಿದ್ದಾರೆಂದು ಆರೋಪಿಸಿದರು.

ಮೃತ ವ್ಯಕ್ತಿಯ ದೇಹದಲ್ಲಿ ದೊರೆತ ಬುಲೆಟ್ ಯಾವುದೆಂದು ತನಿಖೆಯಾಗಲಿ ಎಂದ ಅವರು ಪೆಟ್ರೋಲ್ ಬಾಂಬ್ ಎಸೆಯಲು ಬಂದಿದ್ದರು. ಶಾಸಕ ಭರತ್ ರೆಡ್ಡಿ ಮನೆ ಸುಡುತ್ತೇನೆಂದು ಹೇಳಿ ದ್ದಾ-ರೆ. ಅದಕ್ಕಾಗಿ ಅವರು ಪೂರ್ವ ನಿಯೋಜಿತರಾಗಿ ಬಂದಿದ್ದರಂತೆ ಕಾಣುತ್ತಿದೆಂದರು.

- **ನಮ್ಮ ಆಕ್ಷೇಪಣೆ ಇಲ್ಲ:** **ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣಕ್ಕೆ ನಮ್ಮ ಅಭ್ಯಂ ತರ ಇಲ್ಲ. ಅದು ಆಗಬೇಕೆಂಬುದು ನಮ್ಮ ಆಶಯವಾಗಿದೆ. ವಾಲ್ಮೀಕಿಯನ್ನು, ಜಾತಿಯನ್ನು ನೀವು ಬಳಸಿಕೊಳ್ಳ ಬೇಡಿ, ನಾವು ಸಹ ಸಮಾರಂಭಕ್ಕೆ ಸಹಾಯ ಮಾಡು ತ್ತೇವೆ ಎಂದರು. ಅವರು ಸಂಸ್ಕಾರ ಇಲ್ಲದಂತೆ ನಡೆದು ಕೊಳ್ಳುವುದು ತರವಲ್ಲ, ಪ್ರಚೋದನೆ, ಶಕ್ತಿ ಪ್ರದರ್ಶನ ಬೇಡ. ನಮ್ಮಮನೆಗಳ ಕಡೆಗೆ ಬಂದು ಗಲಾಟೆ ಮಾಡಿದ ವರು ಯಾರು, ಯಾವುದೇ ತನಿಖೆ ಮಾಡಲಿ ಎಂದರು. ನಾನು ತಪ್ಪು ಮಾಡಲ್ಲ, ಮಾಡಿಲ್ಲ. ನಮ್ಮನ್ನು ಪೊಲೀಸರು ರಕ್ಷಣೆ ಮಾಡಿದರು. ನಾನು ನಿರೀಕ್ಷಣಾ ಜಮೀನು ಪಡೆಯಲ್ಲ. ಜನಾರ್ಧನರೆಡ್ಡಿಗೆ ಸದಾ ತೊಂದರೆ ಮಾಡುವುದು ಭರತ್ ರೆಡ್ಡಿಯದ್ದಾಗಿದೆ.**

ಪುತ್ಥಳಿ ಅನಾವರಣಕ್ಕೆ ಇಷ್ಟೆಲ್ಲ ಮಾಡಬೇಕೆ. ರಾಮುಲು ವಾಲ್ಮೀಕಿ ಸಮುದಾಯಕ್ಕೆ ಏನು ಮಾಡಿದೆಂದು ಜನರಿಗೆ ಗೊತ್ತಿದೆ. ಅವರಲ್ಲಿ ವಿನಂತಿ ಇಷ್ಟೇ ನೀವು ರಾಜಕೀಯ ವಾಗಿ ಬೆಳೆಯಬೇಕು. ನಿಮ್ಮಲ್ಲಿ ಸ್ಪೀಡ್ ಬೇಡ, ಸ್ಪೀಡ್ ಹೆಚ್ಚಿದರೆ ಆಕ್ಸಿಡೆಂಟ್ ಆಗುತ್ತೆ ಎಂದು ಎಚ್ಚರಿಸಿದರು. ಘಟನೆ ಬಗ್ಗೆ ಪಕ್ಷದ ರಾಜ್ಯ, ರಾಷ್ಟ್ರೀಯ ನಾಯಕರಿಗೆ ಮಾಹಿತಿ ನೀಡಿರುವೆ ಎಂದರು. ನಮ್ಮ ಮನೆಗಳ ಬಳಿ ಬಂದು ಗಲಾಟೆ ಮಾಡಿ ದ್ದಾರೆ. ಈ ಬಗ್ಗೆ ಜನಾರ್ಧನರೆಡ್ಡಿ ಅವರು ಹತ್ಯಾ ಪ್ರಯತ್ನ, ಗೂಂಡಾಗಿರಿ ಬಗ್ಗೆ ಪ್ರಕರಣ ದಾಖಲು ಮಾಡಲಿದ್ದಾರೆ. ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವ ರಿಗೆ ಮಾಹಿತಿ ನೀಡಿರುವೆ. ಬರಲಿದ್ದಾರೆಂದು ತಿಳಿಸಿದರು. ಸತೀಶ್ ರೆಡ್ಡಿ ಜನಾರ್ಧನರೆಡ್ಡಿ ಬಗ್ಗೆ ಮಾತನಾಡಿ ದೊಡ್ಡವನಾಗಿದ್ದಾನೆ. ಬೇರೆ ಏನು ಇಲ್ಲ. ಆತ ಏನೂ ಇಲ್ಲ. ಅಷ್ಟು ಜನ ಗನ್ ಮ್ಯಾನ್ ಇಟ್ಟುಕೊ ಳ್ಳಲು ಅವರ ಆದಾಯ ಏನು, ಅವರದು ಗುಂಡಾಗಿರಿಯಾಗಿದೆಂದು ರಾಮುಲು ಹೇಳಿದರು. ಸತೀಶ್ ಗೆ ಏನೂ ಆಗಿಲ್ಲ ಅನುಕಂಪ ಗಿಟ್ಟಿಸಿಕೊಳ್ಳಲು ನಕಲಿಯಾಗಿ ಬ್ಯಾಂಡೇಜ್ ಹಾಕಿಕೊಂಡಿದ್ದಾರೆಂದರು. ಬ್ಯಾನರ್ ಗಳಿಂದ ಜನಮನ ಗೆಲ್ಲಲು ಆಗಲ್ಲ, ಕೆಲಸ ಮಾಡಿ ಜನಮನ ಗೆಲ್ಲಬೇಕು ಎಂದರು. ಜನಾರ್ಧನರೆಡ್ಡಿ ಅಲ್ಲ ಯಾರೇ ಕಷ್ಟದಲ್ಲಿರಲಿ ಅವರ ಬೆನ್ನಿಗೆ ನಿಲ್ಲುವುದು ನನ್ನ ಪರಮ ಧ್ಯೆಯ ಎಂದರು. ಸುದ್ದಿಗೋಷ್ಠಿಯಲ್ಲಿ, ಗಂಗಾವತಿ ಶಾಸಕ ಜನಾ ರ್ಧನರೆಡ್ಡಿ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಬಿಜೆಪಿ ಜಿಲ್ಲಾ ಅಧ್ಯಕ್ಷ ಅನಿಲ್ , ಮುಖಂಡರುಗಳಾದ, ಎಸ್ಮ. ಜೆ.ವಿ.ಮಹಿ ಪಾಲ್,

ಕೆ.ಎ.ರಾಮಲಿಂಗಪ್ಪ, ಗುತ್ತಿಗನೂರು ವಿರೂಪಾಕ್ಷಗೌಡ, ಪಾಲಣ್ಣ, ಎಸ್. ಗುರುಲಿಂಗನ ಗೌಡ, ಹೆಚ್. ಹನುಂಮತಪ್ಪ, ಕೆ.ಎಸ್.ದಿವಾಕರ್, . ಗೋನಾಳ ರಾಜಾಶೇಖರ್ ಗೌಡ ಮುರಹರಿಗೌಡ, ಸಿದ್ದಾರೆಡ್ಡಿ, ಶ್ರೀನಿವಾಸ್ ಮೋತ್ಕರ್ ಶ್ರೀ ನಿವಾಸ್ ರೆಡ್ಡಿ, ಎಸ್.ಮಲ್ಲನಗೌಡ, ಸುಧಾ-ಕರ್ ದೇಸಾಯಿ ಮೊದಲಾದವರು ಇದ್ದರು.

## ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ್ ಆರ್. ಪಾಟೀಲ್ ಅವರು ರಾಯಚೂರಿನಿಂದ ರಸ್ತೆ ಮೂಲಕ ಜನವರಿ 4 ರಂದು ಭಾನುವಾರ ಸಂಜೆ 6 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಜನವರಿ 5 ರಂದು ಸೋಮವಾರ ಕಲಬುರಗಿ ಮತ್ತು ಸೇಡಂದಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಬುರಗಿಯಲ್ಲಿ ವಾಸ್ತವ್ಯ ಮಾಡುವರು. ಜನವರಿ 6 ರಂದು ಮಂಗಳವಾರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ರಾತ್ರಿ 8.45ಕ್ಕೆ ಕಲಬುರಗಿಯಿಂದ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

## ಜಿಲ್ಲಾ ಮಟ್ಟದ ಉದ್ಯೋಗ ಮೇಳ ಮುಂದೂಡಿಕೆ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜಿಲ್ಲಾ ಪಂಚಾಯತ್ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್‌ನ ಡಿಡಿಯುಜಿಕೆವೈ ಯೋಜನೆಯಡಿ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ವಿವಿಧ ಪ್ರತಿಷ್ಠಿತ 30 ಕಂಪನಿಗಳ ಸಹಯೋಗದೊಂದಿಗೆ 2026ರ ಜನವರಿ 5 ರಂದು ಸೋಮವಾರ ಕಲಬುರಗಿ ತಾಲೂಕು ಪಂಚಾಯಿತಿ ಆವರಣದಲ್ಲಿ ಆಯೋಜಿಸಲಾಗಿದ್ದ "ಜಿಲ್ಲಾಮಟ್ಟದ ಉದ್ಯೋಗ ಮೇಳ-2025-26"ವನ್ನು ಕಾರಣಾಂತರದಿಂದ ಮುಂದೂಡಲಾಗಿದ್ದು, ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುತ್ತದೆ ಎಂದು ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ತಿಳಿಸಿದ್ದಾರೆ.

## ಕನಕದಾಸರ ಕೃತಿಗಳು ಶೇ.50 ರಷ್ಟು ರಿಯಾಯಿತಿ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಗಣರಾಜ್ಯೋತ್ಸವ ಅಂಗವಾಗಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದಿಂದ ಕೆಳಕಂಡ ಪ್ರಕಟಣೆಗಳು ಜನವರಿ ತಿಂಗಳು ಪೂರ್ತಿಯಾಗಿ ಶೇ.50ರಷ್ಟು ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಕೃತಿಗಳ ವಿವರ ಇಂತಿದೆ. ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಂಪುಟ ಮಾಲೆಯ 49 ಸಂಪುಟಗಳು, ಕನಕದಾಸ (ನಾಟಕ), ಕನಕದಾಸರ ಕೃತಿಗಳ ಭಾಷೆ ಮತ್ತು ಶೈಲಿ, ಕನ್ನಡ ಸಂಸ್ಕೃತಿ ಅಧ್ಯಯನದ ಆಕರವಾಗಿ ಕನಕದಾಸರ ಕೃತಿಗಳ ಅಧ್ಯಯನ, ಕನಕದಾಸರ ಕೃತಿಗಳ ಮಧ್ಯಕಾಲಿನ ಚರಿತ್ರೆಯ ಪುನಾರಚನೆ, ಗೋಪಾಳ ಗ್ಯಾನ, ಕನಕದಾಸರ ಕುರಿತ ನಾಟಕಗಳಲ್ಲಿ ಸಾಂಸ್ಕೃತಿಕ ಚಲನಶೀಲತೆ, ಕನಕದಾಸರು ಮತ್ತು ಪಶುಪಾಲನಾ ಪರಂಪರೆ, ಇಪ್ಪತ್ತನೇ ಶತಮಾನ ಕಂಡ ಕನಕದಾಸರು,

ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು ಹಾಗೂ ಸಂತಕವಿ ಕನಕದಾಸರ ಜೀವನ ಚರಿತ್ರೆಯ ಕನ್ನಡ ಆವೃತ್ತಿಯ ಪುಸ್ತಕವನ್ನು ಹಿಂದಿ, ತಮಿಳು, ತೆಲುಗು, ಬೆಂಗಾಲಿ, ಮಲೆಯಾಳಂ, ಮರಾಠಿ, ಅಸ್ಸಾಂ, ಪಂಜಾಬ ಭಾಷೆಗಳಿಗೆ ಅನುವಾದಗೊಂಡ ಪುಸ್ತಕಗಳು ಮಾರಾಟಕ್ಕೆ ಲಭ್ಯವಿರುತ್ತವೆ.

ಆಸಕ್ತರು ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ, ಕಲಾಗ್ರಾಮದ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದಲ್ಲಿ ನೇರವಾಗಿ ಅಥವಾ ಅಧ್ಯಯನ ಕೇಂದ್ರದ ದೂರವಾಣಿ ಸಂಖ್ಯೆ 080-22113147 ಹಾಗೂ ಮೊಬೈಲ್ ಸಂಖ್ಯೆ 7338640080ಗೆ ಕರೆ ಮಾಡಿ ಅಂಚೆಯ ಮೂಲಕವೂ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಅಂಚೆ ವೆಚ್ಚ ಪ್ರತ್ಯೇಕವಾಗಿದ್ದು, ಫೋನ್-ಪೇ/ಗೂಗಲ್ ಪೇ ಮೂಲಕವೂ ಹಣ ಸಂದಾಯ ಮಾಡಬಹುದಾಗಿದೆ.

## ಇವರು ಬಂದ ಮೇಲೆಯೇ ಬಳ್ಳಾರಿಯಲ್ಲಿ ಅಶಾಂತಿ ದ್ವೇಷ ರಾಜಕಾರಣ ಬಂತು : ನಾರಾ ಪ್ರತಾಪರೆಡ್ಡಿ...



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಹಿಂದಿನ ದಿನದ ಜನಾರ್ದನ ರೆಡ್ಡಿ, ಕುಟುಂಬದವರು ಅಧಿಕಾರಕ್ಕೆ ಬಂದ ಮೇಲೆಯೇ ಬಳ್ಳಾರಿಯಲ್ಲಿ ಅಶಾಂತಿ ವಾತಾವರಣ, ದ್ವೇಷ ರಾಜಕಾರಣ ಬಂತು ಎಂದು ಬುಡಾ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ನಾರಾ ಪ್ರತಾಪ್ ರೆಡ್ಡಿ ಆರೋಪಿಸಿದ್ದಾರೆ.

ನಗರದಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು. 36 ವರ್ಷದ ಯುವ ಶಾಸಕ ಮಾಡಿದ ಅಭಿವೃದ್ಧಿ ನೋಡದೇ ಈ ರೀತಿ ಮಾಡುತ್ತಿದ್ದಾರೆಂದರು. ಬಳ್ಳಾರಿಯಲ್ಲಿ ಗನ್ ಮ್ಯಾನ್ ಸಂಸ್ಕೃತಿ ತಂದವರು ಈ ಬಿಜೆಪಿಯ ಗ್ಯಾಂಗ್, 2008 ರ ಮೊದಲು ಇದು ಇರಲಿಲ್ಲ. ಇವರು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮುಖಂಡರ ಮೇಲೆ ವಿನಾಕಾರಣ ಕೇಸು ಹಾಕಿದ್ದು ಇವರೇ ನಗರದಲ್ಲಿ ಫ್ಲೆಕ್ಸ್ ಸಂಸ್ಕೃತಿ ತಂದವರೂ ಸಹ ಇವರು ಎಂದರು. ವಾಲ್ಮೀಕಿ ಪುತ್ಥಳಿ ಅನಾವರಣದ ವೈಭವ ನೋಡಲಾಗದೆ ಹೀಗೆ ಮಾಡಿ ರಾತ್ರಿ ವಿಗ್ರಹ ಇಟ್ಟಿಲ್ಲ ಕೆಡಿಸುವುದನ್ನು ಬಿಟ್ಟು ಇವರು ಮಾಡಿದ ಒಳ್ಳೆಯದು ಏನೂ ಇಲ್ಲಂದ್ದಾರೆ. ಅಭಿವೃದ್ಧಿ ಮಾಡುವುದಾದರೆ ಇವರು ದೆಹಲಿಗೆ ಹೋಗಿ ಎಂದರು. ಎನ್. ಎಂ.ಡಿ.ಸಿ ಕಾರ್ಖಾನೆ ತರಲಿ ಅವರು ಅಭಿವೃದ್ಧಿ ಬಗ್ಗೆ ಮಾತನಾ ಡುವುದಾರೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು. ಬ್ರಹ್ಮಣಿ ಸ್ಟೀಲ್ ಮಾಡುವುದಾಗಿ ಉತ್ತಮ ಗಾಲ್ವಗೆ ಮಾರಾಟ ಮಾಡಿದ್ದೇರಂದರು. ನಾಳೆ ಕಾರ್ಯಕ್ರಮ ಚೆನ್ನಾಗಿ ನಡೆಯಿತು ಎಂಬುದನ್ನು ಸಹಿಸಿಕೊಳ್ಳಲಿಲ್ಲ ಯುವುದನ್ನು ಅವರು, ಘಟನೆಯಲ್ಲಿ ತಪ್ಪು ಯಾರ ದ್ದಾಗಿದೆ ಎಂಬ ಬಗ್ಗೆ ತನಿಖೆ ಆಗಲಿ, ತಪ್ಪಿದ್ದವರ ಮೇಲೆ ಕ್ರಮ ಜರುಗಲೆಂದರು. ಸತೀಶ್ ರೆಡ್ಡಿ ನಮ್ಮ ಕುಟುಂಬದ ವ್ಯಕ್ತಿ, ಹಳೇ ರಾಜಕೀಯ ಮಾಡಲು ಬಿಡಲ್ಲ. ಗಾಳಿ... ಗಾಳಿ ತೆಗೆಯುವ ಮಾತು ಬಿಡು, ಈ ರೀತಿಯ ಅನಧಿಕೃತ ಬ್ಯಾನರ್ ವ್ಯವಸ್ಥೆ ಸರಿಯಲ್ಲ ಇನ್ನು ಮುಂದೆ ಹೀಗೆ ಆಗದಂತೆ ಕ್ರಮ ಜರುಗಿಸಲಿದೆ ಎಂದು ಮೇಯರ್ ಪಿ.ಗಾದೆಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ಮೇಯರ್ ಪಿ.ಗಾದೆಪ್ಪ, ಮುಖಂಡರುಗಳಾದ ಎ.ಮಾನಯ್ಯ, ಬಿ.ರಾಂಪ್ರಸಾದ್, ಕೆರ ಕೊಡಪ್ಪ, ಮಂಜುಳ ,ವೆಂಕಟೇಶ್ ಹೆಗಡೆ, ಮೊದಲಾದವರು.

## ಯುವ ಪರಿವರ್ತಕರ ಹುದ್ದೆಗೆ ಅರ್ಜಿ ಆಹ್ವಾನ

- **ಮಲ್ಲಮ್ಮ ನುಡಿ ವಾರ್ತೆ ಬೀದರ:**

2025-26ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೀದರ ಜಿಲ್ಲೆಯ ಜನ ಆರೋಗ್ಯ ಸಂಸ್ಥೆ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್ ಬೆಂಗಳೂರು ಇವರಿಂದ ಅನುಷ್ಠಾನಗೊಳಿಸುತ್ತಿರುವ ಹಾಗೂ ರಾಜ್ಯ ಸರ್ಕಾರದ ಅನುದಾನಿತ ಯೋಜನೆ ಯುವ ಸ್ಪಂದನ ಅಡಿಯಲ್ಲಿ ಯುವ ಪರಿವರ್ತಕರ ಕೆಲಸ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದ್ದರಿಂದ 21 ರಿಂದ 35 ವರ್ಷದೊಳಗಿನ ಪದವಿ ಹಾಗೂ ಮೇಲ್ಪಟ್ಟ ಪದವಿ ತೇರ್ಗಡೆ ಹೊಂದಿರುವ, ಕನ್ನಡ ಸ್ಪಷ್ಟವಾಗಿ ಮಾತನಾಡುವ, ಸಮುದಾಯದಲ್ಲಿ ಕೆಲಸ ಮಾಡಲು ಆಸಕ್ತಿ ಹಾಗೂ ಹುಮ್ಮಸ್ಸು, ಉತ್ತಮ ಅಂತರ್ವ್ಯಕ್ತೀಯ, ಸಂವಹನ ಕೌಶಲ್ಯದ ಜೊತೆಗೆ ಸಂವಾದ ಕೌಶಲ್ಯಗಳನ್ನು ಹೊಂದಿರುವವರು ದಿನಾಂಕ: 15-01-2026 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಅಭ್ಯರ್ಥಿಗಳಿಗೆ ಮೊ=ದಲ ಆದ್ಯೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08482-227222 ಯುವ ಸಮಾಲೋಚಕರು ಬೀದರ ಮೊಬೈಲ್ ಸಂಖ್ಯೆ:

## ನಾಡ ಕಚೇರಿಯಿಂದ ತ್ವರಿತ ಸೇವೆ: ರಾಜ್ಯದಲ್ಲಿಯೇ ಕಲಬುರಗಿ ನಂಬರ್-1

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ ಡಿಸೆಂಬರ್-2025ರ ಮಾಹೆಯಲ್ಲಿ ಸ್ವೀಕರಿಸಿದ 39,964 ಅರ್ಜಿಗಳಲ್ಲಿ 38,133 ಅರ್ಜಿಗಳನ್ನು ಕಾಲಮಿತಿಯಲ್ಲಿಯೇ ವಿಲೇವಾರಿ ಮಾಡಿ ಶೇ.95.42ರಷ್ಟು ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲಿಯೇ ಅರ್ಜಿ ವಿಲೇವಾರಿಯಲ್ಲಿ ಕಲಬುರಗಿ ಜಿಲ್ಲೆ ಮತ್ತೆ ನಂಬರ್-1 ಸ್ಥಾನ ಪಡೆದಿದೆ.

ನಾಡ ಕಚೇರಿಯಿಂದ ಕಂದಾಯ ಇಲಾಖೆಯ 41 ಸೇವೆ ನೀಡಲು ಡಿಸೆಂಬರ್-2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳನ್ನು ನಿಗಧಿತ ಅವಧಿಯಲ್ಲಿ 9.31 ವಿಲೇವಾರಿ ಸೂಚ್ಯಂಕದ ಪ್ರಕಾರ ವಿಲೇವಾರಿ ಮಾಡುವ ಮೂಲಕ ಈಶಾನ್ಯದ ತುದಿಯಲ್ಲಿರುವ ಕಲಬುರಗಿ ಜಿಲ್ಲೆ ಸಾರ್ವಜನಿಕರ ಸೇವೆ ವಿಲೇವಾರಿಯಲ್ಲಿ ರಾಜ್ಯದ ಗಮನ ಸೆಳೆದಿದೆ.

ಕಳೆದ 2025ರ ಜುಲೈ ಮಾಹೆಯಲ್ಲಿಯೂ ಕಲಬುರಗಿ ಜಿಲ್ಲೆ ಅಟಲ್‌ಜೀ ಜನಸ್ನೇಹಿ ಕೇಂದ್ರದಿಂದ ಅರ್ಜಿ ವಿಲೇವಾರಿಯಲ್ಲಿ ಮೊದಲನೇ ಸ್ಥಾನ ಪಡೆದಿತ್ತು. ಇದೀಗ ಮತ್ತೆ ವಿಲೇವಾರಿಯಲ್ಲಿ ಅಗ್ರ ಸ್ಥಾನ ಪಡೆದುಕೊಂಡಿ-ದ್ದು, ಕಲಬುರಗಿ ಜಿಲ್ಲಾಡಳಿತ ಕಾರ್ಯವೈಖರಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನಲ್ಲಿ ಸ್ವೀಕೃತ 3,344 ರಲ್ಲಿ 3,070, ಆಳಂದನಲ್ಲಿ 4,880 ರಲ್ಲಿ 4,572, ಚಿಂಚೋಳಿಯಲ್ಲಿ ಸ್ವೀಕೃತ 2,654 ರಲ್ಲಿ 2,599, ಚಿತ್ತಾಪುರನಲ್ಲಿ ಸ್ವೀಕೃತ 3,330 ರಲ್ಲಿ 3,285, ಜೇವರ್ಗಿಯಲ್ಲಿ ಸ್ವೀಕೃತ 5,081 ರಲ್ಲಿ 4,905, ಕಲಬುರಗಿಯಲ್ಲಿ ಸ್ವೀಕೃತ 9,566 ರಲ್ಲಿ 8,926, ಕಾಳಗಿಯಲ್ಲಿ ಸ್ವೀಕೃತ 1,950 ರಲ್ಲಿ 1,881, ಕಮಲಾಪುರನಲ್ಲಿ ಸ್ವೀಕೃತ 1,782 ರಲ್ಲಿ 1,691, ಸೇಡಂನಲ್ಲಿ ಸ್ವೀಕೃತ 3,101 ರಲ್ಲಿ 3,051, ಶಹಾಬಾದನಲ್ಲಿ ಸ್ವೀಕೃತ 2,043 ರಲ್ಲಿ 2,008, ಯಡ್ರಾಮಿಯಲ್ಲಿ ಸ್ವೀಕೃತ 2,233 ರಲ್ಲಿ 2,145 ಅರ್ಜಿ ವಿಲೇವಾರಿ ಮಾಡುವ ಜಿಲ್ಲೆಯ ಜನತೆಗೆ ನಾಡ ಸೇವೆ ಕಚೇರಿ ತ್ವರಿತವಾಗಿ ಸ್ಪಂದಿಸಿದಿರುವುದು ಅಂಕಿ ಅಂಶಗಳು ಖಚಿತಪಡಿಸಿವೆ.

ಜಿಲ್ಲೆಯಲ್ಲಿನ ಈ ಕಾರ್ಯ ಸಾಧನೆಗೆ ನಾಡ ಕಛೇರಿ ಮತ್ತು ಆಟಲ್‌ಜೀ ಜನಸ್ನೇಹಿ ಕೇಂದ್ರದ ಸಿಬ್ಬಂದಿಗಳ ಸಹಕಾರ, ಕಾರ್ಯತತ್ಪರತೆ ಕಾರಣವಾಗಿರುತ್ತದೆ. ಇದಕ್ಕಾಗಿ ಶ್ರಮಿಸಿದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿರುವ ಡಿ.ಸಿ ಬಿ.ಫೌಜಿಯಾ ತರನ್ನುಮ್ ಅವರು, ಮುಂದಿನ ದಿನಗಳಲ್ಲಿ ಇದೇ ರೀತಿಯ ಸಾಧನೆ ಮಾಡುವಂತೆ ಸಿಬ್ಬಂದಿಗಳನ್ನು ಹುರಿದುಂಬಿಸಿದ್ದಾರೆ.

ಟಾಪ್ 10ನಲ್ಲಿ ಕಲ್ಯಾಣದ 4 ಜಿಲ್ಲೆಗಳು: ಇನ್ನು ರಾಜ್ಯಾದ್ಯಂತ ಜಿಲ್ಲಾವಾರು ಅರ್ಜಿ ವಿಲೇವಾರಿ ಪಟ್ಟಿ ಅವಲೋಕಿಸಿದಾಗ ಅಗ್ರ 10 ರಲ್ಲಿ ಕಲಬುರಗಿ, ವಿಜಯನಗರ ಜಿಲ್ಲೆಗಳು ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನ ಪಡೆದರೆ, ರಾಯಚೂರು ನಾಲ್ಕನೇ ಮತ್ತು ಯಾದಗಿರಿ ಜಿಲ್ಲೆ ಒಂಭತ್ತನೇ ಸ್ಥಾನ ಪಡೆದಿದೆ. ಈ ಮೂಲಕ ಕಲ್ಯಾಣ ಕರ್ನಾಟಕ ಭಾಗದ 4 ಜಿಲ್ಲೆಗಳು ಸಾರ್ವಜನಿಕ ಸೇವೆ ನೀಡುವಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡಂತಾಗಿದೆ.

# ಅಟಲ್ ಬಿಹಾರಿ ವಾಜಪೇಯಿ ತತ್ವ ಸಿದ್ಧಾಂತಗಳು ಅಗತ್ಯ: ಶ್ರೀಧರ ಸಾಹುಕಾರ



ವರದಿ:ಡಿ.ಕೆ ದೇವಿಂದ್ರ ಯಾದಗಿರಿ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಮಾಜಿ ಪ್ರಧಾನಿ, ಭಾರತರತ್ನ, ಅಪ್ರತಿಮ ದೇಶಭಕ್ತ, ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೀ ಅವರ ಜನ್ಮದಿನದ ಅಂಗವಾಗಿ ಸ್ಟೇಷನ್ ಬಜಾರ್ ಸರ್ಕಾರಿ ಪ್ರೌಢಶಾಲೆಯ ಮೈದಾನದಲ್ಲಿ ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರ ನೇತೃತ್ವದಲ್ಲಿ ಸಸಿ ನೆಟ್ಟು ಒಂದೊಂದು ಸಸಿಗೂ ಒಬ್ಬ ವಿದ್ಯಾರ್ಥಿಯನ್ನು ನೇಮಿಸಿ ಆ ಸಸಿಯನ್ನು ಸಂರಕ್ಷಿಸಲು ತಿಳಿಸಿ ಮಾತನಾಡಿದ ಅವರು ಇಂದಿನ ದಿನಮಾನಗಳಲ್ಲಿ ಆರೋಗ್ಯಕರ ಬದುಕನ್ನು ನಡೆಸಲು ಉತ್ತಮ ಜೀವನ ಶೈಲಿಯೊಂದಿಗೆ ಸ್ವಚ್ಚ ಹಾಗೂ ಉತ್ತಮ ಪರಿಸರ ಅತಿ ಅಗತ್ಯವಾಗಿದ್ದು, ಅದಕ್ಕಾಗಿ ನಾವು ಮರ ಗಿಡಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವ ಮೂಲಕ ಪ್ರಕೃತಿಗೆ ನಮ್ಮ ಕೊಡುಗೆ ನೀಡುವುದು ಪ್ರತಿಯೊಬ್ಬರ ಕರ್ತವ್ಯ, ದಿನೇ ದಿನೇ ಹೆಚ್ಚುತ್ತಿರುವ ಭೂಮಿಯ ತಾಪಮಾನವನ್ನು ಕಡಿಮೆ ಮಾಡಲು ಹಾಗೂ ಹಸಿರನ್ನು ಹೆಚ್ಚಿಸಿ ಶುದ್ಧ ಗಾಳಿಯನ್ನು ಪಡೆಯಲು ಪ್ರತಿಯೊಬ್ಬ ಮಗು, ಪ್ರತಿಯೊಬ್ಬ ನಾಗರಿಕರು ಮರಗಿಡಗಳನ್ನು ನೆಟ್ಟು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ಯುವಮುಖಂಡ ಮಹೇಶ್ ರೆಡ್ಡಿ ಮುದ್ನಾಳ್, ಸ್ಟೇಷನ್ ಬಜಾರ್ ಶಾಲೆಯ ಮುಖ್ಯೋಪಾಧ್ಯಾಯರಾದ ಮಲ್ಲಿಕಾರ್ಜುನ ಪೂಜಾರಿ, ಹಿರಿಯ ಮುಖಂಡರಾದ ಸಿದ್ದಣ್ಣಗೌಡ ಕಾಡಮ್ಮನೂರ್, ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟರೆಡ್ಡಿ ಅಬ್ಬೆತುಮಕೂರ್, ಜಿಲ್ಲಾ ಉಪಾಧ್ಯಕ್ಷ ಪ್ರಭಾವತಿ ಕಲಾಲ್, ಜಿಲ್ಲಾ ಕಾರ್ಯದರ್ಶಿ ವಿಜಯಲಕ್ಷ್ಮೀ ನಾನೇಕ್, ಮಲ್ಲಿಕಾರ್ಜುನ್ ಹೊನಗೇರ, ಶಕುಂತಲಾ ಗುಜಲೂರು, ಭೀಮಬಾಯಿ ಶೇಂಡಗಿ, ರಮಾದೇವಿ ಕವಲಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ರಾಚಯ್ಯ ಸ್ವಾಮಿ, ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾದ ಸಿ. ಮಲ್ಲು ಕೋಲಿವಾಡ, ಮಂಜುನಾಥ್ ಗುತ್ತೇದಾರ, ಅನಿಲ್ ಕರಾಟೆ, ಹಣಮಂತ ವಲ್ಯಾಪುರೆ, ವಿಕಾಸ್ ಚವ್ಹಾಣ, ಮರಲಿಂಗ ಜಿನಿಕೇರಿ, ವಿಶ್ವನಾಥ ಅಬ್ಬೆತುಮಕೂರ್, ತಿರುಪತಿ ಗುಂಡಳ್ಳಿ, ವಿಶ್ವನಾಥ ಜಾಕನಹಳ್ಳಿ, ಭೀಮು ದೇಸಾಯಿ, ಸಲ್ಲು ದಂಡಿನ್, ಸುನಿಲ್ ಕಡೇಚೂರು, ಶಿವು ಪಾಗಲಾಪುರ್, ಸೇರಿದಂತೆ ಶಾಲೆಯ ಶಿಕ್ಷಕರು ಮುದ್ದು ಮಕ್ಕಳು ಉಪಸ್ಥಿತರಿದ್ದರು.

# ಪ್ರವೃತ್ತಿಯ ಹಿಂದೆ ಹೋದವರಿಗೆ ನಿವೃತ್ತಿ ಎಂಬುದಿಲ್ಲ : ಜಗದೀಶ ನಾಯಕ



- ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಅಂಕೋಲಾದಿಂದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ನೆವಳ್ಸೆಯ ವಯೋನಿವೃತ್ತ ಶಿಕ್ಷಕ ಪಾಂಡುರಂಗ ರಾಮ ನಾಯ್ಕರನ್ನು ಬಬ್ರುವಾಡದ ಅವರ ಮನೆಯಂಗಳದಲ್ಲಿ ಬೀಳ್ಕೊಡುವ ಕಾರ್ಯಕ್ರಮ ನಡೆಯಿತು. ವಿಶ್ರಾಂತ ಶಿಕ್ಷಕ ಪಾಂಡುರಂಗ ರಾಮ ನಾಯ್ಕರನ್ನು ಸನ್ಮಾನಿಸಿ, ಗೌರವಿಸಿ ಮಾತನಾಡಿದ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ ಜಿ. ನಾಯಕ ಹೊಸ್ಕೇರಿ, ಪ್ರವೃತ್ತಿಯ ಹಿಂದೆ ಹೋದವರಿಗೆ ನಿವೃತ್ತಿ ಎನ್ನುವುದು ಇರುವುದಿಲ್ಲ. ನಿವೃತ್ತ ಶಿಕ್ಷಕರು ತಮ್ಮ ಸೇವಾವಧಿಯಲ್ಲಿ ಅಪಾರ ಜ್ಞಾನವನ್ನು ಗಳಿಸಿರುತ್ತಾರೆ. ಶಿಕ್ಷಕರು ಸೇವಾವಧಿಯಲ್ಲಿ ಗಳಿಸಿದ ತಮ್ಮ ಅಪಾರವಾದ ಜ್ಞಾನ ಭಂಡಾರವನ್ನು ಸಮಾಜಕ್ಕೂ ಧಾರೆ ಎರೆಯಬೇಕು. ನಿವೃತ್ತಿಯ ನಂತರದಲ್ಲಿ ತಮ್ಮ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕು. ಇನ್ನಷ್ಟು ಸಮಾಜಮುಖಿವಾಗಿ ತಮ್ಮನ್ನು ತಾವು ತೆರೆದುಕೊಳ್ಳಬೇಕು ವಿಶ್ರಾಂತ ಶಿಕ್ಷಕರಾದ ಪಾಂಡುರಂಗ ನಾಯ್ಕರವರು ಕ್ರಿಯಾಶೀಲರು ಹಾಗೂ ಸ್ನೇಹಮಯಿ ವ್ಯಕ್ತಿತ್ವವನ್ನು ಹೊಂದಿರುವವರು ಎಂದರು. ಸಂಘದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ವಿಶ್ರಾಂತ ಶಿಕ್ಷಕ ಪಾಂಡುರಂಗ ರಾಮ ನಾಯ್ಕ, ತಾಲೂಕಿನ ಶಿಕ್ಷಕರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ ನನ್ನ ಹೆಮ್ಮೆಯ ಸಂಘ. ನನ್ನ ಮನೆ ಬಾಗಿಲಿಗೆ ಬಂದು ನನ್ನ ಮನೆಯಂಗಳದಲ್ಲಿ ನನ್ನನ್ನು ಸನ್ಮಾನಿಸಿ, ಗೌರವಿಸಿ ಬೀಳ್ಕೊಟ್ಟಿರುವುದು ಅತೀವ ಹೆಮ್ಮೆ ಹಾಗೂ ಸಂತಸವನ್ನು ತಂದಿದೆ. ಶಿಕ್ಷಕರ ಪರವಾದ ಇಂತಹ ಚಟುವಟಿಕೆಗಳು ನಿರಂತರವಾಗಿ ಮುಂದುವರಿಯಲಿ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ರಾಜು ಎಚ್. ನಾಯಕ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿ, ಪಾಂಡುರಂಗ ನಾಯ್ಕರು ಕ್ರಿಯಾಶೀಲ ಚಟುವಟಿಕೆಗಳಿಂದ ಮಾದರಿಯಾಗಿದ್ದಾರೆ ಎಂದರು. ಸದಸ್ಯೆ ಶೋಭಾ ಎಸ್. ನಾಯಕ, ಶ್ರೀನಿವಾಸ ನಾಯಕ, ಹೇಮಾವತಿ ನಾಯ್ಕ ಅಭಿನಂದಿಸಿ ಮಾತನಾಡಿದರು. ಸಂಘದ ಪದಾಧಿಕಾರಿಗಳಾದ ತುಕಾರಾಮ ಬಂಟ, ದಿವಾಕರ ದೇವನಮನೆ, ಆನಂದು ವಿ. ನಾಯ್ಕ, ವಿನಾಯಕ ಪಿ. ನಾಯ್ಕ, ವೆಂಕಮ್ಮ ಬಿಂದೇಶ ನಾಯಕ, ಸಿ.ಡಿ. ಗಾಂವಕರ, ವಿಶ್ರಾಂತ ಶಿಕ್ಷಕರಾದ ರೋಹಿದಾಸ ಬಂಟ, ಸಂಜೀವ ನಾಯಕ, ಕುಟುಂಬಸ್ಥರಾದ ಚಂದ್ರಕಾಂತ ರಾಮ ನಾಯ್ಕ, ಮಂಗಲಾ ನಾಯ್ಕ, ಮೀರಾ ನಾಯ್ಕ, ಶೋಭಾ ನಾಯ್ಕ, ರತ್ನಾಕರ ರಾಮ ನಾಯ್ಕ ಮುಂತಾದವರು ಉಪಸ್ಥಿತರಿದ್ದರು. ಮಣಿಕಂಠ ನಾಯ್ಕ, ರಕ್ಷಿತಾ ನಾಯ್ಕ, ರಾಜಶ್ರೀ ನಾಯ್ಕ, ದಿವ್ಯಶ್ರೀ ನಾಯ್ಕ ಸಹಕರಿಸಿದರು. ಸಂಘದ ಉಪಾಧ್ಯಕ್ಷ ಮಂಜುನಾಥ ವೆಂಕಟರಮಣ ನಾಯಕ ಅಭಿನಂದನಾ ನುಡಿಗಳೊಂದಿಗೆ ವಂದಿಸಿದರು.

# ಸಾಹಿತ್ಯ ಲೋಕಕ್ಕೆ ಕುವೆಂಪು ಮಾದರಿ: ದೇವಿಂದ್ರ



- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಸಾಹಿತ್ಯದ ಮೂಲಕ ವಿಶ್ವ ವಿಖ್ಯಾತಿ ಪಡೆಯುವಲ್ಲಿ ರಾಷ್ಟ್ರಕವಿ ಕುವೆಂಪುರವರ ಕೊಡುಗೆ ಬಹಳ ಮಹತ್ವವಾಗಿದೆ ಎಂದು ಉಪನ್ಯಾಸಕ ದೇವಿಂದ್ರ ಕಿಲ್ಲನಕೇರಾ ಹೇಳಿದರು.

ನಗರದ ಲಿಂಗೇರಿ ಕೋನಪ್ಪ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ನಡೆದ ಜಿಲ್ಲಾ ಆಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾದಗಿರಿ ವತಿಯಿಂದ ಆಯೋಜಿಸಿರುವ ವಿಶ್ವಮಾನವ ದಿನಾಚರಣೆ–ಯ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಹೇಳಿದರು.

ರಾಷ್ಟ್ರಕವಿ ಕುವೆಂಪು ಅಂ–ದರೆ ಕೂಪ್ಪಳ್ಳಿ ವೆಂಕಟಪ್ಪನ ಮಗ ಪುಟ್ಟಪ್ಪ ರವರು ಕನ್ನಡದ ಮಹಾನ್ ಕವಿ, ಕನ್ನಡದ ಅಗ್ರಮಾನ್ಯ ಕವಿ, ವಿಮರ್ಶಕರು, ಕಾದಂಬರಿಕಾರರು ನಾಟಕಕಾರರು, ಸಮಾಜದ ಚಿಂತಕರಾಗಿ ನಾಡಿಗೆ ಹೆಸರಾಗಿದ್ದಾರೆ, ಕನ್ನಡಕ್ಕೆ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿ ಬಂದಿರುವುದು ಬಹಳ ಹೆಮ್ಮೆಯ ವಿಷಯ ಹಾಗೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ಕನ್ನಡ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ, ಮಹಾಕಾವ್ಯಗಳನ್ನು ರಚಿಸಿ, ಅನೇಕ ಪ್ರಶಸ್ತಿಗಳನ್ನು ಸ್ವೀಕರಿಸಿ ವಿಶ್ವಮಾನವ ಎಂದು ಕಲ್ಪನೆ ಯನ್ನು ಸಾರಿದ್ದಾರೆ.

ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿಯ ಬೆಳಕಿನಲ್ಲಿ ಮನುಷ್ಯನ ವ್ಯಕ್ತಿತ್ವದ ಮುಕ್ತ ಬೆಳವಣಿಗೆಯ ಕಾಳಜಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ, ಕುವೆಂಪು ಅವರ ಚಿಂತನೆ ಅವರ ಕೊನೆಯ ವರ್ಷದಲ್ಲಿ ದೇಶ, ಭಾಷೆ, ಜಾತಿ, ಮತ, ಸಿದ್ಧಾಂತಗಳು ಹಾಗೂ ಸಾಹಿತ್ಯದ ಮೆರಗನ್ನು ಹೆಚ್ಚಿಸಿದರು. ವಿಶ್ವದೃಷ್ಟಿಯನ್ನು ಹೊಂದಿದ್ದು ಅದರ ಫಲವೇ ವಿಶ್ವಮಾನವ ಸಂದೇಶ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಶ್ರೀಮತಿ ಉತ್ತರ ದೇವಿ ಮಠಪತಿ, ಪ್ರಾಂಶುಪಾಲ ಗುರಪ್ಪಚಾರ್ಯ, ಗುರುಪ್ರಸಾದ್ ವೈದ್ಯ, ದುರ್ಗಪ್ಪ ಪೂಜಾರಿ, ಹಳಳಪ್ಪ ಪೂಜಾರಿ, ಬಸವರಾಜ್ ಮಾನೆಗಾರ್, ಸುವರ್ಣ ಹೊಗಾರ, ಶಾಂತ ಸಜ್ಜನ್, ರಾಮಲಿಂಗಪ್ಪ ಮುಂತಾದ ಹಿರಿಯ ಸಾಹಿತಿಗಳು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕುವೆಂಪು ರವರ ಬಗ್ಗೆ ಸ್ವ ರಚಿತ ಕವನ ವಾಚಿಸಿ ಪ್ರಮಾಣ ಪತ್ರವನ್ನು ಸ್ವೀಕರಿಸಿದರು.

# ಬುದ್ಧ ಬಸವ ಅಂಬೇಡ್ಕರ್ ರವರ ತತ್ವ ಅವಶ್ಯಕತೆ: ಖಾಸಮಠದ ಶ್ರೀ

ವರದಿ:ಡಿ.ಕೆ ದೇವಿಂದ್ರ ಯಾದಗಿರಿ

- ಮಲ್ಲಮ್ಮ ನುಡಿ ವಾರ್ತೆ



ಪ್ರಗತಿಪರಚಿಂತನೆಗಳುಮೂಢನಂಬಿಕೆಗಳು ನಂಬಿ ಜನ ಜೀವನವನ್ನು ನಡೆಸುವುವಲ್ಲಿ ವಿಫಲರಾಗಿದ್ದಾರೆ, ಬಸವ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು ನಾಡಿಗೆ ಅವಶ್ಯಕತೆ ಇದೆ, ಡಾ. ಬಿ.ಆರ್. ಅಂಬೇಡ್ಕರ್ ನೀಡಿರುವ ಸಂವಿಧಾನವನ್ನು ಜೀವನ ನಡೆಸಲು ಸಾಕ್ಷಿಯಾಗಿದೆ ಎಂದು ಗುರುಮಿಠಕಲ್ ಖಾಸಮಠದ ಶ್ರೀ ಶಾಂತವೀರ ಮುರುಗರಾಜೇಂದ್ರ ಮಹಾಸ್ವಾಮಿಗಳು ಹೇಳಿದರು. ನಗರದ ದಿ.ವಿಶ್ವನಾಥರೆಡ್ಡಿ ಗೌಡ ಮುದ್ನಾಳ್ ಸಭಾಂಗಣದಲ್ಲಿ ಭೀಮ ಜ್ಯೋತಿ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ವತಿಯಿಂದ ನಡೆದ ಡಾ.ಬಿ.ಆರ್. ಅಂಬೇಡ್ಕರ್ ರವರ ಜೀವನದ ಕುರಿತು ನಾಟಕ ಪ್ರದರ್ಶನ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸೇವರತ್ನ ಪ್ರಶಸ್ತಿ ಸಮಾರಂಭದಲ್ಲಿ ದಿವ್ಯಾನಿಧ್ಯ ವಹಿಸಿ ಮಾತನಾಡಿದರು.

ಸಮಾಜದಲ್ಲಿ ಉತ್ತಮ ನಡತೆ ಸಮನ್ವಯ ಬಾಧ್ಯತೆ ರಾಷ್ಟ್ರೀಯ ಏಕ್ಯತೆಯ ಮೂಡುವಲ್ಲಿ ನಾವೆಲ್ಲ ಒಂದಾಗಿ ನಡೆಯಬೇಕು ಆ ದಶದಲ್ಲಿ ಭೀಮಾ ಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆಯ ಕಾರ್ಯ ಶ್ಲಾಘನೀಯ. ಸವಿಧಾನದ ಕುರಿತು ಜಾಗೃತಿ ಮೂಡಿಸಿ ಪ್ರತಿಯೊಬ್ಬರಿಗೂ ಅರಿವು ಮೂಡುವಂತ ದೃಶ್ಯಾವಳಿಯಲ್ಲಿ ನಾಟಕದ ಅಭಿನಯದ ಮೂಲಕ ಪ್ರಸ್ತಾವನೆ ಮಾಡಿ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಮಹಾನ್ ನಾಯಕರ ಜೀವನ ಚರಿತ್ರೆಯನ್ನು ಬಿತ್ತುವ ಕೆಲಸ ಸಂಸ್ಥೆ ಮಾಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಾರ್ವಜನಿಕ ಶಾಲಾ ಶಿಕ್ಷಣ ಉಪ ನಿರ್ದೇಶಕ ಚನ್ನಬಸಪ್ಪ ಮುಧೋಳ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಎಸ್.ಎಸ್. ಚನ್ನಬಸಪ್ಪ, ಉದ್ಯಮಿ ಹಾಗೂ ಶಶಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಶಿರಗೋಳ, ಜಿಲ್ಲಾ ಪ/ಪಂ ದೌರ್ಜನ್ಯ ತಡೆ–ಯ ಸದಸ್ಯ ಮರೆಪ್ಪ ಚಟ್ಟರ್ಕರ್, ಸಂಸ್ಥೆಯ ಅಧ್ಯಕ್ಷ ಭೀಮಶಂಕರ್ ಎಂ ಯರಗೋಳ, ಕಾಲೇಜಿನ ಪ್ರಾಂಶುಪಾಲ ಡಾ.ಸುಭಾಷಚಂದ್ರ ಕೌಲಗಿ, ಸಾಯಿಬಣ್ಣ ಕುರಕುಂದಿ, ಶ್ರೀಶೈಲ ಹೊಸಮನಿ, ಮಲ್ಲಿಕಾರ್ಜುನ್ ಗೋಸಿ, ಪ್ರಭು ಬುಕಲ್, ಅಶೋಕ್ ಗೌಡ, ಕಾಳಪ್ಪ, ಬಂದಪ್ಪ ಕಟ್ಟಿಮನಿ, ಹಂಪಯ್ಯ ಯಡ್ಡಳ್ಳಿ, ಮಹಾದೇವ ಸೀತಾರಿ ಉಪಸ್ಥಿತರಿದ್ದರು.

ಈ ವೇಳೆಯಲ್ಲಿ ಅಂಬೇಡ್ಕರ್ ಗೀತೆಗೆ ಭರತನಾಟ್ಯ ಭವಾನಿ, ಅಂಬೇಡ್ಕರ್ ನೃತ್ಯ ಅಂಬಿಕಾ ಹಾಗೂ ಸಂಗಡಿಗರು,

ಅಂಬೇಡ್ಕರ್ ಗೀತೆ ಸೀತಮ್ಮ ಹಾಗೂ ಸಂಗಡಿಗರು, ತುಂಗಭದ್ರ ಕಲಾತಂಡ ವಿಜಯನಗರ ಜಿಲ್ಲೆ ಇವರಿಂದ ನಮ್ಮ ಸಂವಿಧಾನ ನಾಟಕ ಪ್ರದರ್ಶನ ನಡೆಯಿತು ನೋಡುಗರ ಗಮನ ಸೆಳೆಯಿತು. ಕಾರ್ಯಕ್ರಮವನ್ನು ರೇಣುಕಾ ಕುಂಬಾರಹಳ್ಳಿ, ಮಾಲಾಶ್ರೀ ಬಿ ಪ್ರಾರ್ಥಿಸಿದರು, ದೇವಿಂದ್ರ ಧೋತ್ರೆ ಸ್ವಾಗತಿಸಿ, ವಂದಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸೇವರತ್ನ ಪ್ರಶಸ್ತಿ ಪುರಸ್ಕೃತರಾದ ಧಾರ್ಮಿಕ ಕ್ಷೇತ್ರ ಶ್ರೀ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳು, ನ್ಯಾಯಾಂಗ ಕ್ಷೇತ್ರದಿಂದ ಗೌರವಾನ್ವಿತ ಮರಿಯಪ್ಪ, ಸಾಮಾಜಿಕ ಕ್ಷೇತ್ರ ಎಸ್. ಎಸ್. ಚನ್ನಬಸಪ್ಪ, ವೈದ್ಯಕೀಯ ಕ್ಷೇತ್ರ ಡಾ. ಮಹೇಶ ಬಿರಾದಾರ, ಸಾಮಾಜಿಕ ಹೋರಾಟಗಾರ ಮರೆಪ್ಪ ಚಟ್ಟರ್ಕರ್, ಶಿಕ್ಷಣ ಕ್ಷೇತ್ರ ಬಾಬು ಗಂಗು ಚೌವ್ಹಾಣ ರವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

# ಉದ್ಬಾಳ (ಯು) ಗ್ರಾಮದ ಶ್ರೀ ಅಂಬಾದೇವಿ ಪುರಾಣ, ಕಳಸ ಮೆರವಣಿಗೆ ನಿಷೇಧ ಆದೇಶ ತೆರವು

- ಮಲ್ಲಮ್ಮ ನುಡಿ ವಾರ್ತೆ ರಾಯಚೂರು:

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ(ಯು) ಗ್ರಾಮದಲ್ಲಿ 3–1–2026ರಂದು ಜರುಗುವ ಶ್ರೀ ಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಆಚರಿಸುವುದು ಹಾಗೂ ಮರವಣಿಗೆ ಮಾಡುವದನ್ನು ನಿಷೇಧಿಸಿರುವ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಮಸ್ಕಿ ತಹಶೀಲ್ದಾರರು ದಿನಾಂಕ 31–12–2025 ರಂದು ಖುದ್ದಾಗಿ ಹಾಗೂ ಬಳಗಾನೂರು ಪಿ.ಎಸ್.ಐ. ಅವರೊಂದಿಗೆ ಬಳಗಾನೂರು ಠಾಣಾ ವ್ಯಾಪ್ತಿಯ ಉದ್ಬಾಳ ಗ್ರಾಮಕ್ಕೆ ತೆರಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಜನಗಳೊಂದಿಗೆ ಶಾಂತಿ ಸಭೆ ನಡೆಸಿ ಶ್ರೀ ಅಂಬಾದೇವಿ ಪುರಾಣ ಹಾಗೂ ಕಳಸ ಮರವಣಿಗೆ ಜರುಗುವ ಸಂದರ್ಭದಲ್ಲಿ ಯಾವುದೇ ಗಲಾಟೆಯಾಗದಂತೆ ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ತಿಳಿ ಹೇಳಿದ್ದಾರೆ. ಜನ ಪ್ರತಿನಿಧಿಗಳ ಸಮ್ಮುಖದಲ್ಲಿ ಗ್ರಾಮದಲ್ಲಿನ ನಾನಾ ಪಕ್ಷಗಳ ಕಾರ್ಯಕರ್ತರಿಗೆ ಮನವೊಲಿಸಿ ಮುಖಂಡರಿಗೆ ಸದ್ವರ್ತನೆಯಿಂದಿರುವಂತೆ ಸೂಚಿಸಿದ್ದಾರೆ. ಉದ್ಬಾಳ (ಯು) ಗ್ರಾಮಸ್ಥರಿಂದ ಒಪ್ಪಿಗೆ ಪ್ರಮಾಣ ಪತ್ರವನ್ನು ಬರೆಸಿಕೊಳ್ಳಲಾಗಿದೆ. ಶಾಂತಿ ಒಪ್ಪಂದ ನಡೆಸಿ ಇಬ್ಬರ ಕಡೆಯಿಂದಲೂ ಒಪ್ಪಿತ ರೀತಿಯಲ್ಲಿ ಜಾತ್ರಾ ಮಹೋತ್ಸವ ನಡೆಸುವಂತೆ ಊರಿನ ಮುಖಂಡರ ಸಮ್ಮುಖದಲ್ಲಿ ಸಂಧಾನ ನಡೆಸಿ ಜಾತ್ರಾಮಹೋತ್ಸವ ನಡೆಸುವಂತೆ ತಿಳಿ ಹೇಳಲಾಗಿದೆ. ಆದ್ದರಿಂದ ಶ್ರೀ ಅಂಬಾದೇವಿಯ ಜಾತ್ರಾ ಮಹೋತ್ಸವ ನಡೆಸಲು ಸಾರ್ವಜನಿಕರ ಹಿತದೃಷ್ಟಿಯಿಂದ, ಈ ಗ್ರಾಮದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ, ಮುಂಜಾಗ್ರತಾ ಕ್ರಮದ ದೃಷ್ಟಿಯಿಂದ ದಿನಾಂಕ: 03–01–2026 ರಂದು ಜಾತ್ರಾ ಮಹೋತ್ಸವವನ್ನು ನಡೆಸುವಂತೆ ಅನುಮತಿ ನೀಡಲು ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಮಸ್ಕಿ ತಹಸೀಲ್ದಾರರ ವರದಿಯನ್ವಯ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮದಲ್ಲಿ ದಿನಾಂಕ: 03–01–2026 ರಂದು ಜರುಗುವ ಶ್ರೀ ಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆಯನ್ನು ನಡೆಸುವುದನ್ನು ನಿಷೇಧಿಸಿ ಹೊರಡಿಸಿದ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು ಮತ್ತು ತಹಶೀಲ್ದಾರ ಮಸ್ಕಿ ಅವರು ಯಾವುದೇ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಆದೇಶದಲ್ಲಿ ಸೂಚಿಸಿರುತ್ತಾರೆ.

# ತಳವಾರಗೆ ಪಿಎಚ್.ಡಿ



- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿದ್ಯಾರ್ಥಿಯಾದ ವಿಜಯಕುಮಾರ್ ತಳವಾರ ಅವರು ಸಿಂಥೆಸಿಸ್ ಎಂಡ್ ಟ್ರಾನ್ಪೋರ್ಟ್ ಪ್ರಾಪರ್ಟೀಸ್ ಆಫ್ ಮೆಟಲ್ ಆಕ್ಸೈಡ್ ಡೂಪ್ಡ್ ಪಾಲಿನೈಲಾನ್ ಕಂಪೋಸಿಟ್ಸ್ ಎಂಡ್ ಸಮ್ ಅಪ್ಲಿಕೇಶನ್ಸ್ ವಿಷಯ ಕುರಿತು ಮಂಡಿಸಿದ ಮಹಾ ಪ್ರಬಂಧಕ್ಕೆ ಗುಲ್ಬರ್ಗಾ ವಿಶ್ವವಿದ್ಯಾಲಯ ಪಿಎಚ್‌ಡಿ ಪ್ರಧಾನ ಮಾಡಿದೆ. ಇವರಿಗೆ ಗುವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ಬಸವರಾಜ ಸಣ್ಣಕ್ಕಿ ಅವರು ಮಾರ್ಗದರ್ಶಕರ ಮುಖಾಂತರ ಲಭಿಸಿದೆ. ಕಾಲೇಜಿನ ಪ್ರಾಂಶುಪಾಲರು ಶಿಕ್ಷಕರಿಂದ ದವರು ಹಾಗೂ ಸ್ನೇಹಲೋಕದ ಸ್ನೇಹಜೀವಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ಸಹಾಯಧನ ಪಡೆಯಲು ಅರ್ಜಿ ಸಲ್ಲಿಕೆ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳಿಗೆ ಧನಸಹಾಯ ನೀಡಲು ಹಾಗೂ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ/ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು 2025–26ನೇ ಸಾಲಿನ ಸಾಮಾನ್ಯ/ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2026ರ ಜನವರಿ 9 ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ಡಿಸೆಂಬರ್ 1 ರಿಂದ 30 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಧನಸಹಾಯ ಪಡೆಯಲು sevasindhu.karnataka.gov.in ವೆಬ್‌ಸೈಟ್‌ದಲ್ಲಿ 2026ರ ಜನವರಿ 9 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ ಎಂದು ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಕಾಮಗಾರಿ ಪರಿಶೀಲಿಸಿದ ಶಾಸಕ ಬೆಲ್ದಾಳೆ

## ನಿಗದಿತ ಅವಧಿಯೊಳಗೆ ಕೆಲಸ ಮುಗಿಸಲು ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್ ಜ 02: ತಾಲೂಕಿನ ಕಮಠಾಣ–ಬಾವಗಿ ನಡುವಿನ ರಸ್ತೆ ಕಾಮಗಾರಿ ಬರುವ ನಾಲ್ಕು ತಿಂಗಳೊಳಗೆ ಮುಗಿಯಲಿದ್ದು, ಈ ಮಾರ್ಗವನ್ನು ಸಂಪರ್ಕಿಸುವ ಆರೇಳು ಗ್ರಾಮಸ್ಥರಿಗೆ ದಶಕದ ಬಳಿಕ ಉತ್ತಮ ಸಂಪರ್ಕ ವ್ಯವಸ್ಥೆ ಸಿಗಲಿದೆ ಎಂದು ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದರು.

ದಕ್ಷಿಣ ಕ್ಷೇತ್ರದಲ್ಲಿ ಬರುವ ಬೀದರ್ ತಾಲೂಕಿನ ಮಂದಕನಳ್ಳಿ ಸಮೀಪ ಪೇವರ್ ಯಂತ್ರದಿಂದ ನಡೆದ ರಸ್ತೆ ಕಾಮಗಾರಿಯನ್ನು ಶುಕ್ರವಾರ ಪರಿಶೀಲಿಸಿ ಮಾತನಾಡಿದ ಅವರು, ಕೇಂದ್ರ ರಸ್ತೆ ನಿಧಿ(ಸಿಆರ್‌ಎಫ್) ಅಡಿಯಲ್ಲಿ 6 ಕೋಟಿ ರೂ. ವೆಚ್ಚದಲ್ಲಿ ಸುಮಾರು 8 ಕಿಮೀ ಉದ್ದದ್ದ ಕಾಮಗಾರಿ ನಡೆಯುತ್ತಿದೆ. ರಸ್ತೆ ತೀವ್ರ ಹದಗೆಟ್ಟು ಜನರು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದರು. ಸ್ಥಳೀಯರ ಬೇಡಿಕೆಗೆ ಸ್ಪಂದಿಸಿ ಸುಮಾರು 15 ಅಡಿ ಅಗಲದ ಉತ್ತಮ ಡಾಂಬರೀಕರಣ ರಸ್ತೆಗೆ ಅನುದಾನ ಕಲ್ಪಿಸಿ ಕೆಲಸ ಆರಂಭಿಸಲಾಗಿದೆ ಎಂದರು.

ಕ್ಷೇತ್ರ ಸಂಪೂರ್ಣ ಹಳ್ಳಿಗಳಿಂದಲೇ ಕೂಡಿದೆ. ಹೀಗಾಗಿ ಎಲ್ಲ ಗ್ರಾಮೀಣ ಭಾಗಗಳಿಗೆ ಉತ್ತಮ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸಲಾಗುತ್ತಿದೆ. ಉತ್ತಮ ರಸ್ತೆಗಳು ಆಯಾ ಭಾಗದ ವೇಗದ ಅಭಿವೃದ್ಧಿಗೆ ಪ್ರಮುಖ ಸಾಧನ. ಹೀಗಾಗಿ ಜನರ ಬೇಡಿಕೆಯಂತೆ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಈ ರಸ್ತೆ ಕಮಠಾಣಾ, ಮಂದಕನಳ್ಳಿ, ಶಮಶೀರನಗರ, ಕಂಗನಕೋಟ, ಬಾವಗಿ, ಸಿರ್ಸಿ(ಎ), ನೆಲವಾಡ, ಸಂಗೊಳಗಿ ಇತರೆ ಗ್ರಾಮಕ್ಕೆ ಸಂಪರ್ಕ ಸೇತುವೆಯಾಗಲಿದೆ. ಕಾಮಗಾರಿ ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯೊಳಗೆ ಮುಗಿಸುವಂತೆ ಅಧಿಕಾರಿ, ಗುತ್ತಿಗೆದಾರರಿಗೆ ಸೂಚಿಸಿದರು.

ಕೊಟ್ಟರಕಿ ಕನ್ಸಟ್ರಕ್ಶನ್ ಸಂಸ್ಥೆ ಮುಖ್ಯಸ್ಥ ಶಂಕರರಾವ ಕೊಟ್ಟರಕಿ ಅವರು ಕಾಮಗಾರಿಯಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆ ಹಾಗೂ ಉತ್ತಮ ಗುಣಮಟ್ಟದಲ್ಲಿ ಕೆಲಸ ನಡೆಸುತ್ತಿರುವ ಕುರಿತಾಗಿ ಶಾಸಕರಿಗೆ ಮಾಹಿತಿ ನೀಡಿದರು. ಹೈವೇ ತರಹ ಹಳ್ಳಿ ರಸ್ತೆಗೂ ಪೇವರ್ ಮಷೀನ್, ಕಂಪ್ರೆಸ್ಸರ್ ಮಷೀನ್ ಬಳಸಲಾಗುತ್ತಿದೆ. ಇದು ರಸ್ತೆ ಗುಣಮಟ್ಟ ಹೆಚ್ಚು ದಿನ ಕಾಪಾಡಲಿದೆ ಎಂದು ತಿಳಿಸಿದರು. ಈ ವೇಳೆ ಶಾಸಕ ಬೆಲ್ದಾಳೆ ಅವರು ಖುದ್ದು ಪೇವರ್ ಯಂತ್ರ ಸ್ವಲ್ಪ ಹೊತ್ತು ಚಲಾಯಿಸಿ, ವೆಟ್‌ಮಿಕ್ಸ್ ಹೇಗೆ ಸಮರ್ಪಕವಾಗಿ ರಸ್ತೆಗೆ ಬಿಟ್ಟು ಕೆಲಸ ಮಾಡುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡರು. ಗೇಜ್ ಹಿಡಿದು ರಸ್ತೆ ಅಗೆದು, ಗುಣಮಟ್ಟ ಸಹ ಪರಿಶೀಲಿಸಿದರು.

ಪ್ರಮುಖರಾದ ಸುರೇಶ ಮಾಶೆಟ್ಟಿ, ನಾಗಭೂಷಣ ಕಮಠಾಣೆ, ಚಂದ್ರಯ್ಯ ಸ್ವಾಮಿ, ಉಮೇಶ ಯಾಬಾ, ಸಂತೋಷರೆಡ್ಡಿ, ರಾಜಶೇಖರ ನೌಬಾದೆ, ಓಂಕಾರ ಮಜಗೆ, ರಾಜಕುಮಾರ ಪಾಟೀಲ್, ಅನೀಲ ಶೇರಿಕಾರ, ರಾಮಕೃಷ್ಣ, ಮಾರುತಿ ಯಾಬಾ, ಸತೀಶ ಯಾಬಾ, ಅನೀಲ ಗುನ್ನಳ್ಳಿ, ಶ್ರೀನಿವಾಸ್ ಹುಗಾರ, ವಿಜಯಕುಮಾರ ಬಿರಾದಾರ, ಸಂಗಮೇಶ ಹಜ್ಜರಗಿ, ಅರವಿಂದ ಬುಳ್ಳಾ, ಶ್ರೀಕಾಂತ ಯಾಬಾ, ಸಿದ್ದು ಸ್ವಾಮಿ, ವೀರಶೆಟ್ಟಿ ಪಾಟೀಲ್, ವಿನೋದ ಕಮಠಾಣ, ಬಸವರಾಜ ಇತರರಿದ್ದರು.

### ಸ್ಥಳೀಯರು ಖುಷ್: ಶಾಸಕರಿಗೆ ಕೃತಜ್ಞತೆ

ಕಮಠಾಣಾ–ಬಾವಗಿ ರಸ್ತೆ ತೀವ್ರ ಹದಗೆಟ್ಟಿದ್ದರಿಂದ ಈ ಮಾರ್ಗ ಅಪಾಯಕಾರಿಯಾಗಿ ಪರಿಣಮಿಸಿತ್ತು. 8 ಕಿಮೀ ಕ್ರಮಿಸಲು ಅರ್ಧ ಗಂಟೆಗೂ ಹೆಚ್ಚು ಸಮಯ ಬೇಕಾಗುತ್ತಿತ್ತು. ಬೈಕ್, ವಾಹನ ಸವಾರರಿಗೆ ಸುಗಮ ಸಂಚಾರ ಕಷ್ಟಕರವಾಗಿತ್ತು. ಅನೇಕ ಅವಘಡ ಸಹ ಸಂಭವಿಸುತ್ತಿದ್ದವು. ಹಲವಾರು ವರ್ಷಗಳಿಂದ ಈ ಮಾರ್ಗ ಪಕ್ಕಾ ರಸ್ತೆ ಕಂಡಿಲ್ಲ. ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ಪ್ರಯತ್ನ, ಜನಪರ ಕಾಳಜಿಯಿಂದ ಇದೀಗ ಉತ್ತಮ ರಸ್ತೆಯಾಗುತ್ತಿದೆ. ಕೆಲವೇ ದಿನಗಳಲ್ಲಿ ಮಿನಿ ಹೈವೇಯಂಥ ರಸ್ತೆ ವ್ಯವಸ್ಥೆ ಸಿಗಲಿದೆ ಎಂದು ಉಮೇಶ ಯಾಬಾ ಕಮಠಾಣಾ, ಅನೀಲ ಶೇರಿಕಾರ ಮಂದಕನಳ್ಳಿ ಇತರರು ಹರ್ಷ ವ್ಯಕ್ತಪಡಿಸಿದರು. ಶಾಸಕ ಬೆಲ್ದಾಳೆ ಅವರಿಗೆ ಕೃತಜ್ಞತೆ ಸಲ್ಲಿಸಿದರು,

ರಸ್ತೆ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ವಿವಿಧ ಯೋಜನೆಗಳಡಿ ಅನುದಾನ ಒದಗಿಸಲಾಗುತ್ತಿದೆ. ಇನ್ನಷ್ಟು ರಸ್ತೆ ಕಾಮಗಾರಿ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪಶು ವೈದ್ಯಕೀಯ ವಿವಿಯಿಂದ ಕಮಠಾಣದವರೆಗೆ ಡಿವೈಡರ್, ಬೀದಿದೀಪ ಸಹಿತ ದ್ವಿಪಥ ರಸ್ತೆ ನಿರ್ಮಿಸುವ ಯೋಜನೆಯಿದೆ.

–ಡಾ.ಶೈಲೇಂದ್ರ ಬೆಲ್ದಾಳೆ
ಬೀದರ್ ದಕ್ಷಿಣ ಶಾಸಕ

# ಹೊಸ ವರ್ಷಕ್ಕೆ ಬಂಪರ್ ಕೊಡುಗೆ



• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

ಜನರ ಆರೋಗ್ಯರಕ್ಷಣೆಯೇ ವೈದ್ಯರ ಕರ್ತವ್ಯ ಎಂಬ ನಿಟ್ಟಿನಲ್ಲಿ ಬೈಪಾಸ್ ರಸ್ತೆ, ಲಿಂಗಸೂಗೂರ ಪಟ್ಟಣದಲ್ಲಿರುವ ಸೋಹನ್ ಕುಮಾರ್ ಹಲ್ಲಿನ ದವಾಖಾನೆ ವತಿಯಿಂದ "ಜನರು ಜನರಿಗಾಗಿ ಜನರಿಗೋಸ್ಕರ ದಂತ ಸುರಕ್ಷಾ ಯೋಜನೆ"ಯನ್ನು ಜಾರಿಗೆ ತರಲಾಗಿದೆ ಎಂದು ದಂತವೈದ್ಯರಾದ ಡಾ. ಜಗನ್ನಾಥ .

ಪಟ್ಟಣದ ಪತ್ರಿಕಾ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷಗಳಿಂದ ಹಾಗೂ ಲಿಂಗಸುಗೂರು ವ್ಯಾಪ್ತಿಯಲ್ಲಿ ದಂತವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದು, 2026ರ ಹೊಸ ವರ್ಷದ ಪ್ರಯುಕ್ತ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ದಂತಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದರು.

ಈ ಯೋಜನೆಯಡಿ ಸಾರ್ವಜನಿಕರು ಕೇವಲ 3999 ರೂ. ಪಾವತಿಸಿ ದಂತ ಸುರಕ್ಷಾ ಕಾರ್ಡ್ ಪಡೆದುಕೊಂಡಲ್ಲಿ, ಸಾಮಾನ್ಯವಾಗಿ ಸಾವಿರಾರು ರೂಪಾಯಿ ವೆಚ್ಚವಾಗುವ ಹಲವು ದಂತಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಬಹುದಾಗಿದೆ. "ಇನ್ನು ಹಲ್ಲುನೋವು ಇದ್ದರೂ ಹಣದ ಕೊರತೆಯಿಂದ ಚಿಕಿತ್ಸೆ ಮುಂದೂಡುವ ಪರಿಸ್ಥಿತಿ ಇರಬಾರದು. ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಲಭ್ಯವಿಲ್ಲದ ಕೆಲ ಚಿಕಿತ್ಸೆಗಳು ಈ ಯೋಜನೆಯಲ್ಲಿ ಸೇರಿವೆ" "ಈ ಯೋಜನೆ ಜನರ ಆರೋಗ್ಯದ ಭದ್ರತೆಗೆ ದೊಡ್ಡ ಸಹಾಯವಾಗಲಿದೆ. ಎಲ್ಲರೂ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು" ಎಂದು ಡಾ. ಜಗನ್ನಾಥ ಮನವಿ ಮಾಡಿದರು.

ಪತ್ರಿಕಾ ಗೋಷ್ಠಿಯಲ್ಲಿ ರಿಯಾಜ್ ಉಪಸ್ಥಿತರಿದ್ದರು

# ಗಿನ್ನಿಸ್ ದಾಖಲೆಗೆ ಸಂಸ್ಕೃತಿ, ನಿಸರ್ಗ ಸೌದ್ರಿ



• **ಮಲ್ಮನ ನುಡಿ ವಾರ್ತೆ ಮಸ್ಕಿ:**

ಹೈದರಾಬಾದ್ ಗಚ್ಚಿಬೌಲಿ ಸ್ಟೇಡಿಯಮ್‌ನಲ್ಲಿ ಭಾರತ ಆರ್ಟ್ಸ್ ಅಕಾಡೆಮಿ ಹಾಗೂ ತೆಲಂಗಾಣ

ಸರಕಾರ ಸಂಯುಕ್ತ ಆಶ್ರಯ ದಲ್ಲಿ ಕಳೆದ ಡಿ.27 ರಂದು ಏರ್ಪಡಿಸಿದ್ದ 'ಕೂಚುಪುಡಿ ನೃತ್ಯ'ದಲ್ಲಿ ಪಟ್ಟಣದ ಸಂಸ್ಕೃತಿ ನೃತ್ಯ ಶಾಲೆಯ ವಿದ್ಯಾರ್ಥಿನಿಯರಾದ ಸಂಸ್ಕೃತಿ ಹಾಗೂ ನಿಸರ್ಗ ಚೌದ್ರಿ ಅವರು ಪಾಲ್ಗೊಂಡು ಗಿನ್ನಿಸ್ ದಾಖಲೆಗೆ ಸೇರಿದ್ದಾರೆ ಎಂದು ಗಿನ್ನಿಸ್ ದಾಖಲೆಯ ಮುಖ್ಯಸ್ಥ ಬಡಿ ರಿಷಿನಾಥ ತಿಳಿಸಿದ್ದಾರೆ.

ನೃತ್ಯದಲ್ಲಿ ದೇಶದ ನಾನಾ ರಾಜ್ಯಗಳ 5700 ನೃತ್ಯ ಕಲಾವಿದರು ಏಕ ಕಾಲದಲ್ಲಿ ಸಮೂಹ ಕೂಚುಪುಡಿ ನೃತ್ಯದಲ್ಲಿ ಭಾಗವಹಿಸಿದ್ದರು. 9.30 ನಿಮಿಷದ ಕೇದಾರಗಳ ತಿಲ್ಲಾನ ನೃತ್ಯ ಪ್ರದರ್ಶಿಸಿ 2023 ರಲ್ಲಿ ಇದೇ ಸ್ಥಳ ದಲ್ಲಿ ನಡೆದ 3782 ಕಲಾವಿದರ ಗಿನ್ನಿಸ್ ದಾಖಲೆ ಮುರಿದಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿನಿಯರಿಗೆ ಶಾಲಾ ಆಡಳಿತ ಮಂಡಳಿ, ಪೋಷಕರು,ಪಾಲಕರು ಹಾಗೂ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಡಾ.ಅರ್ಚನಾ ಪ್ರವೀಣ್ ಕುಮಾರ ಅವರು ಭರತನಾಟ್ಯ, ಯಕ್ಷಗಾನ,ಕೂಚುಪುಡಿ ನೃತ್ಯಶಿಕ್ಷಕಿಂ-ಯಾಗಿ ವೃತ್ತಿಯಲ್ಲಿ ವೈದ್ಯರಾಗಿ ಪಟ್ಟಣ ಸೇರಿದಂತೆ ಜಿಲ್ಲೆಯಲ್ಲಿ ಪ್ರಖ್ಯಾತಿ ಪಡೆದಿದ್ದಾರೆ.ಇವರ ಗಿನ್ನಿಸ್ ದಾಖಲೆ ಮಾಡಿದ ವಿದ್ಯಾರ್ಥಿನಿಯರಿಗೆ ಮಾರ್ಗದರ್ಶಕರಾಗಿದ್ದರು.ಎಂಬುದು ವಿಶೇಷ ವಾಗಿದೆ.

# ವಿವಿಧೆಡೆ ತೆರಿಗೆ ವಸೂಲಾತಿ ಅಭಿಯಾನ ಇಒ ಭಾಗಿ



ಮಲ್ಮನ ನುಡಿ ವಾರ್ತೆ ಮಸ್ಕಿ :

ತಾಲೂಕಿನ 21 ಗ್ರಾಮ ಪಂಚಾಯತಿಗಳಲ್ಲಿ ಗುರುವಾರ ತೆರಿಗೆ ವಸೂಲಾತಿ ಅಭಿಯಾನ ಜರುಗಿತು.

ಅಂಕುಶದೊಡ್ಡಿ ಗ್ರಾಮ ಪಂಚಾಯತಿಯ ಕಾಟಗಲ್, ಮಾರಲದಿನ್ನಿ ಗ್ರಾಮ ಪಂಚಾಯತಿಯ ಮಾರಲದಿನ್ನಿ, ಉಸ್ಕಿಹಾಳ, ಅಡವಿಬಾವಿ (ಮಸ್ಕಿ) ಗ್ರಾಮ ಪಂಚಾಯತಿಯ ದಿಗ್ಗನಾಯಕಬಾವಿ, ಸಂತೆಕಲ್ಲೂರಿನಲ್ಲಿ ಜರುಗಿದ ಅಭಿಯಾನದಲ್ಲಿ ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ ಮಾತನಾಡಿ, ಆಡಳಿತ ವಿಕೇಂದ್ರಿಕರಣದಲ್ಲಿ ಗ್ರಾಮ ಪಂಚಾಯತಿಗಳು ಪ್ರಮುಖ ಪಾತ್ರ ವಹಿಸಲಿದ್ದು, ಸ್ಥಳೀಯರು ತೆರಿಗೆ ಪಾವತಿಸುವ ಮೂಲಕ ಗ್ರಾಮ ಪಂಚಾಯತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸಬೇಕು. ಕುಡಿಯುವ ನೀರು, ಚರಂಡಿ ಸ್ವಚ್ಛತೆ, ಬೀದಿ ದೀಪಗಳು ಮತ್ತು ಅರಿವು ಕೇಂದ್ರಗಳ ನಿರ್ವಹಣೆ ಹೀಗೆ ವಿವಿಧ ಯೋಜನೆಗಳಿಗಾಗಿ ಸರ್ಕಾರ ನಿರಂತರವಾಗಿ ಹಣಕಾಸು ಬೆಂಬಲ ಒದಗಿಸುತ್ತಿದೆ. ಗ್ರಾಮೀಣಾಭಿವೃದ್ಧಿಗೆ ಮತ್ತಷ್ಟು ಬಲ ತುಂಬಲು ಎಲ್ಲರೂ ತೆರಿಗೆ ಪಾವತಿಸಿ, ಕೈಜೋಡಿಸಬೇಕು ಎಂದರು. ಈ ವೇಳೆ ಸಹಾಯಕ ನಿರ್ದೇಶಕರಾದ (ಪಂ.ರಾ) ಸೋಮನಗೌಡ ಪಾಟೀಲ್, ವಿವಿಧ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕರ ವಸೂಲಿಗಾರರು, ಸಿಬ್ಬಂದಿ ಇದ್ದರು.

# ನೂಲುವ ಗಿರಿಣಿ ಕಾರ್ಮಿಕರ ಪುನರ್ವಸತಿಗೆ ಕ್ರಮ ಕೈಗೊಳ್ಳದಿದ್ದರೆ ಹೋರಾಟ



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಕರ್ನಾಟಕ ರಾಜ್ಯ ಸಹಕಾರಿ ಸ್ಪೀನಿಂಗ್ ಮಿಲ್ ಲಿಮಿಟೆಡ್ ಗೆ ಸಂಬಂಧಸಿದ 40.20 ಎಕರೆ ಜಮೀನು ಅನಧಿಕೃತವಾಗಿ ಹರಾಜು ಪ್ರಕ್ರಿಯೆ ರದ್ದು ಸೇರಿ ಗಿರಿಣಿಯಲ್ಲಿ ಕಾರ್ಯ ನಿರ್ವಹಿಸಿದ ಕಾರ್ಮಿಕರಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಲು ಜಿಲ್ಲಾಡಳಿತ ಮಧ್ಯಸ್ಥಿಕೆ ವಹಿಸಿ ಒಂದು ತಿಂಗಳು ಅವಧಿಯಲ್ಲಿ ಕಾರ್ಮಿಕರ ಸಮಸ್ಯೆ ಇತ್ಯರ್ಥಪಡಿಸಬೇಕು ಇಲ್ಲದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಸಾಮಾಜಿಕ ಹೋರಾಟಗಾರದ ಶಿವಕುಮಾರ ಮ್ಯಾಗಳಮಾನಿ

ವಕೀಲರು ಹೇಳಿದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ,ಏಗನೂರು ಮತ್ತು ದಂಡ್ ಸೀಮಂತರಲ್ಲಿ ಬರುವ ಕರ್ನಾಟಕ ರಾಜ್ಯ ಸಹಕಾರ ಸ್ಪಿನ್ನಿಂಗ್ ಮಿಲ್ ಲಿಮಿಟೆಡ್ ಕಂಪನಿಯಲ್ಲಿ ಸುಮಾರು 550 ಅಧಿಕ ಕಾರ್ಮಿಕರು ಮೂರು ದಶಕಗಳ ಕಾಲ ಕೆಲಸ ನಿರ್ವಹಿಸಿದ್ದರು. ಆದರೆ 1997ರಲ್ಲಿ ಯಂತ್ರೋಪಕರಣ ಹಳೆಯದಾಗಿದ್ದು, ಹಿನ್ನಲೆ ಗಿರಣಿ ಮುಚ್ಚಲಾಯಿತು. ಇದರ ಮೇಲೆ ಅವಲಂಬಿತಗೊಂಡ 550 ಕಾರ್ಮಿಕರ ಕುಟುಂಬಗಳು ಬೀದಿಪಾಲಾಗಿದೆ. ಆದರೆ ಇದುವರೆಗೂ ಕಾರ್ಮಿಕರಿಗೆ ಯಾವುದೆ ರೀತಿ ಪರಿಹಾರ ಹಾಗೂ ಪುನರ್ ವಸತಿ ಕಲ್ಪಿಸಿಲ್ಲ ಎಂದು ಹೇಳಿದರು.ಗಿರಿಣಿ ಸಂಬಂಧಪಟ್ಟ ಒಟ್ಟು 40.25 ಎಕರೆ ಸರಕಾರಿ ಜಮೀನುನ್ನು ಅನಧಿಕೃತ ಮಾರಾಟಕ್ಕೆ ಹರಾಜು ನೀಡಲಾಗಿದೆ. ರಾಯಚೂರು ಸ್ಪಿನ್ನಿಂಗ್ ಮಿಲ್ ನ್ನು 13-03-1961 ರಲ್ಲಿ ಸಹಕಾರ ಸಂಘಗಳ ಕಾಯ್ದೆಯ ಸೆಕ್ಷನ್ 7 ರ ಅಡಿಯಲ್ಲಿ ನೋಂದಾಯಿಸಲಾಗಿದೆ. ಸಾಮಾಜಿಕ ಅಭಿವೃದ್ಧಿ ಮತ್ತು ಸಾರ್ವಜನಿಕ ಹಿತಾಸಕ್ತಿ ಮತ್ತು ಕೈಗಾರಿಕಾ ಬೆಳವಣಿಗೆಯ ಉದ್ದೇಶಕ್ಕಾಗಿ ಸ್ಥಾಪಿಸಲಾಗಿತ್ತು. ಆದ್ದರಿಂದ ಕರ್ನಾಟಕ ಸರ್ಕಾರವು ತನ್ನ 40.25 ಎಕರೆ ಭೂಮಿಯನ್ನು ನೂಲುವ ಗಿರಣಿಯ ಹೆಸರನ್ನು ಪಹಣಿಯಲ್ಲಿ ನಾಮಮಾತ್ರವಾಗಿ ಬದಲಿಸಿ ಸಹಕಾರ ಸಂಘಗಳ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. ಅದರ ಉದ್ದೇಶ ಕೈಗಾರಿಕಾ ಮೂಲಸೌಕರ್ಯ ಸ್ಥಾಪಿಸುವುದು ಮತ್ತು ಈ ಮೂಲಕ ಸಾರ್ವಜನಿಕ ಉದ್ಯೋಗ ಸೃಷ್ಟಿ, ಪ್ರಾದೇಶಿಕ ಅಭಿವೃದ್ಧಿ ಮತ್ತು ಸಹಕಾಲ ಕೈಗಾರಿಕಾ ಬೆಳವಣಿಗೆ ಉದ್ದೇಶದಿಂದ ಈ ಗಿರಣಿ ಸ್ಥಾಪಿಸಲಾಗಿದೆ ಹೊರತು ವಾಣಿಜ್ಯ ಮಾರಾಟ ಅಥವಾ ಪರಭಾರೆಗಾಗಿ ಅಲ್ಲ. ಅದರಿಂದ ಕಾನೂನು ಬಾಹಿರವಾಗಿ ಸರ್ಕಾರಿ ಭೂಮಿಯನ್ನು ಹರಾಜು ರದ್ದು ಪಡಿಸಬೇಕು. ಕಾರ್ಮಿಕರಿಗೆ ಭವಿಷ್ಯ ನಿಧಿ, ಕಾರ್ಮಿಕ ವೇತನ ಹಾಗೂ ಪುನರ್ ವಸತಿ ನೀಡಬೇಕು ಎಂದು ಆಗ್ರಹಿಸಿದರು.ಈ ಸಂದರ್ಭದಲ್ಲಿ ರುದ್ರಣ್ಣ ಗೌಡ ಏಗನೂರು, ಕೃಷ್ಣ ಕಾರ್ಮಿಕರು ಇದ್ದರೂ.

# ಲಿಂಗಸುಗೂರಿನಲ್ಲಿ ಜ.3-4ರಂದು ಬೃಹತ್ ಧಾರ್ಮಿಕ ಇಸ್ತಮಾ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**



ಪಟ್ಟಣದ ಕಲಬುರಗಿ ರಸ್ತೆಯಲ್ಲಿ ಜ.3 ಮತ್ತು 4ರಂದು ಎರಡು ದಿನಗಳ ಕಾಲ ರಾಯಚೂರು ಯಾದಗಿರಿ ಜಿಲ್ಲೆಗಳ ಬೃಹತ್ ಧಾರ್ಮಿಕ ಸಭೆ ಇಸ್ತಮಾ ಆಯೋಜಿಸಲಾಗಿದೆ. ಈ ಧಾರ್ಮಿಕ ಸಭೆಯಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಮುಸ್ಲಿಂ ಬಾಂಧವರು ಭಾಗವಹಿಸುವ ನಿರೀಕ್ಷೆ ಇದ್ದು, ಕಳೆದ ಒಂದು ತಿಂಗಳಿಂದ ಹತ್ತಾರು ಎಕರೆ ಜಾಗೆಯಲ್ಲಿ ಸ್ವಚ್ಛತೆ ಹಾಗೂ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಇಸ್ತಮಾಗೆ ಆಗಮಿಸುವರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ತಾಲೂಕಿನ ಮುಸ್ಲಿಂ ಯುವಕರು ಹಿರಿಯರ ಮಾರ್ಗದರ್ಶನದಲ್ಲಿ ಸ್ವಯಂಸೇವಕರಾಗಿ ದುಡಿಯುತ್ತಿರುವುದು ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರವಾಗಿದೆ.

ಸೌಹಾರ್ದತೆಯ ಸಂದೇಶ ಎರಡು ದಿನಗಳ ಕಾಲ ನಡೆಯಲಿರುವ ಇಸ್ತಮಾದಲ್ಲಿ ಧಾರ್ಮಿಕತೆಯ ಕುರಿತು ಜನರಿಗೆ ತಿಳುವಳಿಕೆ ನೀಡುವುದರ ಜೊತೆಗೆ ಅನ್ಯ ಧರ್ಮೀಯರೊಂದಿಗೆ ಸಹೋದರತ್ವ, ಶಾಂತಿ, ಸಹಿಷ್ಣುತೆ ಮತ್ತು ಸೌಹಾರ್ದತೆಯಿಂದ ಕೂಡಿದ ಸಮಾನ ಮನಸ್ಕ ಸಮಾಜ ನಿರ್ಮಾಣ ಕುರಿತು ಹಿರಿಯ ಧಾರ್ಮಿಕ ಗುರುಗಳು ಮೌಲಾನಾಗಳು, ಮುಫ್ತಿಗಳು, ಪ್ರವಚನ ನೀಡಲಿದ್ದಾರೆ.

ಮೂಕರು, ಕಿವುಡರು, ಅಂಧರಿಗೆ ವಿಶೇಷ ವ್ಯವಸ್ಥೆ ಇಸ್ತಮಾಗೆ ಆಗಮಿಸುವ ಮೂಕ, ಕಿವುಡ ಹಾಗೂ ಅಂಧರಿಗಾಗಿ ಅವರಿಗನುಗುಣವಾದ ತಿಳುವಳಿಕೆಯ ಭಾಷೆಯಲ್ಲಿ ಪ್ರವಚನ ಆಲಿಸಲು ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ಜಿಲ್ಲಾವಾರು ನಡೆಯುವ ಇಸ್ತಮಾಗಳ ಸಾಲಿನಲ್ಲಿ, ದಶಕಗಳ ಬಳಿಕ ಲಿಂಗಸುಗೂರು ಪಟ್ಟಣದಲ್ಲಿ ಇಂತಹ ಬೃಹತ್ ಮಟ್ಟದ ಇಸ್ತಮಾ ಆಯೋಜಿಸಿರುವುದು ತಾಲೂಕಿನ ಮುಸ್ಲಿಂ ಬಾಂಧವರಲ್ಲಿ ಸಂತಸ ಮೂಡಿಸಿದೆ.

ಸೌಲಭ್ಯಗಳ ಸಮಗ್ರ ವ್ಯವಸ್ಥೆ ಇಸ್ತಮಾಗೆ ಬರುವವರಿಗೆ ಕಾಲಕಾಲಕ್ಕೆ ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಇದಕ್ಕಾಗಿ ಪ್ರತ್ಯೇಕ ಪೆಂಡಾಲ್‌ಗಳನ್ನು ನಿರ್ಮಿಸಲಾಗಿದೆ. ನಮಾಜ್‌ಗೆ ಅನುಕೂಲವಾಗುವಂತೆ ನೀರನ್ನು ಸಂಗ್ರಹಿಸುವ ತೆಗ್ಗು ನಿರ್ಮಿಸಿ ನೀರು ಸಂಗ್ರಹಿಸಲಾಗಿದೆ. ಶೌಚಾಲಯ, ಕುಡಿಯುವ ನೀರು, ವಿಶ್ರಾಂತಿ ಸ್ಥಳಗಳು ಹಾಗೂ ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನೂ ವ್ಯವಸ್ಥೆಗೊಳಿಸಲಾಗಿದೆ.

ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಷ್ಟೇ ಅಲ್ಲದೆ ಅನ್ಯ ಜಿಲ್ಲೆಗಳಿಂದಲೂ ಮುಸ್ಲಿಂ ಬಾಂಧವರು ಇಸ್ತಮಾಗೆ ಆಗಮಿಸುವ ನಿರೀಕ್ಷೆ ಇದ್ದು, ಬರುವ ಎಲ್ಲರನ್ನೂ ತಾಲೂಕು ಇಸ್ತಮಾ ಸಮಿತಿ ಆತ್ಮೀಯವಾಗಿ ಸ್ವಾಗತಿಸಲಿದೆ. ಎಲ್ಲರಿಗೂ ಪ್ರವಚನ ಉರ್ದು ಭಾಷೆ ತಿಳಿಯದ ಭಕ್ತರಿಗೂ ಅನುಕೂಲವಾಗುವಂತೆ ಕನ್ನಡದಲ್ಲಿಯೂ ಪ್ರವಚನದ ವ್ಯವಸ್ಥೆ ಮಾಡಲಾಗಿದೆ. ಏಕ ದೇವೋಪಾಸನೆಯಲ್ಲಿ ನಂಬಿಕೆ ಇಟ್ಟಿರುವ ಇಸ್ಲಾಂ ಧರ್ಮದ ತತ್ವ, ಸಾರ ಹಾಗೂ ಪ್ರವಾದಿ ಮೊಹಮ್ಮದ್ ಅವರ ಸರಳ ಜೀವನ ಮತ್ತು ಶಾಂತಿ ಸಂದೇಶಗಳನ್ನು ಜನರಿಗೆ ತಲುಪಿಸುವುದು ಈ ಇಸ್ತಮಾದ ಮುಖ್ಯ ಉದ್ದೇಶವಾಗಿದೆ.

"ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಲ್ಲಾಹುವಿನ ಕೃಪೆಗೆ ಪಾತ್ರರಾಗಬೇಕು. ಇದು ಕೇವಲ ಮುಸ್ಲಿಂ ಬಾಂಧವರಿಗಷ್ಟೇ ಅಲ್ಲ, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಸಾರುವ ಮಹತ್ವದ ಧಾರ್ಮಿಕ ಸಭೆಯಾಗಿದೆ"

# ಸಚಿವರ ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಲೋಕೋಪಯೋಗಿ ಸಚಿವರು ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಅವರು 2026ರ ಜನವರಿ 3 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮಧ್ಯಾಹ್ನ 12.30ಕ್ಕೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ಸಿಟಿ ಮುನಿಸಿಪಲ್ ಗ್ರೌಂಡ್ ಹೆಲಿಪ್ಯಾಡನಿಂದ ವಿಶೇಷ ಹೆಲಿಕ್ಯಾಪ್ಟರ್ ಮೂಲಕ ಹೊರಟು ಮಧ್ಯಾಹ್ನ 3.30ಕ್ಕೆ ಸಿಂಧನೂರಿನ ಜೂನಿಯರ್ ಕಾಲೇಜ್ ಕ್ರೀಡಾಂಗಣದಲ್ಲಿನ ಹೆಲಿಪ್ಯಾಡಗೆ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ಸಿಂಧನೂರು ತಾಲೂಕಿನ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠ ಆವರಣದಲ್ಲಿ ನಡೆಯುವ ಶ್ರೀ ಅಂಬಾದೇವಿಯ ಅಂಬಾರಿ ರಥೋತ್ಸವ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಎನ್.ರಾಜಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ, 4ರಂದು ಸಚಿವರಾದ ಎನ್.ಎಸ್.ಬೋಸರಾಜು ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು 2026ರ ಜನವರಿ 4 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಉತ್ಸವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಪೂರ್ವಭಾವಿ ಸಭೆ ಮತ್ತು ಲೋಗೊ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ನಗರದ ಸಿಯಾತಲಾಬ್ ನಗರದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂದಾಜು ಮೊತ್ತ 16.60 ಕೋಟಿ ರೂ.ವೆಚ್ಚದಲ್ಲಿ ಕೈಗೊಳ್ಳುತ್ತಿರುವ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗಳ ಗುದ್ದಲಿ ಪೂಜೆ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಭಾಗವಹಿಸುವರು.

ಮಧ್ಯಾಹ್ನ 1 ಗಂಟೆಗೆ ಕಿದ್ವಾಯಿ ಕ್ಯಾನ್ಸರ್ ಸೆಂಟರ್ ಕಟ್ಟಡದ ಗುದ್ದಲಿ ಪೂಜೆ ಮತ್ತು ರಿಮ್ಸ್ ಸಂಸ್ಥೆಯ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿನಿಯರ ವಸತಿ ನಿಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಭಾಗವಹಿಸುವರು. ಬಳಿಕ ವಿವಿಧ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ರಾತ್ರಿ 11 ಗಂಟೆಗೆ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ವೀರಭದ್ರ ಹಂಚಿನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾತ್ರಾ ಮಹೋತ್ಸವ ಪ್ರಾಣಿ ಬಲಿ ನಿಷೇದಕ್ಕೆ ಸ್ವಾಮೀಜಿ ಒತ್ತಾಯ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**



ಜಿಲ್ಲೆಯ ಸಿಂಧನೂರು ತಾಲೂಕಿನ ಸೋಮಲಾಪೂರದ ಅಂಬಾಮಠದಲ್ಲಿ ಜ.3 ರಿಂದ ನಡೆಯುವ ಅಂಬಾದೇವಿ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಪ್ರಾಣಿಬಲಿ ನಿಷೇಧ ಮಾಡಬೇಕು ಎಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಮತ್ತು ಪಶು ಪ್ರಾಣಿಬಲಿ ನಿರ್ಮೂಲನಾ ಜಾಗೃತಿ ಮಹಾಸಂಘದ ಅಧ್ಯಕ್ಷ ಹಾಗೂ ಬಸವ ಧರ್ಮ ಹೋರಾಟ ಸಮಿತಿಯ ಅಧ್ಯಕ್ಷ ದಯಾನಂದ ಸ್ವಾಮೀಜಿ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಅಂಬಾಮಠದ ಅಂಬಾದೇವಿ ದೇವಸ್ಥಾನ ಸೇರಿ ರಾಜ್ಯದ 36 ಸಾವಿರ ದೇವಾಲಯಗಳು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿವೆ. 1959ರಲ್ಲಿಯೇ ಕರ್ನಾಟಕವನ್ನು ಪ್ರಾಣಿಬಲಿ ಮುಕ್ತ ರಾಜ್ಯವೆಂದು ಘೋಷಣೆ ಮಾಡಲಾಗಿದೆ. ದಶಕಗಳು ಕಳೆದರೂ ಧರ್ಮ ಮತ್ತು ದೇವರ ಹೆಸರಲ್ಲಿ ನಿರಂತರವಾಗಿ ಪ್ರಾಣಿ ಬಲಿ ನಡೆಯುತ್ತಿದೆ ದುರಂತದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. 1964ರ ಕರ್ನಾಟಕ ಗೋವಧೆ ಪ್ರತಿಬಂಧಕ, ಜಾನುವಾರು ಪರಿರಕ್ಷಣಾ ಕಾಯಿದೆ, 1959ರ ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಕಾನೂನುಗಳ ಪ್ರಕಾರ ಕರ್ನಾಟಕ ರಾಜ್ಯವು ಸಂಪೂರ್ಣ ಗೋಹತ್ಯೆ ಮುಕ್ತ ಮತ್ತು ಪ್ರಾಣಿಬಲಿ ಮುಕ್ತ ರಾಜ್ಯವಾಗಿದೆ. ಈ ನಿಟ್ಟಿನನಲ್ಲಿ ಸುಪ್ರೀಂ ಕೋರ್ಟ್, ರಾಜ್ಯ ಹೈಕೋರ್ಟ್‌ಗಳು ಕರ್ನಾಟಕ ಸರಕಾರಕ್ಕೆ ಆದೇಶ ನೀಡಿದೆ. ಪ್ರಾಣಿ ನಿಷೇದಕ್ಕೆ ಸಾರ್ವಜನಿಕರಲ್ಲಿ ಜಾಗೃತಿ ಅಗತ್ಯವಿದೆ ಎಂದರು. ರಾಜ್ಯದಲ್ಲಿ ಪ್ರತಿ ವರ್ಷ ಕನಿಷ್ಠ ಒಂದೂವರೆ ಕೋಟಿ ಪ್ರಾಣಿ ಬಲಿ ನಡೆಯುತ್ತಿದೆ. ಜಾತ್ರಾ ಮಹೋತ್ಸವದ ಸಂದರ್ಭಗಳಲ್ಲಿ ಪ್ರಾಣಿ ಬಲಿ ಕೊಡುವುದು ಕೊನೆಯಾಗಬೇಕು. ಮದ್ಯ ಮತ್ತು ಮಾಂಸವನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು. ಜನರಲ್ಲಿರುವ ಅಂಧಶ್ರೆದ್ಧೆ, ಮೌಢ್ಯಗಳನ್ನು ದೂರ ಮಾಡಬೇಕು. ಕುಂಕುಮ, ಕುಂಬಳಕಾಯಿ, ಕೆಂಪು ದಾಸವಾಳ ಬಳಸಿ ಪೂಜೆ ಮಾಡಿದರೆ ಸಾಕು. ಈ ಬಗ್ಗೆ ಜಾಗೃತಿ ಮೂಡಿಸಲು ಅಹಿಂಸಾ ಪ್ರಾಣಿ ದಯಾ ಅಧ್ಯಾತ್ಮ ಸಂದೇಶ ಯಾತ್ರೆ ಆರಂಭ ಮಾಡುತ್ತಿದ್ದೇವೆ ಎಂದು ಹೇಳಿದರು.

# ಪ್ರೋತ್ಸಾಹ ಧನಕ್ಕೆ ಮಕ್ಕಳಿಂದ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಪ್ರಾಯೋಜಕತ್ವ ಯೋಜನೆಯ ಮಾರ್ಗಸೂಚಿಯನ್ವಯ ಶೈಕ್ಷಣಿಕ ಪ್ರೋತ್ಸಾಹ ಧನ ಪಡೆಯಲು ಅರ್ಹ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.ಬಾಲಕ/ಬಾಲಕಿಯರು 18 ವರ್ಷದೊಳಗಿನವರಾಗಿರಬೇಕು. ವಾರ್ಷಿಕ ಆದಾಯ ನಗರ ಪ್ರದೇಶ ರೂ.96,000 ಗ್ರಾಮೀಣ ಪ್ರದೇಶದಲ್ಲಿ ರೂ.72,000 ಮೀರಿರಬಾರದು. ತಾಯಿ ಒಬ್ಬರೇ ಇರುವ/ವಿಧವೆ ಮಕ್ಕಳು, ಮಕ್ಕಳು ಅನಾಥವಾಗಿದ್ದರೆ ಹಾಗೂ ವಿಸ್ತೃತ ಕುಟುಂಬದೊಂದಿಗೆ ವಾಸಿಸುತ್ತಿದ್ದರೆ ಹಾಗೂ ಕುಷ್ಠರೋಗ/ಹೆಚ್‌ಐವಿ ಸೋಂಕಿತ ಪೋಷಕರ ಮಕ್ಕಳು ಮತ್ತು ಕುಟುಂಬಕ್ಕೆ ಆಧಾರವಾಗಿದ್ದ ಪೋಷಕರು ಜೈಲಿನಲ್ಲಿದ್ದರೆ(ಸಜೆಯಾಗಿದ್ದರೆ) ಅಂತಹ ಕುಟುಂಬದ ಮಕ್ಕಳು ಹಾಗೂ ಸತತವಾಗಿ 6 ತಿಂಗಳವರೆಗೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಆಶ್ರಯ ಪಡೆದಿರುವ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ.ಮಗುವಿನ 2 ಭಾವಚಿತ್ರಗಳು, ತಂದೆ/ತಾಯಿ ಮರಣ ಪ್ರಮಾಣ ಪತ್ರ, ಮಗುವಿನ ಶಾಲಾ ದೃಢೀಕರಣ ಪ್ರಮಾಣ ಪತ್ರ, ಮಗುವಿನ ಆಧಾರ ಕಾರ್ಡ್, ಮಗುವಿನ ಬ್ಯಾಂಕ್ ಖಾತೆ ಪುಸ್ತಕ, ತಾಯಿ/ಪೋಷಕರ ಆಧಾರ ಕಾರ್ಡ್, ಪಡಿತರ (ರೇಶನ್) ಕಾರ್ಡ್, ಮಗುವಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಅರ್ಜಿ ಜೊತೆಗೆ ಸಲ್ಲಿಸಬೇಕು.ಆಯಾ ತಾಲೂಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ತಾಲೂಕು ಮಕ್ಕಳ ರಕ್ಷಣಾಧಿಕಾರಿಗಳ, ಕಾರ್ಯಾಲಯ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ, ಆಜಾದನಗರ, ರಾಯಚೂರುನಲ್ಲಿ ದಿನಾಂಕ 16-01-2026ರೊಳಗಾಗಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ-08532-226226ಗೆ ಸಂಪರ್ಕಿಸಬಹುದಾಗಿದೆ

# ಜ, 3ರಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಕಂಡಕ್ಟರಿಂಗ್ ದುರಸ್ತಿ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಜನವರಿ 03ರ ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 05 ಗಂಟೆವರೆಗೆ ಬನಶಂಕರಿ ರೊಟ್ಟಿ ಕೇಂದ್ರದಿಂದ ಮಾರೆಮ್ಮ ಗುಡಿ ರಾಂಪೂರು ರೋಡ್‌ವರೆಗೆ, ಮಾರೆಮ್ಮ ಗುಡಿ ರಾಂಪೂರು ರೋಡ್‌ರಿಂದ ವಿಜಿಲೆನ್ಸ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿರುವ ದೀಪಕ್ ಮನೆವರೆಗೆ ಮತ್ತು ಬೆಲ್ಲಂ ಕಾಲೋನಿಯ ಸುಬ್ರಮಣ್ಯ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗದೆ.ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08532-226386, 08532-231999, 9480845955 ಮತ್ತು 9448395624ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.4 ರಂದು ಮಹಿಳಾ ಪರಿಷತ್ ಉದ್ಘಾಟನಾ, ಪದಗ್ರಹಣ ಸಮಾರಂಭ



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಮಹಿಳಾ ಪರಿಷತ್ ಹಾಗೂ ಸಾಹಿತ್ಯ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆ ಇವರ ನೇತೃತ್ವದಲ್ಲಿ ಜ.4 ರಂದು ಮಹಿಳಾ ಪರಿಷತ್ ಉದ್ಘಾಟನಾ ಕಾರ್ಯಕ್ರಮ ಪದಗ್ರಹಣ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮ ನಗರದ ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥಾಪಕರಾದ ಅಣ್ಣಪ್ಪ ಮೇಟಿಗೌಡ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಹಿಳೆಯರು ಸಾಹಿತ್ಯ ಶೈಕ್ಷಣಿಕ, ಸಾಮಾಜಿಕವಾಗಿ ಚಟುವಟಿಕೆಯಲ್ಲಿ ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಪ್ರೋತ್ಸಾಹಿಸುವ ಕಾರ್ಯ ಮಾಡಲಾಗುತ್ತಿದೆ.ಮಹಿಳಾ ಪರಿಷತ್ ಮೊದಲ ವೇದಿಕೆ ಕಾರ್ಯಕ್ರಮ ಇದಾಗಿದ್ದು,ಮುಂಬರುವ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಈ ವೇದಿಕೆ ಸಿದ್ದಪಡಿಸಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡ 12 ಸಾಧಕರಿಗೆ ರಾಷ್ಟ್ರಮಟ್ಟದ ಕಾಯಕ ವಿಭೂಷಣ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದರು.,ಮಹಿಳೆಯರಿಂದ,ಮಹಿಳೆಯರಿಗಾಗಿ, ಮಹಿಳೆಯರೇ ಕಾರ್ಯಕ್ರಮವನ್ನು ಮಾಡುವಂತಹ ಸಂಸ್ಥೆಯಾಗಿದ್ದು ಇಂತಹ ಮಹತ್ತರವಾದ ಸಂಸ್ಥೆಯನ್ನು ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಘಾಟಿಸಲಾಗುತ್ತದೆ, ಇದನ್ನು ಕೇವಲ ನಮ್ಮ ಜಿಲ್ಲೆಗೆ ಮಾತ್ರವಲ್ಲ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಕಾರ್ಯಕ್ರಮವನ್ನು ಹಾಗೆ ಸಂಸ್ಥೆಯನ್ನು ಬೆಳೆಸುವಂತಹ ಉದ್ದೇಶ ಹೊಂದಲಾಗಿದೆ.ಈ ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳಾದ ಡಾ.ಜಯಲಕ್ಷ್ಮೀ ಮಂಗಳಮೂರ್ತಿ ಉದ್ಘಾಟಿಸಲಿದ್ದಾರೆ, ಕಾರ್ಯಕ್ರಮದ ಅಧ್ಯಕ್ಷತೆ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಸರ್ವ ಮಂಗಳ ಸಕ್ರಿ ಅವರು ವಹಿಸಲಿದ್ದಾರೆ.ಶಾಸಕ ಡಾ.ಶಿವರಾಜ ಪಾಟೀಲ್ ಹಾಗೂ ಬಸನಗೌಡ ದದ್ದಲ್ ಹಾಗೂ ತಹಶೀಲ್ದಾರ್ ಸುರೇಶ್ ವರ್ಮಾ ಅವರು ಪ್ರಶಸ್ತಿ ಪ್ರಧಾನ ನೀಡಲಿದ್ದಾರೆ. ಶಾಸಕರಾದ ಕರೆಮ್ಮ ಜಿ ನಾಯಕ, ಕೃಷ್ಣ ಶಾವಂತಗೇರಿ,ಡಾ.ಅರುಣಾ ಹಿರೇಮಠ ಶ್ರೀದೇವಿ ನಾಯಕ, ನಿರ್ಮಲಾ ಬೆಣ್ಣೆ, ವಿಜಯ ರಾಜೇಶ್ವರಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ ಕವಿಗೋಷ್ಠಿ ನಡೆಯಲಿದೆ ಎಂದರು. ಈ ಸಂದರ್ಭದಲ್ಲಿ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಡಾ.ಸರ್ವಮಂಗಳ ಸಕ್ರಿ ಉಪಾಧ್ಯಕ್ಷರಾದ, ಸರಿತಾ ಮಹೇಶ, ಯುವ ಘಟಕದ ಅಧ್ಯಕ್ಷರಾದ ಧರ್ಮಾವತಿ ಎಸ್ ನಾಯಕ ಉಪಸ್ಥಿತರಿದ್ದರು.

# ಕಾರ್ಮಿಕರ ನಿಯೋಜನೆಗೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ನಗರದಲ್ಲಿ ವಾರ್ಡ ನಂ 26ರಲ್ಲಿ ಬರುವ ಬೇಸ್ತವಾರಪೇಟೆ ಬಡಾವಣೆಯಲ್ಲಿ 10 ಜನ ಕಾರ್ಮಿಕರ ಕೊರತೆಯಿದ್ದು ಹಾಗೂ ವಾರಕ್ಕೊಮ್ಮೆ ವಾರ್ಡನ ವಿವಿಧ ಅವಶ್ಯಕತೆ ಇರುವ ಸ್ಥಳಗಳಲ್ಲಿ ಚರಂಡಿ ಹೂಳೆತ್ತಬೇಕು ಎಂದು ಎಐಎಂಐಎಂ ಮುಖಂಡರು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದೆ.

ನಗರದ ವಾರ್ಡ ನಂ. 26 ಅತ್ಯಂತ ದೊಡ್ಡ ವಾರ್ಡ ಆಗಿದ್ದು, ವಾರ್ಡ ನಂ 26 ಬೆಸ್ತವಾರಪೇಟ್‌ನಲ್ಲಿ ಪೌರಕಾರ್ಮಿಕರ ಕೊರತೆ ಇದ್ದು ಶೀಘ್ರದಲ್ಲಿ 10 ಜನ ಹೆಚ್ಚುವರಿ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿ ವಾರ್ಡನ ವ್ಯಾಪ್ತಿಯಲ್ಲಿ ಬರುವ ರಸ್ತಾಪೂರ ಕಾಂಪ್ಲೆಕ್ಸ್ ಹತ್ತಿರ ರೋಡಿನ ಬ್ರಿಡ್ಜ್ ಕೆಳಗಿನ ಮುಖ್ಯ ಕಾಲುವೆಯಲ್ಲಿ ಪ್ಲಾಸ್ಟಿಕ್ ಡಬ್ಬಿಗಳು, ಕಸ, ಬಹಳಷ್ಟು ಜಮಾಗಿರುತ್ತದೆ. ಇನ್ನೂ ಮುಂತಾದ ಸ್ಥಳಗಳಲ್ಲಿಯೂ ಸಹ ಕಸ ವಿಲೇವಾರಿ ಮಾಡುವ ಅವಶ್ಯಕತೆ ಇರುತ್ತದೆ. ಆದಕಾರಣ ತಾವುಗಳು ಕನಿಷ್ಟ ಒಂದು ವಾರದಲ್ಲಿ ಸುಮಾರು 2 ಗಂಟೆಗಳ ಕಾಲ ಜೆಸಿಬಿಯಿಂದ ಸದರಿ ವಾರ್ಡನ ಚರಂಡಿ ಹೂಳೆತ್ತಬೇಕು ಎಂದರು.ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ವಾರ್ಡ ಚರಂಡಿ ಹಾಗೂ ಕಸ ವಿಲೇವಾರಿ ಮಾಡಲು ಹೆಚ್ಚಿನ ಪೌರಕಾರ್ಮಿಕರನ್ನು ನಿಯೋಜಿಸಬೇಕು ಆಗ್ರಹಿಸಲಾಯಿತು.

# ಯುವಕನ ಸಾವಿಗೆ ಬುಲೆಟ್ ಗಾಯವೇ ಕಾರಣ: ಎಡಿಜಿಪಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

:ನಗರದಲ್ಲಿನಿನ್ನೆನಡೆದ ಘಟನೆಯಲ್ಲಿ ಮೃತ ರಾಜಶೇಖರ್ ಸಾವಿಗೆ ಬುಲೆಟ್ ಗಾಯವೇ ನೇರ ಕಾರಣ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಸಾಬೀತಾಗಿದೆ ಎಂದು ಎಡಿಜಿಪಿ ಹಿತೇಂದ್ರ ಸ್ಪಷ್ಟಪಡಿಸಿದರು.

ಎಡಿಜಿಪಿ ಹಿತೇಂದ್ರ ಅವರು ಬಳ್ಳಾರಿ ನಗರದಲ್ಲಿ ಇಂದು ಪತ್ರಿಕಾಗೋಷ್ಠಿ ನಡೆಸಿ, ನಿನ್ನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಗನ್‌ಮ್ಯಾನ್‌ಗಳ ಗನ್‌ಗಳನ್ನು ಪೊಲೀಸರು ವಶಕ್ಕೆ ಪಡೆದು ಸೀಜ್ ಮಾಡಿದ್ದಾರೆ ಎಂದು ತಿಳಿಸಿದರು. ಘಟನೆಯ ಕುರಿತು ಸುಮೋಟೋ ಪ್ರಕರಣ ದಾಖಲಾಗಿದೆ. ಈ ಪ್ರಕರಣವನ್ನು ಪೊಲೀಸರು 2 ಲಘುವಾಗಿ ತೆಗೆದುಕೊಂಡಿದ್ದಾರೆ ಎನ್ನುವ ಆರೋಪಗಳಿಗೆ ಅವಕಾಶವೇ ಇಲ್ಲ ಎಂದು ಎಡಿಜಿಪಿ ಸ್ಪಷ್ಟನೆ ನೀಡಿದರು. ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಲಾಗುತ್ತದೆ ಎಂದು ಭರವಸೆ ನೀಡಿದರು.

ಬ್ಯಾನರ್ ಕಟ್ಟುವ ವಿಚಾರಕ್ಕೆ ಸಂಬಂಧಿಸಿ ಇಂತಹ ದುರ್ಘಟನೆ ಸಂಭವಿಸಬಾರದಿತ್ತು ಎಂದು ವಿಷಾದ ವ್ಯಕ್ತಪಡಿಸಿದ ಅವರು, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಇದೇ ವೇಳೆ, ರಾಜಕಾರಣಿಗಳ ಒತ್ತಡದ ಕಾರಣದಿಂದ ಬಳ್ಳಾರಿ ಎಸ್ಪಿ ಶೋಭಾ ರಾಣಿ ಅವರ ವರ್ಗಾವಣೆ ನಡೆದಿದೆ ಎಂಬ ಗಾಲಿ ಜನಾರ್ದನ ರೆಡ್ಡಿ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಎಡಿಜಿಪಿ, ಈ ಕುರಿತು ಶೋಭಾ ರಾಣಿ ಅವರೇ ಉತ್ತರ ನೀಡಬೇಕು ಎಂದು ಹೇಳಿದರು.ಈ ಪ್ರಕರಣಕ್ಕೆ ಸಂಬಂಧಿಸಿ ಒಟ್ಟು ಐದು ಗನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಅವುಗಳಲ್ಲಿ ಖಾಸಗಿ ಗನ್‌ಗಳೂ ಸೇರಿವೆ. ವಶಕ್ಕೆ ಪಡೆದ ಎಲ್ಲಾ ಗನ್‌ಗಳನ್ನು (Forensic Science Lab-oratory) ಗೆ ಕಳುಹಿಸಲಾಗಿದ್ದು, ಬುಲೆಟ್ ಮ್ಯಾಚಿಂಗ್ ವರದಿ ಆಧಾರದಲ್ಲಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಡಿಜಿಪಿ ಹಿತೇಂದ್ರ ಮಾಹಿತಿ ನೀಡಿದರು.

# ರೆಡ್ಡಿಯಿಂದಲೇ ಅಶಾಂತಿ ದ್ವೇಷ ರಾಜಕಾರಣ ಬಂತು



**ಬಳ್ಳಾರಿ:**

ಹಿಂದಿನ ದಿನದ ಜನಾರ್ದನ ರೆಡ್ಡಿ, ಕುಟುಂಬದವರು ಅಧಿಕಾರಕ್ಕೆ ಬಂದ ಮೇಲೆಯೇ ಬಳ್ಳಾರಿಯಲ್ಲಿ ಅಶಾಂತಿ ವಾತಾವರಣ, ದ್ವೇಷ ರಾಜಕಾರಣ ಬಂತು ಎಂದು ಬುಡಾ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ನಾರಾ ಪ್ರತಾಪ್ ರೆಡ್ಡಿ ಆರೋಪಿಸಿದ್ದಾರೆ. ನಗರದಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು. 36 ವರ್ಷದ ಯುವ ಶಾಸಕ ಮಾಡಿದ ಅಭಿವೃದ್ಧಿ ನೋಡದೇ ಈ ರೀತಿ ಮಾಡುತ್ತಿದ್ದಾರೆಂದರು. ಬಳ್ಳಾರಿಯಲ್ಲಿ ಗನ್ ಮ್ಯಾನ್ ಸಂಸ್ಕೃತಿ ತಂದವರು ಈ ಬಿಜೆಪಿಯ ಗ್ಯಾಂಗ್, 2008 ರ ಮೊದಲು ಇದು ಇರಲಿಲ್ಲ. ಇವರು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮುಖಂಡರ ಮೇಲೆ ವಿನಾಕಾರಣ ಕೇಸು ಹಾಕಿದ್ದು ಇವರೇ ನಗರದಲ್ಲಿ ಫ್ಲೆಕ್ಸ್ ಸಂಸ್ಕೃತಿ ತಂದವರೂ ಸಹ ಇವರು ಎಂದರು.

ವಾಲ್ಮೀಕಿ ಪುತ್ಥಳಿ ಅನಾವರಣದ ವೈಭವ ನೋಡಲಾಗದೆ ಹೀಗೆ ಮಾಡಿ ರಾತ್ರಿ ವಿಗ್ರಹ ಇಟ್ಟಿಲ್ಲ ಕೆಡಿಸುವುದನ್ನು ಬಿಟ್ಟು ಇವರು ಮಾಡಿದ ಒಳ್ಳೆಯದು ಏನೂ ಇಲ್ಲಂದ್ದಾರೆ. ನಾವು ಅವರಂತೆ ರಾತ್ರೋರಾತ್ರಿ ಪುತ್ಥಳಿಗಳು, ಟವರ್ ಕ್ಲಾಕ್ ಗಳು ತೆಗೆದಿಲ್ಲ. ತಾಯಿ ಹೆಸರಲ್ಲಿ ಕೆರೆ ಕಟ್ಟಿಸುವುದಾಗಿ ಹೇಳಿದ್ದಿರಿ ಎಲ್ಲಿ ಆಯ್ತು. ಮಾಡೋದೆಲ್ಲ ಅಕ್ರಮ ಆದರೆ ಹರಿಶ್ಚಂದ್ರನಂತೆ ಮಾತನಾಡುತ್ತಾನೆಂದರು. ನಾವು ಅವರಂತೆ ಆಂಧ್ರದಲ್ಲಿ ಗಣಿ ಲೀಜ್ ಪಡೆದು ಕರ್ನಾಟಕದ ಲೂಟಿ ಮಾಡಿಲ್ಲ. 150 ಕೋಟಿ ಆರೋಪ ಎಲ್ಲಿ ಹೋಯ್ತು ಎಂದು ಪ್ರಶ್ನಿಸಿದರು. ಅಭಿವೃದ್ಧಿ ಮಾಡುವುದಾದರೆ ಇವರು ದೆಹಲಿಗೆ ಹೋಗಿ ಎಂದರು. ಎನ್.ಎಂ.ಡಿ.ಸಿ ಕಾರ್ಖಾನೆ ತರಲಿ ಅವರು ಅಭಿವೃದ್ಧಿ ಬಗ್ಗೆ ಮಾತನಾ ಡುವುದಾರೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು. ಬ್ರಹ್ಮಣಿ ಸ್ಟೀಲ್ ಮಾಡುವುದಾಗಿ ಉತ್ತಮ ಗಾಲ್ವಗೆ ಮಾರಾಟ ಮಾಡಿದ್ದೇರಂದರು.

ನಾಳೆ ಕಾರ್ಯಕ್ರಮ ಚೆನ್ನಾಗಿ ನಡೆಯಿತು ಎಂಬುದನ್ನು ಸಹಿಸಿಕೊಳ್ಳಲಿಲ್ಲ ಯುವುದನ್ನು ಅವರು, ಘಟನೆಯಲ್ಲಿ ತಪ್ಪು ತನಿಖೆ ಆಗಲಿ, ತಪ್ಪಿದ್ದವರ ಮೇಲೆ ಕ್ರಮ ಜರುಗಲೆಂದರು. ಸತೀಶ್ ರೆಡ್ಡಿ ನಮ್ಮ ಕುಟುಂಬದ ವ್ಯಕ್ತಿ, ಹಳೇ ರಾಜಕೀಯ ಮಾಡಲು ಬಿಡಲ್ಲ. ಗಾಳಿ... ಗಾಳಿ ತೆಗೆಯುವ ಮಾತು ಬಿಡು, ಈ ರೀತಿಯ ಅನಧಿಕೃತ ಬ್ಯಾನರ್ ವ್ಯವಸ್ಥೆ ಸರಿಯಲ್ಲ ಇನ್ನು ಮುಂದೆ ಹೀಗೆ ಆಗದಂತೆ ಕ್ರಮ ಜರುಗಿಸಲಿದೆ ಎಂದು ಮೇಯರ್ ಪಿ.ಗಾದೆಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ಮೇಯರ್ ಪಿ.ಗಾದೆಪ್ಪ, ಮುಖಂಡರುಗಳಾದ ಎ.ಮಾನಯ್ಯ, ಬಿ.ರಾಂಪ್ರಸಾದ್, ಕೆರ ಕೊಡಪ್ಪ, ಮಂಜುಳ, ವೆಂಕಟೇಶ್ ಹೆಗಡೆ, ಮೊದಲಾದವರು.

# ಜಾಗರೂಕತೆಯಿಂದ ವಾಹನ ಚಲಾಯಿಸಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ದಿನನಿತ್ಯ ಬಳಸುವ ರಸ್ತೆಯಲ್ಲಿ ಪ್ರತಿಯೊಬ್ಬರ ಜೀವನ ಅಡಗಿದ್ದು, ಜಾಗರೂಕರಾಗಿ ವಾಹನ ಚಲಾಯಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.



ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಹಯೋಗದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 37 ನೇ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಸ್ತೆ ಅಪಘಾತಗಳು ಅಪಾಯಕಾರಿಯಾಗಿದ್ದು, ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸುವ ಪ್ರತಿಯೊಬ್ಬರೂ ರಸ್ತೆ ನಿಯಮಗಳನ್ನು ಪಾಲಿಸಬೇಕು. ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತಾ ನಿಯಮಗಳ ಕುರಿತು ಅರಿವು ಮೂಡಿಸಲು ಜನವರಿ ಮಾಸಾದ್ಯಂತ ಜಿಲ್ಲೆಯಲ್ಲಿ ವಿವಿಧ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಸ್ತೆ ಅಪಘಾತಗಳಲ್ಲಿ ಪ್ರತಿವರ್ಷ ಸಾವನ್ನಪ್ಪುವವರ ಸಂಖ್ಯೆ ಮೊದಲನೇ ಮತ್ತು ಎರಡನೇ ಮಹಾಯುದ್ಧದಲ್ಲಿ ಸಾವನ್ನಪ್ಪಿದ್ದ ಸಂಖ್ಯೆಗೆ ಹೋಲಿಸಬಹುದಾಗಿದೆ. 2025ರ ಅಂಕಿ-ಸಂಖ್ಯೆ ಪ್ರಕಾರ ದೇಶದಲ್ಲಿ ಸುಮಾರು 4.08 ಲಕ್ಷ ರಸ್ತೆ ಅಪಘಾತ ಘಟನೆಗಳು ಸಂಭವಿಸಿದ್ದು, 1.72 ಲಕ್ಷ ಜನ ತಮ್ಮ ಪ್ರಾಣ ತೆತ್ತಿದ್ದಾರೆ. ವಾಹನ ಚಾಲಕರ ವೃತ್ತಿಯು ಸಹ ಗಡಿ ಕಾಯುವ ಯೋಧರಂತೆ ಕಷ್ಟಕರವಾಗಿದೆ ಎಂದರು.

ರಸ್ತೆ ಪಾದಾಚಾರಿಗಳು ಸಹ ಜಾಗ್ರತೆಯಿಂದ ರಸ್ತೆ ಸಂಚಾರ ನಿಮಯಗಳನ್ನು ಪಾಲಿಸಬೇಕಿದೆ. ಅವಘಡ ಯಾವ ರೀತಿಯಲ್ಲಾದರೂ ಸಂಭವಿಸಬಹುದಾಗಿದೆ. ಹಾಗಾಗಿ ಪ್ರಾದೇಶಿಕ ಸಾರಿಗೆ ಇಲಾಖೆ, ಪೊಲೀಸ್, ಶಿಕ್ಷಣ ಇಲಾಖೆಗಳನ್ನೊಳಗೊಂಡಂತೆ ರಸ್ತೆ ಸುರಕ್ಷತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದೆ ಎಂದರು.

**ಮೆಗಾ ಡ್ರೈವ್ ಆಯೋಜಿಸಿ:**

ವಾಹನಗಳಿಗೆ ವಿಮೆ ಬಹುಮುಖ್ಯವಾಗಿದ್ದು, ಯಾವುದೇ ರೀತಿಯ ಅಪಘಾತ ಸಂಭವಿಸಿದಲ್ಲಿ, ವಿಮೆ ಮೂಲಕ ನೆರವು ಪಡೆಯಬಹುದಾಗಿದೆ. ಇದರಿಂದ ಅವರ ಕುಟುಂಬದ ಅವಲಂಬಿತರಿಗೆ ಸಹಾಯವಾಗಲಿದೆ. ಹಾಗಾಗಿ ಸಾರಿಗೆ ಇಲಾಖೆಯು ಹಳ್ಳಿಗಳಲ್ಲಿರುವ ವಾಹನಗಳ ಮಾಹಿತಿ ಸಂಗ್ರಹಿಸಿ ಅವರಿಗೆ ಜಾಗೃತಿ ಮೂಡಿಸುವ ಮೂಲಕ ವಿಮೆ ವಿತರಣೆ ಮಾಡಲು ಮೆಗಾ ಡ್ರೈವ್ ಆಯೋಜನೆ ಮಾಡಬೇಕು ಎಂದು ಸಲಹೆ ನೀಡಿದರು.

18 ವರ್ಷದೊಳಗಿನ ಮಕ್ಕಳಿಗೆ ವಾಹನ ಚಲಾಯಿಸಲು ನೀಡಿದಲ್ಲಿ ಮಕ್ಕಳ ಪೋಷಕರ ವಿರುದ್ಧ ಪ್ರಕರಣ ಮತ್ತು 25,000 ಸಾವಿರ ದಂಡ ವಿಧಿಸಲಾಗುವುದು ಮತ್ತು ಚಾಲನಾ ಪರವಾನಿಗೆ ಇಲ್ಲದೇ ವಾಹನ ಚಲಾಯಿಸುವಂತಿಲ್ಲ. ಈ ಕುರಿತು ಪ್ರತಿಯೊಬ್ಬರೂ ಎಚ್ಚರವಹಿಸಬೇಕು ಎಂದು ತಿಳಿಸಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಅಧೀಕ್ಷಕ ಅಡಿವೇಶ ಗೌಡ ಅವರು ಮಾತನಾಡಿ, ಸಾರಿಗೆಯು ದೇಶದ ಆರ್ಥಿಕ ಅಭಿವೃದ್ಧಿಗೆ ಕೀಲಿ ಕೈ. ಯಾವ ದೇಶ ಉತ್ತಮ ಸಾರಿಗೆ ವ್ಯವಸ್ಥೆ ಹೊಂದಿರುತ್ತದೆಯೋ ಆ ದೇಶ ಅಭಿವೃದ್ಧಿ ಹೊಂದಲಿದೆ. ಅದರ ಜೊತೆಗೆ ಸುರಕ್ಷತೆಯು ಅಷ್ಟೇ ಮುಖ್ಯವಾಗಿರುತ್ತದೆ. ವಾಯು, ಜಲ ಸಾರಿಗೆಗಳಂತೆ ಭೂ ಸಾರಿಗೆಯಲ್ಲಿ ರಸ್ತೆ ಬಳಸುವವರ ಸಂಖ್ಯೆ ಹೆಚ್ಚಾಗಿದ್ದು, ರಸ್ತೆ ನಿಮಯ, ಸಂಚಾರಿ ಚಿಹ್ನೆಗಳನ್ನು ಅರಿತುಕೊಳ್ಳುವುದು ಅತ್ಯಗತ್ಯವಾಗಿದೆ ಎಂದು

ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಬಿ.ಶಫೀವುಲ್ಲಾ ಅವರು ಮಾತನಾಡಿ, ವಾಹನ ಚಾಲನೆ ವೇಳೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಬೆಲ್ಟ್ ಕಟ್ಟಿಕೊಳ್ಳಬೇಕು. ಚಾಲನೆ ವೇಳೆ ಮೊಬೈಲ್ ಫೋನ್ ಬಳಸಬಾರದು. ಮದ್ಯಪಾನ ಮಾಡಿ ವಾಹನ ಚಲಾಯಿಸಬಾರದು ಎಂದು ತಿಳಿಸಿದ ಅವರು, ಕೆಲವು ಮುಖ್ಯ ರಸ್ತೆ ಸಂಚಾರ ನಿಯಮಗಳನ್ನು ಕೈ ಸನ್ನೆಯ ಮೂಲಕ ಸಾರ್ವಜನಿಕರಿಗೆ ತಿಳಿಸಿದರು.

ಬಳ್ಳಾರಿ ಪ್ರಭಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿ ನಿಜಾಮುದ್ದೀನ್ ಶರೀಫ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾರ್ವಜನಿಕರು ದುರಸ್ಥಿ ವಾಹನಗಳನ್ನು ಬಳಸಬಾರದು. ಇದರಿಂದ ವಾಯುಮಾಲಿನ್ಯ ತಡೆಗಟ್ಟಬಹುದಾಗಿದೆ. ನಿಯಮಿತವಾಗಿ ವಾಹನಗಳ ತಪಾಸಣೆ ಕೈಗೊಂಡು ಬಳಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಸ್ತೆ ಸುರಕ್ಷತಾ ಕ್ರಮಗಳ ಕುರಿತ ಮಾಹಿತಿ ಭಿತ್ತಿಪತ್ರ ಗಣ್ಯರು ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಸಾರಿಗೆ ವಿಭಾಗದ ಅಧೀಕ್ಷಕ ಗೋವಿಂದಪ್ಪ, ಹಿರಿಯ ಮೋಟಾರು ವಾಹನ ನಿರೀಕ್ಷಕ ಬಸವರಾಜ ಬೀರದಾರ ಸೇರಿದಂತೆ ಸಾರಿಗೆ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ರಾಜ್ಯ ಮಾಹಿತಿ ಆಯೋಗದ ಆಯುಕ್ತ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯೋಗದ ಆಯುಕ್ತರಾದ ಬಿ.ವೆಂಕಟ್ ಸಿಂಗ್ ಅವರು ಜ.03 ರಂದು ಬಳ್ಳಾರಿಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅವರು ಜ.02 ರಂದು ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ರಾತ್ರಿ ಬಳ್ಳಾರಿಗೆ ಆಗಮಿಸಿ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು.

ನಂತರ ಜ.03 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿಯವರೊಂದಿಗೆ ಏರ್ಪಡಿಸಿರುವ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಕಾರ್ಯಾಗಾರ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬಳಿಕ ವಾಸ್ತವ್ಯ ಮಾಡಿ, ಜ.04 ರಂದು ಸಿಂಧನೂರಿಗೆ ಪ್ರಯಾಣಿಸುವರು ಎಂದು ಆಪ್ತ ಸಹಾಯಕರು ತಿಳಿಸಿದ್ದಾರೆ.

# ಯು.ನಿಸಾರ್ ಅಹಮದ್ ಬಳ್ಳಾರಿಗೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಅವರು ಜ.21, 22 ರಂದು ಬಳ್ಳಾರಿಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಜ.20 ರಂದು ಸಂಜೆ 07 ಗಂಟೆಗೆ ಬಳ್ಳಾರಿಗೆ ಆಗಮಿಸಿ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು.

ಜ.21 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

ನಂತರ ಮಧ್ಯಾಹ್ನ 03 ಗಂಟೆಗೆ ಬಳ್ಳಾರಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಗೆ ಭೇಟಿ ನೀಡಿ ಕೋಮು ಸೌಹಾರ್ದತೆ, ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಅನುಷ್ಠಾನ ಮತ್ತು ಜಿಲ್ಲಾ ಪೊಲೀಸ್ ಕಂಪ್ಲೇಂಟ್ ಅಥಾರಿಟಿಯಲ್ಲಿ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ದೂರುಗಳ ಇತ್ಯರ್ಥದ ಪರಿಶೀಲನೆ ನಡೆಸುವರು. ಬಳಿಕ ವಾಸ್ತವ್ಯ ಮಾಡುವರು.

ಜ.22 ರಂದು ಬೆಳಿಗ್ಗೆ 10.30 ಕ್ಕೆ ನಗರದ ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತ ಸಮುದಾಯಗಳ ಮುಖಂಡರೊಂದಿಗೆ ಸಭೆ ನಡೆಸುವರು.

ಬಳಿಕ ಮಧ್ಯಾಹ್ನ 03 ಗಂಟೆಗೆ ಅಲ್ಪಸಂಖ್ಯಾತರ ಇಲಾಖೆಯ ಸಂಸ್ಥೆಗಳು, ಉರ್ದು ಶಾಲೆಗಳು, ಅಂಗನವಾಡಿ ಕೇಂದ್ರ ಮತ್ತು ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುವರು. ನಂತರ ವಾಸ್ತವ್ಯ ಮಾಡುವರು.

ಜ.23 ರಂದು ಬೆಳಿಗ್ಗೆ 09.30 ಕ್ಕೆ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ತಿಳಿಸಿದ್ದಾರೆ.

# ನೇರ ಪ್ರವೇಶಾತಿಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ಪ್ರಸಕ್ತ ಸಾಲಿನಿಂದ ನೂತನವಾಗಿ ಆರಂಭಗೊಂಡ ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಕೋರ್ಸ್ಗೆ ನೇರ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಟಿ.ಗಂಗಾಧರ ಗೌಡ ಅವರು ತಿಳಿಸಿದ್ದಾರೆ.

2025-26ನೇ ಸಾಲಿನಿಂದ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ನೂತನವಾಗಿ ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಕೋರ್ಸ್ ಆರಂಭಕ್ಕೆ ರಾಜ್ಯ ಸರಕಾರದಿಂದ ಅನುಮೋದನೆ ದೊರಕಿದೆ. ಈ ಹಿನ್ನೆಲೆ ಬಿಪಿಟಿ ಕೋರ್ಸ್ನ 40 ಸೀಟ್‌ಗಳಿಗೆ ನೇರವಾಗಿ ಅಭ್ಯರ್ಥಿಗಳ ಪ್ರವೇಶಾತಿಗಾಗಿ ಆಹ್ವಾನಿಸಲಾಗಿದೆ.

ಕೋರ್ಸ್ಗೆ ಪ್ರವೇಶಾತಿ ಪಡೆಯುವ ಅಭ್ಯರ್ಥಿಗಳು ಕಡ್ಡಾಯವಾಗಿ ದ್ವಿತೀಯ ಪಿಯುಸಿ ವಿಜ್ಞಾನ (ಪಿಸಿಎಂಬಿ) ವಿಭಾಗದಲ್ಲಿ ತೇರ್ಗಡೆ ಹೊಂದಿರಬೇಕು.

ಜನವರಿ 05ರಿಂದ ಜನವರಿ 07ರವರೆಗೆ ಪ್ರವೇಶಾತಿ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಿಕೆಯ ಜೊತೆಗೆ ಕಲಾ ಅನಾವರಣ: ಪಾಟೀಲ



• **ಮಲ್ಲಮ್ಮ ನುಡಿ ವಾರ್ತೆಕೊಪ್ಪಳ :**

ವಿದ್ಯಾರ್ಥಿಗಳು ಇದ್ದಾಗಲೆ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಕಲಿಕೆಯ ಜೊತೆಗೆ ಕಲೆಯನ್ನು ಅನಾವರಣಗೊಳಿಸುವುದು ಮುಖ್ಯ ಎಂದು ಕೊಪ್ಪಳ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ ಹೇಳಿದರು.

ತಾಲೂಕಿನ ಕರಮುಡಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶುಕ್ರವಾರ ಆಯೋಜಿಸಿದ ಅಖಂಡ ಯಲಬುರ್ಗಾ ಹಾಗೂ ಕುಕನೂರ ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳು ಅಂಕಗಳನ್ನು ಗಳಿಸುವದೇ ಜೀವನ ಎಂದು ನಿರ್ಧರಿಸಿದ್ದಾರೆ ನಿಜಕ್ಕೂ ಅದು ತಪ್ಪು ಅಂಕಗಳನ್ನು ಗಳಿಸುವುದು ಶಿಕ್ಷಣದ ಒಂದು ಭಾಗಮಾತ್ರಆಗಿದೆ ಪಠ್ಯೇತರ ಚಟುವಟಿಕೆಯಲ್ಲಿ ಭಾಗಿಗಳಾಗಿ ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕು ಎಂದು ವಿದ್ಯಾರ್ಥಿಗಳಿಗೆ ಕರೆನೀಡಿದ ಅವರು ಶೈಕ್ಷಣಿಕ ಗುಣಮಟ್ಟ ಸುಧಾರಾಣೆಗೆ ಹಲವಾರು ಕಾರ್ಯಕ್ರಮಗಳನ್ನು ಸರಕಾರ ರೂಪಿಸಿದೆ ಆ ಮಾರ್ಗದರ್ಶಿಕೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೈಯುತ್ತಿರುವುದರಿಂದ ಗುಣಮಟ್ಟದ ಶಿಕ್ಷಣ ಸಿಗುತ್ತದೆ ಎಂದರು. ಕಲಾತ್ಸೋವದಿಂದ ಮಕ್ಕಳಲ್ಲಿರುವ ಅಡಗಿರುವ ಸೂಪ್ತ ಪ್ರತಿಭೆ ಹೊರಹೊಮ್ಮಿ ಬೌದ್ಧಿಕ ಹಾಗೂ ಮಾನಸಿಕ ಅಭಿವೃದ್ಧಿ ಅನಾವರಣಗೊಳ್ಳುತ್ತಿರುವದರಿಂದ ಅವರನ್ನು ಪ್ರೊತ್ಸಾಹಿಸಲು ನಿಖರವಾದ ಮೌಲ್ಯಮಾಪನವನ್ನು ನಿರ್ಣಾಯಕರು ಮಾಡಬೇಕು ಆವಾಗ ಮಾತ್ರ ನಿಜವಾದ ಪ್ರತಿಭೆ ಗುರುತಿಸಿದಂತಾಗುತ್ತದೆ ಎಂದರು.

# ಮೀನುಗಾರಿಕೆ ಇಲಾಖೆ: ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮೀನುಗಾರಿಕೆ ಇಲಾಖೆಯಿಂದ 2025-26ನೇ ಸಾಲಿನಲ್ಲಿ ನಾಲ್ಕು ಚಕ್ರ ವಾಹನ ಖರೀದಿಸಲು ಸಹಾಯಧನ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ 01 ಮತ್ತು ಪರಿಶಿಷ್ಟ ಪಂಗಡದ 02 ಮೀನುಗಾರರಿಗೆ ನಾಲ್ಕು ಚಕ್ರ ವಾಹನ ಖರೀದಿಸಲು ಗುರಿ ನಿಗದಿಪಡಿಸಲಾಗಿದ್ದು, ಖರೀದಿಸಿದ ವಾಹನಕ್ಕೆ ಶೇ.50ರಷ್ಟು ಅಥವಾ ಗರಿಷ್ಟ 3 ಲಕ್ಷ ರೂ. ಆರ್ಥಿಕ ನೆರವು ನೀಡಲಾಗುವುದು.

ಅರ್ಜಿಯನ್ನು ಜನವರಿ 12 ರೊಳಗಾಗಿ ಜಿಲ್ಲೆಯ ಆಯಾ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಸಿರುಗುಪ್ಪ, ಕಂಪ್ಲಿ, ಕುರುಗೋಡು ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಮೊ.7406508971 ಹಾಗೂ ಸಂಡೂರಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಮೊ.7204911897 ಗೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಾಮಧೇಯ ಮಹಿಳೆ ಮೃತ ದೇಹ: ವಾರಸುದಾರರ ಪತ್ತೆಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಸತ್ಯಂ ಕಾಲೇಜಿನ ಮುಂಭಾಗದಲ್ಲಿ ಹೆಚ್‌ಎಲ್‌ಸಿ ಉಪ ಕಾಲುವೆಯಲ್ಲಿ ಸುಮಾರು 60 ರಿಂದ 65 ವರ್ಷದ ಅನಾಮಧೇಯ ಮೃತ ಮಹಿಳೆಯ ಶವವು ಜ.02 ರಂದು ತೇಲಿಕೊಂಡು ಬಂದಿದ್ದು, ಮೃತಳ ವಾರಸುದಾರರು ತಿಳಿದಿರುವುದಿಲ್ಲ. ಈ ಕುರಿತು ಪ್ರಕರಣ ದಾಖಲಾಗಿದ್ದು, ವಾರಸುದಾರರ ಪತ್ತೆಗೆ ಸಹರಿಸಬೇಕು ಎಂದು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಚಹರೆ ಗುರುತು: ಎತ್ತರ ಅಂದಾಜು 5.4 ಅಡಿ, ಕೆಂಪು ಮೈಬಣ್ಣ, ದುಂಡು ಮುಖ, ಹಸಿರು ಬಣ್ಣದ ಸೀರೆ ಮತ್ತು ಕಪ್ಪು ಬಣ್ಣದ ಕುಪ್ಪಸ, ಎರಡು ಕೈಗಳಿಗೆ ಹಸಿರು ಬಳೆ ಧರಿಸಿರುತ್ತಾಳೆ. ತಲೆ ಕೂದಲು ಉದುರಿರುತ್ತದೆ. ಕೈ ಮತ್ತು ಕಾಲುಗಳನ್ನು ಜಲಚರ ಪ್ರಾಣಿಗಳು ಕಿತ್ತು ತಿಂದಂತೆ ಇರುತ್ತದೆ.

ಅನಾಮಧೇಯ ಮೃತ ಮಹಿಳೆಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392258100 ಅಥವಾ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ಪಿಐ ದೂ.08392-276461 ಹಾಗೂ ಮೊ.9480803049 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು :**

ರಾಯಚೂರು ಜಿಲ್ಲಾ ಉಸುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು 2026ರ ಜನವರಿ 3 ಹಾಗೂ 4ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಜನವರಿ 3ರಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನನಿಲ್ದಾಣದಿಂದ ನಿರ್ಗಮಿಸಿ, ಬಳ್ಳಾರಿ ಜಿಲ್ಲೆಯ ಜಿಂದಾಲ್ ಏರಸ್ಟ್ರಿಪಗೆ 12.50ಕ್ಕೆ ಆಗಮಿಸುವರು. ಜಿಂದಾಲನಿಂದ 1.30ಕ್ಕೆ ಹೊರಟು 2 ಗಂ-ಟೆಗೆ ಸಿಂಧನೂರಿನ ಸರ್ಕ್ಯೂಟ್ ಹೌಸ್ ಹತ್ತಿರದ ಹೆಲಿಪ್ಯಾಡಗೆ ಆಗಮಿಸುವೆರು. ಮಧ್ಯಾಹ್ನ 2 ಗಂಟೆಗೆ ಮುಖ್ಯಮಂತ್ರಿಗಳೊಂದಿಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಭಾಗವಹಿಸುವರು.

ಬಳಿಕ ಮಧ್ಯಾಹ್ನ 3.30ಕ್ಕೆ ಸಿಂಧನೂರು ತಾಲೂಕಿನ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠ ಆವರಣದಲ್ಲಿ

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಶ್ರೀ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಸಂಯುಕ್ತಾಶ್ರಯದಲ್ಲಿ ಶ್ರೀ ಅಂಬಾ ಮಹೋತ್ಸವ-2026ರ ಜಾತ್ರಾ ಮಹೋತ್ಸವ ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳೊಂದಿಗೆ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ಜಿಲ್ಲೆಯ ಲಿಂಗಸುಗೂರಿನಲ್ಲಿ ತಾಲೂಕಿನ ವೀರಶೈವ ವಿದ್ಯಾವರ್ಧಕ ಸಂಘದಿಂದ ಏರ್ಪಡಿಸಲಾದ ಬೆಳ್ಳಿ ಸಂಭ್ರಮ-2026ರ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ಬಳಿಕ ರಾಯಚೂರು ನಗರಕ್ಕೆ ಆಗಮಿಸಿ ರಾಯಚೂರಿನಲ್ಲಿ ವಾಸವ್ಯ ಮಾಡುವರು. ಜನವರಿ 4ರ ಬೆಳಿಗ್ಗೆ 9 ಗಂಟೆಗೆ ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯಚೂರು ಉತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಕ್ರಿಕೇಟ್ ಟೂರ್ನಮೆಂಟ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಮಹರ್ಷಿ ವಾಲ್ಮೀಕಿ ಪುತ್ಥಳಿ ಲೋಕಾರ್ಪಣೆ: ಬಿ.ರಾಂಪ್ರಸಾದ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಮಹರ್ಷಿ ವಾಲ್ಮೀಕಿ ಪುತ್ಥಳಿ ಲೋಕಾರ್ಪಣೆ ಕಾರ್ಯಕ್ರಮ ನಿಗದಿಯಾದಂತೆ ನಾಳೆ ಸಂಜೆ ಅದ್ದೂರಿಯಾಗಿ ನಡೆಯಲಿದೆ ಎಂದು ವಾಲ್ಮೀಕಿ ಸಮುದಾಯದ ಮುಖಂಡ ಬಿ.ರಾಂಪ್ರಸಾದ್ ಹೇಳಿದರು.

ನಗರದ ಖಾಸಗಿ ಹೋಟೆಲ್ ಒಂದರಲ್ಲಿ ಇಂದು ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಗರದ ವಾಲ್ಮೀಕಿ ವೃತ್ತದಲ್ಲಿ ಪ್ರತಿಷ್ಠಾಪಿಸಿರುವ ಮಹರ್ಷಿ ವಾಲ್ಮೀಕಿ ಪುತ್ಥಳಿ ಲೋಕಾರ್ಪಣೆ ಕಾರ್ಯಕ್ರಮ ನಾಳೆ ಸಂಜೆ ಬಹಳ ಅದ್ದೂ-ರಿಯಾಗಿ ನೆರವೇರಲಿದ್ದು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗುವುದರಲ್ಲಿ ಯಾವುದೇ ಅನುಮಾವಿಲ್ಲ ಎಂದು ಬಿ.ರಾಂಪ್ರಸಾದ್ ಹೇಳಿದರು. ಮಾಜಿ ಸಚಿವರು ಹಾಗೂ ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ.ನಾಗೇಂದ್ರ ಅವರು ಇಂದು ಸಂಜೆ ನಗರಕ್ಕೆ ಆಗಮಿಸುತ್ತಾರೆ, ವಾಲ್ಮೀಕಿ ಸಮುದಾಯದವರ ಸಭೆ ಕರೆದು ನಾಳಿನ ಕಾರ್ಯಕ್ರಮಕ್ಕೆ ಪೂರ್ವತಯಾರಿ ಕು-ರಿತಂತೆ ಚರ್ಚಿಸುತ್ತೇವೆ. ಅಲ್ಲದೇ ಜಿಲ್ಲೆಯಿಂದ ಎಷ್ಟು ಸಂಖ್ಯೆಯಲ್ಲಿ ಸಮುದಾಯದವರು ಯಾವ ಯಾವ ಭಾಗದಿಂದ ಬರುತ್ತಾರೆ ಎಂಬುದನ್ನು ಸಹ ಚರ್ಚಿಸುತ್ತೇವೆ. ಅಲ್ಲದೇ ನಾಳಿನ ಕಾರ್ಯಕ್ರಮಕ್ಕೆ ಎಲ್ಲಾ ಭಾಗದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ವಾಲ್ಮೀಕಿ ಸಮುದಾಯದ ಜನ ಬಂದು ಆಗಮಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕು ಎಂದು ಬಿ.ರಾಂಪ್ರಸಾದ್ ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರಾದ ಬಿ.ರಾಂಪ್ರಸಾದ್, ಪಿ.ಜಗನ್ನಾಥ (ಜಗನ್), ದೇವಿನಗರ ಪರಶುರಾಮ, ದೇವಿನಗರ ಹೊನ್ನೂರಪ್ಪ ಕಪ್ಪಗಲ್ ರಸ್ತೆಯ ಬಜ್ಜಪ್ಪ (ಬುಜ್ಜಪ್ಪ), ಎರಗುಡಿ ಮುದಿಮಲ್ಲಯ್ಯ, ಬಿ.ರುದ್ರಪ್ಪ, ಹವಂಬಾವಿ ಟಿ.ಲೋಕೇಶ್, ವಿ.ಎನ್.ಶ್ರೀನಾಥ್, ಕೆಕೆ ಹಾಳ್ ಸತ್ಯನಾರಾಯಣ, ವಿ.ಕೆ.ಬಸಪ್ಪ, ಹೊಸ ಎರಗುಡಿ ಎನ್.ಸೋಮಣ್ಣ, ವಣೇನೂರು ಶ್ರೀನಿವಾಸ್, ಸಂಗನಕಲ್ಲು ವಿಜಯಕುಮಾರ್, ಹಗರಿ ಗೋವಿಂದ, ಬಸರಕೋಡು ಗುಜ್ಜಲ ಗಾದಿಲಿಂಗಪ್ಪ, ಬಸರಕೋಡು ಗೋವಿಂದರಾಜುಲು, ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

# ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭ

## ಕೈಗೆಟುಕುವ ದರದಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ: ಡಾ.ವೀರಣ್ಣ ಚರಂತಿಮಠ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಸಾರ್ವಜನಿಕರಿಗೆ ಅತ್ಯಾಧುನಿಕ ವೈದ್ಯಕೀಯ ಸೇವಾ ಸೌಲಭ್ಯ ಒದಗಿಸಬೇಕೆನ್ನುವ ಕನಸು ಇಂದು ನನಸಾಗಿದೆ. ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಾಪನೆಯೊಂದಿಗೆ ಬಿ.ವಿ.ವಿ ಸಂಘ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಪಯಣವನ್ನು ಆರಂಭಿಸಿದೆ. ಆಸ್ಪತ್ರೆಯಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಕೈಗೆಟುಕುವ ದರದಲ್ಲಿ ದೊರೆಯಲಿದೆ ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರು ಹೇಳಿದರು.

ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಆವರಣದಲ್ಲಿ ಜನವರಿ 1 ರಂದು 400 ಹಾಸಿಗೆಗಳ ನೂತನ ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಯಾರಂಭದ ವಿಶೇಷ ಪೂಜೆ0ಯಲ್ಲಿ ಪಾಲ್ಗೊಂಡು ನಂತರ ಮಾತನಾಡಿದ ಅವರು ಉತ್ತರ ಕರ್ನಾಟಕದಲ್ಲಿ ಸುಸಜ್ಜಿತ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಾಪನೆ ಬಿ.ವಿ.ವಿ ಸಂಘದ ಹೆಮ್ಮೆಯ ಕೊಡುಗೆಯಾಗಿದೆ. ಎಲ್ಲ ಪ್ರಕಾರದ ಉನ್ನತ ವೈದ್ಯಕೀಯ ಉಪಕರಣಗಳ ಸೇವಾಸೌಲಭ್ಯದೊಂದಿಗೆ ಪರಿಣಿತ ತಜ್ಞ ವೈದ್ಯರ ಸೇವೆ ದೊರೆಯಲಿದೆ. ಸಾರ್ವಜನಿಕರು ಈ ಸೇವಾ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಕಟ್ಟಡ ವಿಭಾಗ ಕಾರ್ಯಾಧ್ಯಕ್ಷ ಮಹೇಶ ಕಕರಡ್ಡಿ, ಬಿ.ವಿ.ವಿ ಸಂಘದ ಸದಸ್ಯರಾದ ವಿಶ್ವನಾಥ ಇಲಾಳಶೆಟ್ಟರ, ಕುಮಾರ ಜಿಗಜಿನ್ನಿ, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ಸುಪರ್ ಸ್ಪೆಷಾಲಿಟಿ ಸಿ.ಇ.ಓ ಡಾ.ನವೀನ ವಿ.ಚರಂತಿಮಠ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೊರಾ, ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ, ಸುಪರ್ ಸ್ಪೆಷಾಲಿಟಿ ತಜ್ಞವೈದ್ಯರು, ವಿವಿಧ ವಿಭಾಗಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಹೊಸವರ್ಷಾಚರಣೆಯ ನಂತರ ಉಳಿದ ತ್ಯಾಜ್ಯ

ನಾಗರಾಜ ಮಂಜಗುಣಿ

**ಗೋಕರ್ಣ:** ಕ್ರಿಸ್‌ಮಸ್, ಹೊಸವರ್ಷಾಚರಣೆ ಎಲ್ಲ ಈಗ ಮುಗಿದಿದೆ. ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆ. ಆದರೆ ಗೋಕರ್ಣದ ವ್ಯಾಪ್ತಿಯ ಮತ್ತು ಹೃದಯ ಭಾಗದಲ್ಲಿಯ ಪ್ಲಾಸ್ಟಿಕ್ ತ್ಯಾಜ್ಯ ರಾಶಿ ರಾಶಿಯಾಗಿ ಬಿದ್ದಿರುವುದು ಇಲ್ಲಿಯ ಕಸ ವಿಲೇವಾರಿ ಯಾವ ರೀತಿ ನಡೆಯುತ್ತದೆ ಎನ್ನುವುದಕ್ಕೆ ಸಾಕ್ಷಿ ತೋರಿಸಿದಂತಾಗಿದೆ.

ಪ್ರತಿದಿನ ಪ್ರವಾಸಿಗರು ಮತ್ತು ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದರೆ ಸರಣಿ ರಜೆ, ಕ್ರಿಸ್‌ಮಸ್ ಹಾಗೂ ಹೊಸವರ್ಷಾಚರಣೆಗೆ ಮಾತ್ರ ಲಕ್ಷಾಂತರ ಪ್ರವಾಸಿಗರು ಗೋಕರ್ಣಕ್ಕೆ ಆಗಮಿಸುತ್ತಾರೆ. ಇಲ್ಲಿಯ ಪ್ರಮುಖ ಬೀಚ್‌ಗಳೇ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇನ್ನು ಮುಖ್ಯ ಕಡಲತೀರದ ಸಮೀಪ ಮತ್ತು ರಾಮ ಮಂದಿರಕ್ಕೆ ತೆರಳುವ ರಸ್ತೆಯಲ್ಲಿ ಹೇರಳವಾಗಿ ಪ್ಲಾಸ್ಟಿಕ್ ತ್ಯಾಜ್ಯಗಳು ಕಂಡುಬರುತ್ತವೆ.

ಗೋಕರ್ಣ ವ್ಯಾಪ್ತಿಯಲ್ಲಿಯೂ ಕಸ ವಿಲೇವಾರಿ ಘಟಕ ಇದ್ದರೂ ಕೂಡ ಪ್ರತಿನಿತ್ಯ ತ್ಯಾಜ್ಯ ವಿಲೇವಾರಿ ಆಗದಿರುವುದು ನಿಜಕ್ಕೂ ದುರದೃಷ್ಟಕರ. ಹಾಗೇ ನೋಡಿದರೆ ಇತರೆ ಬೀಚ್‌ಗಳಲ್ಲಿ ಇಷ್ಟೊಂದು ತ್ಯಾಜ್ಯ ಕಂಡುಬರುವುದಿಲ್ಲ. ಆದರೆ ಪ್ರಮುಖ ಕಡಲತೀರ, ರಾಮಮಂದಿರಕ್ಕೆ ತೆರಳುವ ರಸ್ತೆ ಮತ್ತು ರಾಮತೀರ್ಥದ ಪಕ್ಕದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಮಾತ್ರ ಹೆಚ್ಚಾಗಿ ಕಂಡುಬರುತ್ತಿದೆ. ಇಲ್ಲಿಗೆ ಆಗಮಿಸುವ ಭಕ್ತರು ಕೂಡ ಈ ತ್ಯಾಜ್ಯವನ್ನು ನೋಡಿ ಮತ್ತೊಮ್ಮೆ ಬರುವಾಗ ಇಲ್ಲಿಯ ಸಮಸ್ಯೆಗಳು ಸಹಜವಾಗಿ ಮನಸ್ಸಿನಲ್ಲಿ ಕಾಡಿದಂತಾಗುತ್ತದೆ.

ಧಾರ್ಮಿಕ ತಾಣವಾಗಿ ವಿಶ್ವದಲ್ಲಿಯೇ ಗೋಕರ್ಣ ತನ್ನನ್ನು ಗುರುತಿಸಿಕೊಂಡಿದೆ. ಮಹಾಬಲೇಶ್ವರನ ಆತ್ಮಲಿಂಗವಿರುವ ಏಕೈಕ ತಾಣವೆಂದರೆ ಅದು ಗೋಕರ್ಣ. ಇಂತಹ ಪವಿತ್ರ ಧಾರ್ಮಿಕ ತಾಣಕ್ಕೆ ಬರಲು ರಾಜ್ಯ ಮತ್ತು ಹೊರರಾಜ್ಯಗಳಿಂದಲೇ ಭಕ್ತರು ಆಸೆ ಪಡುತ್ತಾರೆ. ಆದರೆ ದೇವರ ದರ್ಶನವೆಲ್ಲ ಮುಗಿಸಿ ಹತ್ತಿರದಲ್ಲಿರುವ ಮುಖ್ಯ ಕಡಲತೀರಕ್ಕೆ ತೆರಳಿದರೆ ತ್ಯಾಜ್ಯದ ದರ್ಶನವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರು ಪರಿಸರದ ಕುರಿತು ವಿಚಾರ ಮಾಡಿದರೆ ಹೀಗೆ ನಡೆಯುತ್ತಿರಲಿಲ್ಲವೇನೋ. ಇನ್ನು ಸ್ಥಳೀಯ ಆಡಳಿತ ಕೂಡ ಕಟ್ಟುನಿಟ್ಟಾಗಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ. ಸಿಬ್ಬಂದಿಗಳ ಕೊರತೆಯೋ ಅಥವಾ ಆರ್ಥಿಕ ಸಮಸ್ಯೆಯೋ ಗೊತ್ತಿಲ್ಲ. ಇಲ್ಲಿ ಅಭಿವೃದ್ಧಿ ಎನ್ನುವುದು ಗೌಣವಾಗಿದೆ. ಭಕ್ತರಿಗೆ ಮತ್ತು ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಒದಗಿಸುವುದು ತಾಲೂಕು ಆಡಳಿತದಿಂದ ಹಿಡಿದು ಜಿಲ್ಲಾಡಳಿತದವರೆಗೂ ಮಾಡಬೇಕು. ಆದರೆ ಅಂತಹ ಕೆಲಸವಾಗುತ್ತಿಲ್ಲ. ಗೋಕರ್ಣಕ್ಕಾಗಿಯೇ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ ಧಾರ್ಮಿಕ ಸ್ಥಳದಲ್ಲಿ ಇನ್ನು ಬೀಚ್‌ಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ವರದಿಗಳು ಸಿದ್ಧಗೊಳ್ಳಬೇಕು. ಮಾದನಗೇರಿಯಿಂದ ಗೋಕರ್ಣಕ್ಕೆ ಬರುವ ರಸ್ತೆಗಳು ಕೂಡ ಇಕ್ಕಟ್ಟಾಗಿದ್ದು, ಮೂರನೇ ಬಾರಿಗೆ ಶಾಸಕರಾಗಿರುವ ದಿನಕರ ಶೆಟ್ಟಿಯವರು ಆಗಾಗ ಗೋಕರ್ಣಕ್ಕೆ ಬಂದುಹೋಗುತ್ತಾರೆ. ಇಲ್ಲಿಯ ರಸ್ತೆಯ ಬಗ್ಗೆ ಅಷ್ಟು ಆಸಕ್ತಿ ತೆಗೆದು-ಕೊಂಡಂತೆ ಕಂಡುಬರುತ್ತಿಲ್ಲ. ಒಂದೆಡೆ ಕಿರಿದಾದ ರಸ್ತೆ, ಇನ್ನೊಂದೆಡೆ ರಸ್ತೆ ಹಾಳಾಗಿರುವುದು. ಇದರ ನಡುವೆ ಪ್ರವಾಸಿಗರು ಮತ್ತು ಭಕ್ತರು ಟ್ರಾಫಿಕ್‌ಜಾಮ್‌ನಲ್ಲಿ ಸಿಲುಕಿ ನಲುಗುವಂತಾಗಿದೆ. ಇಷ್ಟು ವರ್ಷಗಳ ಪೈಕಿ ಈ ವರ್ಷವೇ ಗೋಕರ್ಣ ಪೊಲೀಸ್ ಅಧಿಕಾರಿಗಳು ಟ್ರಾಫಿಕ್‌ಜಾಮ್ ಕಡಿತಗೊಳಿಸಲು ವಿವಿದೆಡೆ ವಾಹನವನ್ನು ನಿಲ್ಲಿಸಲು ವ್ಯವಸ್ಥೆ ಮಾಡಿದ್ದರು. ಹಾಗೇ ಪ್ರತಿಯೊಂದು ಆಯಾಕಟ್ಟಿನ ಸ್ಥಳದಲ್ಲಿ ಪೊಲೀಸರಿದ್ದು, ಟ್ರಾಫಿಕ್‌ಜಾಮ್ ಆಗದಂತೆ ನೋಡಿಕೊಂಡರು. ಇದರ ನಡುವೆಯೂ ಕೂಡ ಪ್ರವಾಸಿಗರ ವಾಹನ ಮಿತಿಮೀರಿದಾಗ ಅಲ್ಪಸ್ವಲ್ಪ ಟ್ರಾಫಿಕ್‌ಜಾಮ್‌ನಿಂದ ನರಳಿದ್ದಾರೆ.



**ಗೋಕರ್ಣ ಎನ್ನುವುದು ಪುಣ್ಯದ ತಾಣ. ಹಾಗೇ ಪ್ರವಾಸೋದ್ಯಮದಲ್ಲಿಯೂ ತನ್ನ ಕೊಡುಗೆ ನೀಡಿದೆ. ಆದರೆ ಇಲ್ಲಿಯ ಪ್ಲಾಸ್ಟಿಕ್ ತ್ಯಾಜ್ಯದ ವಿಲೇವಾರಿ ಹಾಗೂ ಮೂಲ ಸೌಕರ್ಯ ಒದಗಿಸಲು ಸ್ಥಳೀಯ ಆಡಳಿತ ಮತ್ತು ಸರಕಾರ ವಿಫಲವಾಗಿದೆ. ಗೋಕರ್ಣಕ್ಕಾಗಿಯೇ ವಿಶೇಷ ಪ್ಯಾ-ಕೇಜ್ ಅಭಿವೃದ್ಧಿಪಡಿಸುವ ಅನಿವಾರ್ಯತೆಯಿದೆ. ಹಾಗಾದಾಗ ಗೋಕರ್ಣಕ್ಕೆ ಇನ್ನು ದುಪ್ಪಟ್ಟು ಪ್ರವಾಸಿಗರು ಬರುವ ಸಾಧ್ಯತೆಯಿದೆ. ಇದರಿಂದಾಗಿ ಸ್ಥಳೀಯರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಲಭಿಸಿದಂತಾಗುತ್ತದೆ.**

**ಸದಾನಂದ ಎಸ್. ನಾಯ್ಕ**
**ಸಾಮಾಜಿಕ ಕಾರ್ಯಕರ್ತರು, ಗೋಕರ್ಣ**

# ಧರ್ಮಸ್ಥಳ ಯೋಜನೆಯಿಂದ ನಾಡಿನ ಅಭಿವೃದ್ಧಿಗೆ ಬಹುದೊಡ್ಡ ಕಾಣಿಕೆ: ಸಿದ್ಧಲಿಂಗ ಶ್ರೀ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜನ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ನಾಡಿನ ಅಭಿವೃದ್ಧಿಗೆ ಬಹುದೊಡ್ಡ ಕಾಣಿಕೆ ನೀಡುತ್ತಿದೆ ಎಂದು ಶಿವಯೋಗಾಶ್ರಮದ ಅಭಿನವ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಾಗಲಕೋಟೆ ಹಾಗೂ ಶಿರೂರ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಶಿರೂರ ಸಿದ್ದೇಶ್ವರ ದೇವಸ್ಥಾನದ ಸಭಾ ಭವನದಲ್ಲಿ ಜರುಗಿದ ಸಹಸ್ರ ಬಿಲ್ವಾರ್ಚನೆ ಪೂಜಾ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪರೋಪಕಾರಿ ಕೆಲಸ ಮಾಡಿ ಬಡವರಿಗೂ ಬದುಕು ಕಟ್ಟಿಕೊಳ್ಳಲು ನೆರವಾಗಿರುವ ಧರ್ಮಸ್ಥಳ ಸಂಸ್ಥೆ ಸದುದ್ದೇಶದ ಭಾವನೆಯಿಂದ ಮಹಿಳೆಯರಿಗೆ ಆರ್ಥಿಕ ನೆರವು ಒದಗಿಸುತ್ತಿದ್ದು ಅದನ್ನು ಒಳ್ಳೆಯದಕ್ಕೆ ಬಳಸಿಕೊಂಡು ಆರ್ಥಿಕ ಪ್ರಗತಿ ಹೊಂದಬೇಕು ಎಂದು ಶ್ರೀಗಳು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಗ್ರಾಮಾಭಿವೃದ್ಧಿ ಯೋಜನೆಯ ಬಾಗಲಕೋಟೆ ಜಿಲ್ಲಾ ನಿರ್ದೇಶಕ ಚೆನ್ನಕೇಶವ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೇವಲ ಧಾರ್ಮಿಕತೆಗೆ ಒತ್ತು ನೀಡದೇ ಸಾಮಾಜಿಕ ಕಾರ್ಯಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡು ನಾಡಿನ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಸ್ವ ಸಹಾಯ ಗುಂಪು ರಚನೆಯ ಮೂಲಕ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಟ್ಟು ಕುಟುಂಬದ ಜವಾಬ್ದಾರಿ ನಿಭಾಯಿಸುವ ಶಕ್ತಿ ನೀಡಿದೆ ಎಂದು ಹೇಳಿದರು.

ಮುಖ್ಯ ಅತಿಥಿ ಜಿಪಂ ಮಾಜಿ ಸದಸ್ಯ ರಂಗನಗೌಡ ಗೌಡರ ಮಾತನಾಡಿ, ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ಶ್ಲಾಘನೀಯ ಎಂದರು.

ದಯಾಶಂಕರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ನೀಲಮ್ಮ ಚಿತ್ತರಗಿ ಅಧ್ಯಕ್ಷತೆ ವಹಿಸಿದ್ದರು. ರಂಗಪ್ಪ ಮಳ್ಳಿ, ಕಲ್ಲಪ್ಪ ಭಗವತಿ, ನಾಗೇಶ ಪೂಜಾರಿ, ಧರ್ಮಸ್ಥಳ ಯೋಜನೆ ಸೇವಾ ಪ್ರತಿನಿಧಿಗಳಾದ ಜ್ಯೋತಿ ಗುಲಗಂಜಿ, ಶೋಭಾ ಅಂಬಲಿ, ಸಿದ್ದಪ್ಪ ಹಳ್ಳೂರ ಅತಿಥಿಗಳಾಗಿದ್ದರು.

ಸೇವಾ ಪ್ರತಿನಿಧಿ ಬಸಮ್ಮ ಖಾನಾಪೂರ ಸ್ವಾಗತಿಸಿದರು. ಮಹಿಳಾ ಒಕ್ಕೂಟದ ವಲಯ ಮೇಲ್ವಿಚಾರಕಿ ಸವಿತಾ ವಡ್ಡರ ನಿರೂಪಿಸಿದರು. ಕ್ಷೇತ್ರ ಯೋಜನಾಧಿಕಾರಿ ಬಸವರಾಜ ಅಂಗಡಿ ವಂದಿಸಿದರು.

**ಧಾರ್ಮಿಕ ಸಭೆಗೂ ಮುನ್ನ ಬೆಳಿಗ್ಗೆ ಜರುಗಿದ ಶಿವನಿಗೆ ಬಿಲ್ವಾರ್ಚನೆ ಸಮರ್ಪಿಸುವ ಪೂಜಾ ಕಾರ್ಯಕ್ರಮದಲ್ಲಿ ಮಲ್ಲಾಪೂರ, ಶಿರೂರ ಹಾಗೂ ನೀಲಾನಗರ ಗ್ರಾಮಗಳ ಸ್ವಸಹಾಯ ಸಂಘಗಳ 101 ಸದಸ್ಯರು ಪಾಲ್ಗೊಂಡಿದ್ದರು. ಪೂಜೆಯ ನಂತರ ಮಹಾ ಮಂಗಳಾರತಿ ನಡೆದು ಮಹಾ ಪ್ರಸಾದ ಸೇವೆ ಜರುಗಿತು.**

# ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳು

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯಲ್ಲಿ 4,11,582 ಫಲಾನುಭವಿಗಳು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಹೇಳಿದ್ದಾರೆ.



ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು ಸರಕಾರ ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದುವಂತೆ ಮಾಡುವನಿಟ್ಟನಲ್ಲಿ ರಾಜ್ಯ ಸರಕಾರ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು ಮಾಹೆಯಾನ 2000 ರೂ.ಗಳನ್ನು ನೀಡುವ ಗೃಹಲಕ್ಷ್ಮೀ ಯೋಜನೆಯನ್ನು 2023, ಜೂನ್ 6 ರಂದು ಜಾರಿಗೆ ತಂದಿದೆ. ಪ್ರಾರಂಭದಲ್ಲಿ ಆಗಸ್ಟ-2023ರ ಮೇಹೆಯಲ್ಲಿ 3,58,285 ಫಲಾನುಭವಿಗಳು ಇದ್ದರು. ಈಗ ಸೆಪ್ಟೆಂಬರ 2025ಕ್ಕೆ 4,11,582 ಫಲಾನುಭವಿಗಳಾಗಿದ್ದಾರೆ. ಸೆಪ್ಟಂಬರ-2025ರ ಮಾಹೆಯ ಒಟ್ಟು 82.31 ಕೋಟಿ ರೂ.ಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಆಗಿರುತ್ತದೆ ಎಂದು ತಿಳಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಬಾಗಲಕೋಟೆ ಜಿಲ್ಲೆಗೆ 24 ಕಂತುಗಳಲ್ಲಿ 1901.23 ಕೋಟಿ ರೂ.ಗಳಷ್ಟು ಅನುದಾನ ಬಿಡುಗಡೆಯಾಗಿರುತ್ತದೆ. ಫೆಬ್ರವರಿ ಮತ್ತು ಮಾರ್ಚ-2025ರ ಮಾಹೆಯ ಹಣ ತಾಂತ್ರಿಕ ಕಾರಣಗಳಿಂದ ಜಮೆ ಆಗಿರುವುದಿಲ್ಲ. ಬಿಡುಗಡೆಯಾದರೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ. ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲವೆಂದು ತಿಳಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆಯಡಿ ಫಲಾನುಭವಿಗಳು ಎದುರಿಸುತ್ತಿರುವ ಐಟಿ, ಜಿಎಸ್‌ಟಿ ಸಮಸ್ಯೆಯನ್ನು ಫಲಾನುಭವಿಗಳು ತಾವು ತೆರಿಗೆ ಪಾವತಿದಾರರು ಇಲ್ಲವೆಂಬ ಹಿಂಬರಹವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಮಾಹಿತಿಯನ್ನು ಕಚೇರಿಗಳಿಗೆ ಸಲ್ಲಿಸಿರುತ್ತಿರಿ.

ಈ ಕುರಿತು ಪ್ರಧಾನ ಕಚೇರಿಯ ಹಂತದಲ್ಲಿ ಪರಿಶೀಲನೆಗೆ ಒಲಪಡುತ್ತದೆ. ಪರಿಶೀಲನೆ ನಂತರ ಸಮಸ್ಯೆಗಳು ಬಗೆಹರಿಯಲಿವೆ. ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದಂತೆ ಸಹಾಯವಾಣಿ ಸ್ಥಾಪಿಸಲಾಗಿದ್ದು, ಸಹಾಯವಾಣಿ ಸಂಖ್ಯೆ 181 ಕ್ಕೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

# ಕಾರ್ಖಾನೆಗಳಿಂದ ಜೀವ ಆತಂಕ ಉಂಟಾದರೆ, ಅವು ವಿನಾಶಕಾರಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಭಾರತೀಯ ಕಿಸಾನ್ ಸಭಾ ಉತ್ತರ ಪ್ರಾಂತ ಪ್ರಧಾನ ಕಾರ್ಯದರ್ಶಿ ಜಗದೀಶ ಸಂಕನಗೌಡ್ರ 62ನೇ ದಿನದ ಧರಣಿ ಸತ್ಯಾಗ್ರಹ ಬೆಂಬಲಿಸಿ ಇಲ್ಲಿನ ಬಲ್ಡೋಟ, ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ ಸುಮಿ, ಎಕ್ಸ್ ಇಂಡಿಯಾ ಸೇರಿ ಇತರೆ ಎಲ್ಲಾ ಕಾರ್ಖಾನೆಗಳು ಇಲ್ಲಿ ತಳ ಊರಿ ಹಳ್ಳಿ ಮತ್ತು ನಗರ ಜನರ ಆರೋಗ್ಯ ಕೆಡಿಸಿವೆ. 20ಕ್ಕೂ ಹೆಚ್ಚು ಹಳ್ಳಿಗಳು, ನಗರದ ಅರ್ಧ ಭಾಗ ಈ ಮಾಲಿನ್ಯಕಾರಕ ಕಾರ್ಖಾನೆಗಳಿಂದ ಆರೋಗ್ಯ, ಜೀವಿಸುವ ಹಕ್ಕು ಕಳೆದುಕೊಂಡು ಸಂತ್ರಸ್ತರಾಗುತ್ತಿದ್ದಾರೆ ಎಂದರು.

ನಗರಸಭೆ ಮುಂದುಗಡೆ ಕಳೆದ 62 ದಿನಗಳಿಂದ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನಡೆಸುತ್ತಿರುವ ಅನಿರ್ಧಿಷ್ಟ ಧರಣಿಯಲ್ಲಿ ಮಾತನಾಡಿ, ಕಾರ್ಖಾನೆ ಎಂದೊಡನೆ ಇಲ್ಲಿ ಅಭಿವೃದ್ಧಿ ಮತ್ತು ಉದ್ಯೋಗ ಕುರಿತು ಮಾತನಾಡುವುದು ಅಸಹ್ಯವಾಗಿದೆ. ಇಷ್ಟು ದೊಡ್ಡ ಮೊತ್ತ ಕಣ್ಣಿಗೆ ಕಂಡರೂ ಅದು ತಂದೊಡ್ಡಿದ ಆರೋಗ್ಯ, ಜೀವ ಹಾನಿಯ ಆತಂಕದಂತಹ ಅಭಿವೃದ್ಧಿ ನಮಗೆ ಬೇಕಿಲ್ಲ, ಇಲ್ಲಿ ಐಟಿ ಹಬ್ ಮಾಡುವದಾದರೆ ನಮಗೇನು ಅಭ್ಯಂತರವಿಲ್ಲ, ಸರಕಾರ ಕೂಡಲೇ ಅಂತಹ ಕೆಲಸ ಮಾಡಲಿ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿ ಮಾತನಾಡಿ ಕೃಷಿ ಭೂಮಿ ಈ ಕಾರ್ಖಾನೆಗಳ ದಾಹದಿಂದ ಕಡಿಮೆಯಾಗುತ್ತಿದೆ. ಹೀಗೆ ಭೂಮಿ, ಕೃಷಿ ಒತ್ತಡಕ್ಕೆ ಸಿಲುಕಿದರೆ ದೇಶಕ್ಕೆ ಅನ್ನದ ಕೊರತೆಯಾಗುತ್ತದೆ ಎಂದು ಈ ಆಳುವವರಿಗೆ ತಿಳಿಯುವದಿಲ್ಲವೆ? ಇಷ್ಟೊಂದು ಆರೋಗ್ಯ, ಜೀವ ಹಾನಿ ಮಾಡಿದರೂ ಇಲ್ಲಿನ ರಾಜಕಾರಣಿಗಳು ತಮಗೇನೂ ಸಂಬಂಧವಿಲ್ಲ ಎನ್ನುವಂತೆ ನಡೆದುಕೊಳ್ಳುತ್ತಾರೆಂದರೆ ಮುಂದೆ ಬರುವ ಚುನಾವಣೆಯಲ್ಲಿ ಇವರಿಗೆ ತಕ್ಕ ಪಾಠವನ್ನು ಕೇವಲ 20 ಸಾವಿರ ಜನರು ಮಾಡಿದರೂ ಸಹ ಪಾಠ ಕಲಿಯುತ್ತಾರೆ. ನಮಗೆ ಸ್ಪಂದಿಸದಿದ್ದರೆ ರೈತ ಚಳವಳಿ ಕಟ್ಟಿ ಮತಾಧಿಕಾರದ ಅಸ್ತ್ರ ಇಲ್ಲಿ ಬಳಸಬೇಕಾಗುತ್ತದೆ ಎಂದರು.

ಕಲ್ಯಾಣನಗರ ನಿವಾಸಿ ಯಮನೂರಪ್ಪ ವಾಲಿಕಾರ ಅವರು ಈ ನಾಡಿನ ನೆಲ, ಜಲ, ಜೀವ ಕಾಪಾಡದೆ ತಮ್ಮ ಸ್ವಾರ್ಥದ ಏಕೈಕ ಅಭಿವೃದ್ಧಿ ಎಲ್ಲರ ಅಭಿವೃದ್ಧಿ ಎಂದು ಬಿಂಬಿಸುತ್ತಾರೆ. ದೈತ್ಯ ಕಾರ್ಖಾನೆಗಳು ಬಂದು ಜನರ ಬದುಕು ಕಸಿದುಕೊಂಡಾಗಲೂ ಎಚ್ಚರಗೊಂಡು ಜನರ ಸಂಕಷ್ಟಕ್ಕೆ ಧಾವಿಸಿ ಬರದ ರಾಜಕಾರಣಿಗಳು ಇದ್ದರೆಷ್ಟು ಬಿಟ್ಟರೆಷ್ಟು. ರೈತನು ಅನ್ನ ಬೆಳೆದು ನಮ್ಮನ್ನು ಸಲುಹುತ್ತಾನೆ. ಆತನೇ ಈ ಕಾರ್ಖಾನೆಗಳಿಂದ ಸಂಕಷ್ಟಕ್ಕೆ ಸಿಲುಕಿದರೆ ಜಗತ್ತು ಬಿಕ್ಕುವುದು, ಸರಕಾರದ ಅವೈಜ್ಞಾನಿಕ ಆಲೋಚನೆಗಳಿಂದಲೇ ಭೂಮಿ ಬರಡಾಗುತ್ತಿದೆ ಎಂದರು

ಧರಣಿಯಲ್ಲಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಹಿರಿಯ ಸಾಹಿತಿ ಎ.ಎಂ.ಮದರಿ, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ.ಗೊಂಡಬಾಳ, ನೈಸರ್ಗಿಕ ಕೃಷಿಕರಾದ ಹನುಮಂತಪ್ಪ ಗೊಂದಿ, ಬಿಕೆಎಸ್ ಸಂಘಟನೆ ಪ್ರಾಂತ ಅಧ್ಯಕ್ಷ ವಿವೇಕ ಮೋರೆ, ಕೊಪ್ಪಳ ಬಿಕೆಎಸ್ ಸಂಘಟನೆ ಉಪಾಧ್ಯಕ್ಷ ವಿಜಯಕುಮಾರ ನಾಯ್ಕ, ಧಾರವಾಡ ಜಿಲ್ಲಾ ಬಿಕೆಎಸ್ ಸಂಘಟನೆ ಅಧ್ಯಕ್ಷ ಗುರುನಾಥಗೌಡ ಬಸನಗೌಡ್ರ, ಸದಸ್ಯರಾದ ಬಸಯ್ಯ ನಂದಿಕೋಲು, ವೀರಭದ್ರಪ್ಪ ಅರಕೇರಿ, ವಿರುಪಣ್ಣ ಯಲಬುರ್ತಿ, ಬಸಣ್ಣ ಯಲಬುರ್ತಿ, ಸುರೇಶ್ ಪಾಟೀಲ್, ಪುಷ್ಪಲತಾ ಏಳುಭಾವಿ, ಈರಮ್ಮ ಉಂಡಿ, ಬಿ.ಜಿ.ಕರಿಗಾರ, ದೊಡ್ಡಯ್ಯ ಈ.ಪಿ, ಉಮೇಶಪ್ಪ ಕರಮುಡಿ, ನಾಗರಾಜ ಹಿರೇಮಠ, ಭರಮಣ್ಣ ವಟಪರ್ವಿ, ರವಿ ಕಾಂತನವರ, ಶಾಂತಯ್ಯ ಅಂಗಡಿ, ಡಿ.ಎಂ.ಬಡಿಗೇರ, ಮಲ್ಲಿಕಾರ್ಜುನಗೌಡ ಪಾಟೀಲ್ ಪಾಲ್ಗೊಂಡರು.

# ರೆಡ್ಡಿ ನೀಚ ರಾಜಕೀಯ ಮಾಡ್ತಿದ್ದಾನೆ : ಭರತ್ ರೆಡ್ಡಿ

• **ಮಲ್ಲಮ್ಮ ನುಡಿ ವಾರ್ತೆ** ಬಳ್ಳಾರಿ. :

ಈ ಘಟನೆ ಬಗ್ಗೆ ನಗರ ಶಾಸಕ ನಾರಾ ಭರತ್ ರೆಡ್ಡಿ ಮಾಧ್ಯಮಗಳೊಂದಿಗೆ ಇಂದು ಮಾತನಾಡಿ, ಮಾಜಿ ಸಚಿವ ಜನಾರ್ದನ ರೆಡ್ಡಿ ನೀಚ ರಾಜಕೀಯ ಮಾಡ್ತಿದ್ದಾನೆ. ಅವರ ಮನೆಯ ಮುಂದೆ ಬ್ಯಾನರ್ ಹಾಕಿಲ್ಲ. ಅದು ಸಾರ್ವಜನಿಕ ಸ್ಥಳ.ಬೇಕೆಂದೇ ಜಗಳ ಮಾಡೋ ಉದ್ದೇಶ ದಿಂದ ತಮ್ಮ ಮನೆಯ ಮುಂದೆ ಬ್ಯಾನರ್ ಹಾಕಿತ್ತು ಎಂದು ರಂಪಾ ರಾಮಾಯಣ ಮಾಡ್ತಿದ್ದಾನೆ ಎಂದು ಹೇಳಿದ್ದಾರೆ.

ಇದರಲ್ಲಿ ಮಹರ್ಷಿ ವಾಲ್ಮೀಕಿ ಪುತ್ತಳಿ ಕಾರ್ಯಕ್ರಮ ನಿಲ್ಲಿಸುವ ಹುನ್ನಾರವಿದೆ. ಆದ್ರೆ ಯಾವುದೇ ಕಾರಣಕ್ಕೂ ಕಾರ್ಯಕ್ರಮ ನಿಲ್ಲೋದಿಲ್ಲ. ನಮ್ಮ ಕಾರ್ಯಕರ್ತನ ಸಾವಾಗಿದೆ. ಆ ನೋವಿನಲ್ಲಿ ಇದ್ದೇವೆ. ಅದ್ರೂ ವಾಲ್ಮೀಕಿ ಪುತ್ಥಳಿ ಉದ್ಘಾಟನೆ ಕಾರ್ಯಕ್ರಮ ನಿಲ್ಲೋದಿಲ್ಲ. ಅದ್ದೂರಿಯಾಗಿ ಮಾಡ್ತವೆ ಹೆಚ್ಚು ಹೆಚ್ಚು ಜನರು ಪಾಲ್ಗೊಳ್ಳಲು ಮನವಿ ಮಾಡುವೆ ಎಂದರು.

ನಿನ್ನೆ ನಡೆದ ಫೈರಿಂಗ್ ನಲ್ಲಿ ಮೃತ ರಾಜಶೇಖರ ರೆಡ್ಡಿಗೆ ಸರ್ಕಾರದಿಂದ, ಹಾಗು ವೈಯಕ್ತಿಕವಾಗಿ ಪರಿಹಾರ ಕೊಡ್ತವೆ.. ಆಂಧ್ರ ತೆಲಂಗಾಣ ಯಾವ ಕಡೆಯಿಂದಾದ್ರೂ ಜನರನ್ನು ಕರೆಸಲಿ ನಮ ಗೇನು ಅಗಲ್ಲ. ಜನಾರ್ದನ ರೆಡ್ಡಿ ದ್ವೇಷದ ರಾಜಕೀಯಕ್ಕೆ ಓರ್ವ ಬಲಿಯಾಗಿಯಾದ್ದಾನೆಂದು ಆರೋಪಿಸಿದ್ದಾರೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿಶೇಷ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಬಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾಸಿಂಧು ಪೋರ್ಟ್ಲ್‌ನ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯಭ್ಯರ್ಥಿಗಳು ಎನ್‌ಸಿಟಿಇಯಿಂದ ಮಾನ್ಯತೆ ಪಡೆದಿರುವ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿರುವ ಮುಸ್ಲಿಂ ಕ್ರಿಶ್ಚಿಯನ್, ಜೈನ್ ಸಿಖ್, ಬೌದ್ಧ್ ಹಾಗೂ ಪಾರ್ಸಿ ಸಮುದಾಯದ ವಿದ್ಯಾರ್ಥಿಗಳಿಗೆ 25,000 ರೂ.ಗಳ ವಿಶೇಷ ಪ್ರೋತ್ಸಾಹಧನ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರ ಜಮಾ ಮಾಡಲಾಗುವುದು.

ಈ ಬಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ವಿಳಾಸ: https://sevasindhu.karnataka.gov.in ನಲ್ಲಿ ಜನವರಿ 15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ: 8277799990 ಹಾಗೂ ಇಲಾಖಾ ವೆಬ್ ಸೈಟ್: https://dom.karnataka.gov.in ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುಸ್ತಕಗಳು ಆಯ್ಕೆಗಾಗಿ ಸಲ್ಲಿಸಲು ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಸಾರ್ವಜನಿಕ ಗ್ರಂಥಾಲಯ ಇಲಾಖೆಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ತಿಳಿಸಿದ್ದಾರೆ.

ಸಾಹಿತ್ಯ, ಮಕ್ಕಳ ಸಾಹಿತ್ಯ, ಕಲೆ ಮತ್ತು ವಿಜ್ಞಾನ ಪ್ರಕಾರಗಳ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸಬಹುದಾಗಿದೆ. ಪುಸ್ತಕಗಳು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿರುಬೇಕು. ಪುಸ್ತಕದ ತಾಂತ್ರಿಕ ಪುಟದಲ್ಲಿ ಅಥವಾ ಯಾವುದೇ ಪುಟಗಳಲ್ಲಿ ಮೊಹರು ಹಾಕಿರುವ, ಕೈಬರಹ ಹೊಂದಿರುವ, ಸ್ಟಿಕ್ಕರ್ ಅಂಟಿಸಿರುವ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಪುಸ್ತಕಗಳ ನೋಂದಣಿ ಕಾಯ್ದೆ ಅನ್ವಯ ಪ್ರಕಾಶಕರು 2025 ರಲ್ಲಿ ಮುದ್ರಿಸಿ ಪ್ರಕಟಿಸಿದ ಮೊದಲ ಆವೃತ್ತಿಯ ಪುಸ್ತಕಗಳ 3 ಪ್ರತಿಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಪಾರ್ಕ, ಬೆಂಗಳೂರು ಇಲ್ಲಿಗೆ ಸಲ್ಲಿಸಬೇಕು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಆಯ್ಕೆಗಾಗಿ ಸಲ್ಲಿಸಲಾದ 3 ಪ್ರತಿಗಳಲ್ಲಿ ಒಂದನ್ನು ಪರಿಗಣಿಸಲಾಗುತ್ತದೆ.

2025 ರಲ್ಲಿ ಕರ್ನಾಟಕದಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟಗೊಳ್ಳುವ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಪ್ರತಿ ಶೀರ್ಷಿಕೆ ಮೂರು ಪ್ರತಿಗಳನ್ನು ಮುಫತ್ತಾಗಿ 2026ರ ಜನವರಿ 31ರ ಸಂಜೆ 5.30 ರೊಳಗಾಗಿ ಸಲ್ಲಿಸಿ ನೋಂದಣಿ ಮಾಡಿಸಬೇಕು. ಸದರಿ ಪುಸ್ತಕಗಳನ್ನು ಮಾತ್ರ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಪರಿಗಣಿಸಲಾಗುತ್ತದೆ. ಅಂತಿಮ ದಿನಾಂಕದ ನಂತರ ನೋಂದಣಿಯಾಗುವ ಪುಸ್ತಕಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಹೊರರಾಜ್ಯಗಳಲ್ಲಿ 2025ರಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟವಾಗುವ ಆಂಗ್ಲ, ಹಿಂದಿ ಅಥವಾ ಯಾವುದೇ ಭಾಷೆಯ ಪುಸ್ತಕಗಳನ್ನು ಆಯಾ ರಾಜ್ಯ ಕೇಂದ್ರ ಗ್ರಂಥಾಲಯಗಳಲ್ಲಿ ಅಥವಾ ಕೇಂದ್ರ/ಆಯಾ ರಾಜ್ಯ ಸರ್ಕಾರಗಳಿಂದ ಅಧಿಸೂಚಿಸಲ್ಪಟ್ಟ ಅಧಿಕೃತ ಪುಸ್ತಕ ನೋಂದಣಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿ, ನೋಂದಣಿ ಪ್ರಮಾಣ ಪತ್ರದ ನಕಲು ಪತ್ರದ ಪ್ರತಿಯೊಂದಿಗೆ ಮತ್ತು ಸದರಿ ಪುಸ್ತಕದ ಒಂದು ಪ್ರತಿಯನ್ನು 2026ರ ಜನವರಿ 31 ರ ಸಂಜೆ 5.30 ಗಂಟೆಯೊಳಗಾಗಿ ಆಯ್ಕೆಗಾಗಿ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ.

2025ನೇ ವರ್ಷದಲ್ಲಿ ಪ್ರಕಟಗೊಂಡ ಪುಸ್ತಕಗಳ ಆಯ್ಕೆಗೆ ಪ್ರತ್ಯೇಕವಾಗಿ ಆಯುಕ್ತರ ಕಚೇರಿಯಲ್ಲಿ ಯಾವುದೇ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ಆಯ್ಕೆ ಸಮಿತಿಗೆ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲಿಚ್ಛಿಸುವ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಯವರು ನಿಗದಿತ ಅವಧಿಯೊಳಗೆ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಪುಸ್ತಕಗಳ ನೋಂದಣಿ ಅಧಿನಿಯಮದಡಿ ನಿಯಮಾನುಸಾರ ಪುಸ್ತಕಗಳನ್ನು ಸಲ್ಲಿಸಬೇಕು.

ನಿಬಂಧನೆಗಳು, ನೋಂದಣಿಗಾಗಿ ನಿಗದಿತ ಅರ್ಜಿ ನಮೂನೆ ಹಾಗೂ ಮತ್ತಿತರ ಮಾಹಿತಿಯನ್ನು ಇಲಾಖೆಯ ತಿತಿತಿ.ಜಠಿಟ.ಞಚಿಡಿಟಿಚಿಣಚಿಞಚಿ.ರಠತ.ಟಿ ವೆಬ್‌ಸೈಟ್‌ನ್ನು ಮತ್ತು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಉಪ ನಿರ್ದೇಶಕರು/ಮುಖ್ಯ ಗ್ರಂಥಾಲಯಾಧಿಕಾರಿಗಳ ಕಚೇರಿಯಿಂದ ಅಥವಾ ಕಲಬುರಗಿ ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-221543ಗೆ ಸಂಪರ್ಕಿಸಿ ಪಡೆಯಲು ಕೋರಲಾಗಿದೆ.

# ಬೆಳ್ಳಂಬೆಳಿಗ್ಗೆ ಬಾರ್ ಓಪನ್ ರೊಚ್ಚಿಗೆದ್ದ ಸಾರ್ವಜನಿಕರು



**ಪೀಣ್ಯ.ದಾಸರಹಳ್ಳಿ :** ದೊಡ್ಡಬಿದರಕಲ್ಲು ವಾರ್ಡ್ ನ ತಿಪ್ಪೇನಹಳ್ಳಿ ಮುಖ್ಯರಸ್ತೆಯ ಕಾಟಮರಾಯನಗುಡಿ ಸಮೀಪದ ಬೃಂದಾವನನಗರ ಫೇಸ್-2 ಬಡಾವಣೆಯ ಜನವಸತಿ ಪ್ರದೇಶದಲ್ಲಿ ಬಾರ್ ಓಪನ್ ಮಾಡುತ್ತಿರುವುದನ್ನು ವಿರೋಧಿಸಿ ಈ ಹಿಂದೆ ಹಲವಾರು ಭಾರಿ ಪ್ರತಿಭಟನೆ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿ ಬಾರ್ ಓಪನ್ ಮಾಡದಂತೆ ತಡೆಯಲಾಗಿತ್ತು.

ಇಂದು ಬೆಳ್ಳಂಬೆಳಿಗ್ಗೆ ಬಾರ್ ಓಪನ್ ಮಾಡಲು ಬಂದವರನ್ನು ಬಾಗಿಲು ತೆಗಿಯಲು ಬಿಡದೆ ರೊಚ್ಚಿಗೆದ್ದ ನಾರಿಯರು ಮಾಲೀಕರಿಗೆ ಪೊರಕೆ ಸೇವೆಗೆ ಮುಂದಾದ ಘಟನೆ ನಡೆದು ಬಾರ್ ಮಾಲೀಕ ಸ್ಥಳದಿಂದ ಕಾಲ್ಕಿತ್ತ ಘಟನೆ ನಡೆಯಿತು. ಶಾಮಿಯಾನ ಹಾಕಿ ಮಹಾತ್ಮಗಾಂಧಿ ಹಾಗೂ ಅಂಬೇಡ್ಕರ್ ಪೋಟೋ ಇಟ್ಟುಕೊಂಡು ಪೊರಕೆ ಸಮೇತ ನೂರಾರು ಮಹಿಳೆಯರು ಪ್ರತಿಭಟನೆಗೆ ಕುಳಿತುಕೊಂಡಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಠಿಯಾಗಿ ಪೋಲೀಸ್ ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಸ್ಥಿತಿ ತಿಳಿಗೊಳಿಸಿದರು.

ಸ್ಥಳೀಯ ನಿವಾಸಿ ಮಂಜುಳಾ ಮಾತನಾಡಿ, 'ಪಿಜಿ ಅಂಥ ಸುಳ್ಳು ಹೇಳಿ ಬಾರ್ ಆರಂಭ ಮಾಡಲು ಮುಂದಾಗಿದ್ದ ಬಾರ್ ಮಾಲೀಕರಿಗೆ ಈಗ ಪೊರಕೆ ಸೇವೆ ಮಾಡುವ ಮೂಲಕ ಬಿಸಿ ಮುಟ್ಟಿಸಿದ್ದೇವೆ. ಬಾರ್ ಶಾಶ್ವತವಾಗಿ ಕ್ಲೋಸ್ ಆಗುವವರೆಗೂ ಪ್ರತಿಭಟನೆ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಬಾರ್ ಓಪನ್ ಮಾಡಲು ಬಿಡುವುದಿಲ್ಲ', ಎಂದು ಬಾರ್ ಮಾಲೀಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಸ್ಥಳೀಯ ನಿವಾಸಿ ಚಂದ್ರಿಕಾ, 'ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳಿವೆ. ಇಲ್ಲಿ ಬಾರ್ ಓಪನ್ ಮಾಡುವುದರಿಂದ ರಸ್ತೆಯಲ್ಲಿ ಓಡಾಡುವ ಸಭ್ಯ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಪದೇಪದೇ ಬಾರ್ ಮಾಲೀಕರ ಹಾಗೂ ಕಟ್ಟಡ ಮಾಲೀಕರ ಗಮನಕ್ಕೆ ತಂದರೂ ಅದ್ಯಾವುದನ್ನು ಲೆಕ್ಕಿಸದೆ ಮೊಂಡುತನ ಪ್ರದರ್ಶಿಸುತ್ತಿರುವ ಬಾರ್ ಮಾಲೀಕರಿಗೆ ತಕ್ಕ ಬುದ್ದಿ ಕಲಿಸದೆ ಬಿಡುವುದಿಲ್ಲ. ಲಂಚದ ಹಣಕ್ಕೆ ಕೈಚಾಚಿ ಕಾನೂನುಬಾಹಿರವಾಗಿ ನಡೆದುಕೊಳ್ಳುತ್ತಿರುವ ಅಬಕಾರಿ ಅಧಿಕಾರಿಗಳು ತಮ್ಮ ಮನೆಯಲ್ಲೂ ಹೆಣ್ಣು ಮಕ್ಕಳಿದ್ದಾರೆ ಎನ್ನುವುದನ್ನು ಮರೆಯಬಾರದು', ಎಂದು ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದರು.

ತಿಪ್ಪೇನಹಳ್ಳಿ ನಿವಾಸಿ ನಟರಾಜು ಮಾತನಾಡಿ, 'ವಿಶ್ವನಾಥ್ ಎಂಬ ಕಟ್ಟಡದ ಮಾಲೀಕ ನಮ್ಮ ಬಳಿ ಪಿಜಿ ಮಾಡ್ತೀವಿ ಅಂಥ ಸುಳ್ಳು ಹೇಳಿ ಪಿಜಿ ಬೋರ್ಡ್ ಹಾಕಿಕೊಂಡು ಕದ್ದು ಮುಚ್ಚಿ ಒಳಗೊಳಗೆ ಕುತಂತ್ರದಿಂದ ಬಾರ್ ಓಪನ್ ಮಾಡಿದ್ದಾರೆ. ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಪಕ್ಕದ ಕಟ್ಟಡ ಮಾಲೀಕರು ಪ್ರಧಾನಿವರೆಗೂ ಪತ್ರ ಬರೆದು ದೂರು ನೀಡಿದರೂ ಅಬಕಾರಿ ಅಧಿಕಾರಿಗಳು ಅದ್ಯಾವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಬಾರಿಗೆ ಲೈಸನ್ಸ್ ನೀಡಿದ್ದಾರೆ. ಬಾರ್ ಮಾಲೀಕ ಕೋಟ್ಯಂತರ ಹಣ ಖರ್ಚು ಮಾಡಿ ಅಧಿಕಾರಿಗಳಿಗೆ ಲಂಚ ಕೊಟ್ಟು ತಿಪ್ಪೇನಹಳ್ಳಿ ಜನರ ನೆಮ್ಮದಿ ಹಾಳು ಮಾಡಲಿಕ್ಕೆ ಬಂದಿದ್ದಾನೆ. ಮತ್ತೆ ಏನಾದರೂ ಬಾರ್ ಓಪನ್ ಮಾಡಿದರೆ ನಾವು ಕಟ್ಟಡದ ಪೈಪಿಗೆ ನೇಣು ಹಾಕಿಕೊಂಡು ಸಾಯುತ್ತೇವೆ', ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಬಡಾವಣೆಯ ನಿವಾಸಿಗಳಾದ ಟ್ರಾವೆಲ್ಸ್ ಮಂಜುನಾಥ್, ವಾಸು, ವಿಜಯ್ ಕುಮಾರ್, ಮಹೇಶ್ ಕುಮಾರ್, ಶ್ರೀನಿವಾಸ್ ಮೂರ್ತಿ, ನಟರಾಜ್, ವೆಂಕಟಾಚಲ, ಗಜೇಂದ್ರ, ಚಂದ್ರಣ್ಣ, ಕುಮಾರ್, ಜಗದೀಶ್, ಸುರೇಶ್, ಬಿ ಮಂಜುನಾಥ್, ಲೋಕೇಶ್, ದಿಗ್ವಿಜಯ್ ಸಿಂಗ್, ಟಿ.ಎನ್ ನಾಗರಾಜು, ಸೇರಿದಂತೆ ತಿಪ್ಪೇನಹಳ್ಳಿಯ ಬಡಾವಣೆಯ ನಿವಾಸಿಗಳು, ಮಹಿಳೆಯರು, ಸ್ಥಳೀಯರು ಉಪಸ್ಥಿತರಿದ್ದು ಅಧಿಕಾರಿಗಳು, ಕಟ್ಟಡದ ಮಾಲೀಕರು ಹಾಗೂ ಬಾರ್ ಮಾಲೀಕರ ವಿರುದ್ಧ ಪ್ರತಿಭಟಿಸಿದರು.

# ಸಚಿವರಿಂದ ದಿನದರ್ಶಿಕೆ ಬಿಡುಗಡೆ



**ಬೀದರ್:** ತಾಲ್ಲೂಕಿನ ನಾಗೋರಾ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನರಸಪ್ಪ ಜಾನಕನೋರ ಹೊರ ತಂದಿರುವ 2026ನೇ ಸಾಲಿನ ದಿನದರ್ಶಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ನರಸಪ್ಪ ಅವರಿಗೆ ರಾಜಕೀಯದಲ್ಲಿ ಉತ್ತಮ ಭವಿಷ್ಯವಿದೆ ಎಂದು ಹೇಳಿದರು. ನರಸಪ್ಪ ಜಾನಕನೋರ, ಮುಖಂಡರಾದ ಗೋವರ್ಧನ್ ರಾಠೋಡ್, ಅರುಣ್ ಮೇತ್ರೆ, ಬಾಬು ಟೈಗರ್ ಮತ್ತಿತರರು ಇದ್ದರು.

# ನೂತನ ಕ್ಯಾಲೆಂಡರ್ ಬಿಡುಗಡೆ



**ಹುಣಸೂರು:** ಪತ್ರಕರ್ತರು ಸಮಾಜದ ತಪ್ಪುಗಳನ್ನು ತಿದ್ದುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಉದ್ಯಮಿ ನಾಡಪ್ಪನಹಳ್ಳಿ ರಾಜು ತಿಳಿಸಿದರು. ತಾಲೂಕು ಪತ್ರಕರ್ತರ ಸಂಘದಿಂದ ನಗರದ ತಾ.ಪಂ.ಸಭಾಂಗಣದಲ್ಲಿ ಆಯೋಜಿಸಿದ್ದ 2026 ನೇ ಸಾಲಿನ ದಿನಚರಿ ಪುಸ್ತಕ ಹಾಗೂ ನೂತನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ದಿನಚರಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದರು. ನಿತ್ಯ ಜೀವನದಲ್ಲಿ ಸಮಾಜದ ಬೆಳವಣಿಗೆಗೆ ಪೂರಕವಾಗಿ ಪತ್ರಿಕೆಗಳು ಮತ್ತು ಪತ್ರಕರ್ತರು ಶ್ರಮಿಸುತ್ತಿದ್ದಾರೆ. ಪತ್ರಕರ್ತರಿಗೆ ಎರಡು ವರ್ಷದಿಂದ ದಿನಚರಿ ಪುಸ್ತಕವನ್ನು ನೀಡುತ್ತ ಬಂದಿದ್ದೇನೆ, ನಮ್ಮ ದುಡಿಮೆಯ ಸ್ವಲ್ಪ ಭಾಗವನ್ನು ಸಮಾಜದ ಕಾರ್ಯಕ್ಕೆ ನೀಡಬೇಕು, ಆದ್ದರಿಂದ ಸಮಾಜದ ಒಳಿತಿಗಾಗಿ ಸದಾ ನಿಲ್ಲುವ ಪತ್ರಕರ್ತರ ಸಹಾಯಕ್ಕಾಗಿ ಮುಂದಿನ ದಿನಗಳಲ್ಲೂ ಸದಾ ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು. ಉದ್ಯಮಿ ತರಿಕಲ್ ರಾಜು ಮಾತನಾಡಿ, ಪತ್ರಕರ್ತರು ಹಗಲು ಇರುಳೆನ್ನದೆ ತಮ್ಮ ಉಡೀ ಬದುಕನ್ನು ಸಮಾಜ ಮುಖಿಯಾಗಿ ಕೆಲಸ ಮಾಡುತ್ತಿದ್ದು, ನಾಲ್ಕನೇ ಅಂಗವಾಗಿ ಶ್ರಮಿಸುತ್ತಿದ್ದು. ಪತ್ರಕರ್ತರ ಜೀವನ ಕೂಡ ಸಂಕಷ್ಟದ ಹಾದಿಯಲ್ಲಿದ್ದು, ಸರಕಾರ ನಿಮ್ಮನ್ನು ಗುರುತ್ತಿಸಿ ಆರ್ಥಿಕ ಸಹಕಾರದ ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ. ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ. ಧರ್ಮಾಪುರ ನಾರಾಯಣ ಹೆಚ್.ಆರ್. ಜಗದೀಶ್ ದಿನದರ್ಶಿಕೆ ಬಿಡುಗಡೆಗೊಳಿಸಿದರು. ತರಿಕಲ್ಲು ರಾಜು ಪತ್ರಕರ್ತರಿಗೆ ಉಡುಗೊರೆಯನ್ನು ನೀಡಿದರು. ಕಾರ್ಯನಿರ್ವಹಣಾಧಿಕಾರಿ ಹೊಂಗಯ್ಯ ಮಾತನಾಡಿದರು. , ಮೈ.ಜಿ. ಮಾ.ಪ್ರ. ಕಾ ಸುಬ್ರಹ್ಮಣ್ಯ, ಗ್ರಾಮಾಂತರ ಕಾರ್ಯದರ್ಶಿ ದಾ.ರಾ.ಮಹೇಶ್, ಕಾರ್ಯಕಾರಿ ಸಮಿತಿ ಸದಸ್ಯ ಹನಗೋಡು ನಟರಾಜ್, ತಾ.ಪಂ.ಮಾ.ಸದಸ್ಯ ಅಜ್ಗರ್ ಪಾಷ, ಸಂಘದ ಉಪಾಧ್ಯಕ್ಷ ಚಲುವರಾಜು, ಪ್ರಧಾನ ಕಾರ್ಯದರ್ಶಿ ಎನ್.ಕೆ.ಮಹದೇವ್, ಖಜಾಂಚಿ ಯೋಗೇಶ್, ಪತ್ರಕರ್ತರಾದ ಸಚ್ಚಿತ್, ಶಿವಕುಮಾರ್, ಸಂಪತ್ ಕುಮಾರ್, ಹೆಚ್.ಕೆ.ಕೃಷ್ಣ, ಪ್ರತಾಪ್, ನಂಜಾಪುರ ಮನುಕುಮಾರ್, ಯೋಗನಂದ್, ಗುರುಸ್ವಾಮಿ, ಸೇರಿದಂತೆ ಆನೇಕರು ಹಾಜರಿದ್ದರು.

# ನಿಸ್ವಾರ್ಥದಿಂದ ಜನ ಸೇವೆ ಮಾಡಬೇಕು: ಪಾಟೀಲ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**





ಜನಪ್ರತಿನಿಧಿಗಳು ನಿಸ್ವಾರ್ಥದಿಂದ ಜನರ ಸೇವೆ ಮಾಡಿದರೆ ಅವರು ನಮಗೆ ಯಾವಾಗಲೂ ಆಶೀರ್ವಾದ ಮಾಡುತ್ತಾರೆ. ಹಾಗಾಗಿ ನಮ್ಮ ಸೇವೆ ಯಾವಾಗಲೂ ಜನಪರವಾಗಿರಬೇಕೆಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಡಿ.ಆರ್. ಪಾಟೀಲ್ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಕೊಪ್ಪಳ ಜಿಲ್ಲಾ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯ ಜಿಲ್ಲಾ ಮಟ್ಟದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ನಾಯಕರಾದವರು ಮೊದಲು ಅವಕಾಶ ವಂಚಿತರಿಗೆ ಅನುಕೂಲ ಮಾಡಿಕೊಡಬೇಕು. ತಾವು ಕುರ್ಚಿಯಲ್ಲಿ ಕುಳಿತ ಮೇಲೆ ಜನರ ಸಮಸ್ಯೆಗಳಿಗೆ ಪರಿಹಾರ ನೀಡದಿದ್ದರೆ ಜಾತ್ರೆಯಲ್ಲಿ ದೇವರು ಕೂಡಿಸಿ ಮೆರೆಸಿದಂತಾಗುತ್ತದೆ. ತಮ್ಮಿಂದ ಸಮಾಜದಲ್ಲಿ ಪರಿವರ್ತನೆಯಾಗಬೇಕು. ಗ್ರಾಮ ಪಂಚಾಯತಿ, ತಾಲ್ಲೂಕು, ಜಿಲ್ಲಾ ಪಂಚಾಯತ ಹಾಗೂ ನಗರಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಗಳು ಸೇರಿದರೆ ದೇಶದಲ್ಲಿ ತಾವು 32 ಲಕ್ಷ ಆಗುತ್ತೀರ. ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡಲು ದುಡ್ಡೆ ಬೇಕಿಲ್ಲ ಜನರ ಪ್ರೀತಿ ವಿಶ್ವಾಸ ಗಳಿಸುವ ಮೂಲಕ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದು ಎಂದು ಜನಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.

ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಮಾತನಾಡಿ, ಅಧಿಕಾರ ವಿಕೇಂದ್ರೀಕರಣದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಿಂತ್ತಲೂ ಪೂರ್ವದಲ್ಲಿ ರಾಮಕೃಷ್ಣ ಹೆಗಡೆ ಯವರು ಮುಖ್ಯಮಂತ್ರಿ ಮತ್ತು ನಜೀರ್ ಸಾಹೇಬರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ನಮ್ಮ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿತ್ತು. ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ದಿ. ರಾಜೀವ್ ಗಾಂಧಿಯವರು ಸಂವಿಧಾನದಲ್ಲಿ ತಿದ್ದುಪಡಿ ತಂದು ಈ ವ್ಯವಸ್ಥೆಯನ್ನು ದೇಶಾದ್ಯಂತ ವಿಸ್ತರಿಸಿದರು. ಅದರ ನಂತರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತ್ರಿ ಟಯರ್ ಸಿಸ್ಟಮ್ ಪ್ರಕಾರದಲ್ಲಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ವ್ಯವಸ್ಥೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದರ ಮುಖ್ಯ ಉದ್ದೇಶ, ಗ್ರಾ.ಪಂ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿ, ಅನುದಾನವನ್ನು ಜನರಿಗೆ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಯೋಜನೆ ಮಾಡುವಂತಹ ಸ್ವಯತ್ತತೆ ನೀಡುವುದು ಮತ್ತು ಯೋಜನೆಯನ್ನು ರೂಪಿಸಿ, ಅನುಷ್ಠಾನ ಮಾಡುವ ಜವಾಬ್ದಾರಿಯನ್ನು ಸ್ಥಳೀಯವಾಗಿ ಆಯ್ಕೆಯಾದ ಜನಪ್ರತಿನಿಧಿಗಳು ಮಾಡಲಿ ಎಂಬುವುದಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಮಾತನಾಡಿ, ಕೊಪ್ಪಳ ಜಿಲ್ಲಾ ಯೋಜನೆ ಸಮಿತಿ ರಚನೆಗಾಗಿ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಚುನಾವಣೆ ನಡೆಯುತ್ತಿದೆ. ಗ್ರಾಮ ಸ್ವ-ರಾಜ್‌ಗಾಗಿ ಜಿಲ್ಲಾ ಮಟ್ಟದಲ್ಲಿ ಯೋಜನಾ ವರದಿ ಸಲ್ಲಿಕೆ ಮಾತ್ರ ಆಗಲಿದೆ. ಇದರ ಎಲ್ಲಾ ಕೆಲಸಗಳು ಗ್ರಾಮ ಸಭೆಯಲ್ಲಿಯೇ ಆಗಲಿವೆ. ಮಹಾತ್ಮ ಗಾಂಧಿಜೀಯವರ ಗ್ರಾಮ ಸ್ವರಾಜ್ಯದ ಕನಸನ್ನು ಅನುಷ್ಠಾನ ಮಾಡಲು ಗ್ರಾಮಸಭೆಗಳು ಸರಿಯಾದ ರೀತಿಯಲ್ಲಾಗಬೇಕು. ಇದರ ಜೊತೆಗೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಪ್ರತಿ ತಿಂಗಳು ಶ್ರಮದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದರು.

ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಶಿವರಾಜ, ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ರಾಜ್ಯ ಒಕ್ಕೂಟದ ಅಧ್ಯಕ್ಷರಾದ ಸತೀಶ್, ಪ್ರೋ. ಪ್ರಸನ್ನಮೂರ್ತಿ, ಬ್ರಹ್ಮಕುಮಾರಿ ಯೋಗಿನಿ ಅಕ್ಕನವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಸಭೆಯಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ ಸೇರಿದಂತೆ ಇತರೆ ವಿವಿಧ ಇಲಾಖೆಗಳ ಜಿಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯ 153 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರು, 9 ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರುಗಳು, ಆಡಳಿತಾಧಿಕಾರಿಗಳು, ಜಿಲ್ಲೆಯ ಎಲ್ಲಾ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಯೋಜನಾಧಿಕಾರಿಗಳು, ಯೋಜನಾ ನಿರ್ದೇಶಕರು, ನಗರಸಭೆ ಪೌರಾಯುಕ್ತರು, ಪುರಸಭೆ ಹಾಗೂ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.









Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)